22 November 2025 Saturday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ತಮ್ಮ ತಪ್ಪುಗಳ ಬಗ್ಗೆ ಸರಿಯಾಗಿ ಅರಿವಿದ್ದವರು ಇತರರ ತಪ್ಪುಗಳನ್ನು ಕೂಡ ಬೇಗ ಕ್ಷಮಿಸುವ ವಿಶಾಲ ಮನೋಭಾವದವರು!

*ಸ್ನೇಹಾ ಆನಂದ್*

**ಒಂದೊಳ್ಳೆ ಮಾತು**

ಸೋಲಿಗೆ ಭಯಬೇಡ
ಅದು ಸಹಜ ಅಡೆತಡೆ ಅಷ್ಟೇ
ಪರಿಶ್ರಮ ಗೆದ್ದೇ ಗೆಲ್ಲುತ್ತೇನೆ
ಎಂಬ ಭರವಸೆಯೇ
ಒಂದು ದಿನ ನಮ್ಮನ್ನು
ಗೆಲ್ಲಿಸುತ್ತದೆ

*ಮೈಲಾರ ಸಾವಿತ್ರಿಬಾಯಿ*

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 38 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಇನ್ನೂ ಎರಡು ಬಜೆಟ್ ಮಂಡನೆ

### ಐದು ವರ್ಷ ನಾನೇ ಸಿಎಂ | ವಿರೋಧಿ ಬಣಕ್ಕೆ ಸಿದ್ದರಾಮಯ್ಯ ತಿರುಗೇಟು



**ಮೈಸೂರು:** ಐದು ವರ್ಷವೂ ನಾನೇ ಸಿಎಂ ಆಗಿ ಮುಂದುವರಿಯುತ್ತೇನೆ. ಇನ್ನೂ ಎರಡು ಬಜೆಟ್ ಮಂಡಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರೋಧಿ ಬಣಕ್ಕೆ ತಿರುಗೇಟು ನೀಡಿದ್ದಾರೆ.

ನಗರದಲ್ಲಿ ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಸಿಎಂ, ನಿಮಗೆ ಯಾಕೆ ಅನುಮಾನ? ಯಾಕೆ ಮತ್ತೆ ಮತ್ತೆ ಅದೇ ಪ್ರಶ್ನೆ ಕೇಳುತ್ತೀರಾ? ಹೈಕಮಾಂಡ್ ನಾಯಕತ್ವ ಬದಲಾವಣೆ ಬಗ್ಗೆ ಮಾತನಾಡಿದೆಯಾ? ನಾಯಕತ್ವ ಬದಲಾವಣೆ ಅಥವಾ ಸಂಪುಟ ಪುನಾರಚನೆ ಎಲ್ಲವನ್ನು ತೀರ್ಮಾನ ಮಾಡುವುದು ಹೈಕಮಾಂಡ್. ಈ ಬಗ್ಗೆ ಹೈಕಮಾಂಡ್ ಇಲ್ಲಿಯವರೆಗೆ ಏನಾದರು ಮಾತನಾಡಿದೆಯಾ? ಇಲ್ಲ ತಾನೇ, ಹಾಗಾದರೆ ಮತೆ ಯಾಕೆ ಆ ಪ್ರಶ್ನೆ. ಹೈಕಮಾಂಡ್ ಹೇಳುವುದನ್ನ ನಾನು, ಶಾಸಕರು ಪಾಲಿಸಬೇಕು ಎಂದು ಸಿದ್ದರಾಮಯ್ಯ ಗರಂ ಆಗಿ ಪ್ರತಿಕ್ರಿಯೆ ನೀಡಿದರು.

ದೆಹಲಿಗೆ ಹೋಗಿರುವ ಸಚಿವ ಚಲುವರಾಯಸ್ವಾಮಿ ಜೊತೆ ನಾನೇ ಮಾತಾಡಿದ್ದೇನೆ. ಇಲಾಖೆ ಕೆಲಸದ ಹಿನ್ನೆಲೆಯಲ್ಲಿ ಹೋಗಿದ್ದೇನೆ ಎಂದು ಚಲುವರಾಯಸ್ವಾಮಿ ಹೇಳಿದ್ದಾರೆ. ಶಾಸಕರು, ಸಚಿವರು ದೆಹಲಿಗೆ ಹೋಗಬಾರದೇ? ಶಾಸಕರು ದೆಹಲಿಗೆ ಹೋಗಿರುವ ಬಗ್ಗೆ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ. ಮತ್ತೆ ನಾನು ಯಾಕೆ ಈ ಬಗ್ಗೆ ವಿವರಣೆ ಕೊಡಲಿ ಎಂದು ತಿಳಿಸಿದರು.

ಇನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡುತ್ತೀರಾ ಎಂಬ ಪ್ರಶ್ನೆಗೆ, ಮಲ್ಲಿಕಾರ್ಜುನ ಖರ್ಗೆ ಅವರು ಶನಿವಾರ ಬೆಂಗಳೂರಿಗೆ ಆಗಮಿಸಲಿದ್ದಾರೆ. ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸುತ್ತೇನೆ ಎಂದರು.

ಶಾಸಕರು ಹೇಳಿಕೆ ಕೊಡುತ್ತಿರುವುದು ಗೊಂದಲಕ್ಕೆ ಕಾರಣವಾಗುತ್ತಿದೆ ಎಂಬ ವಿಚಾರವಾಗಿ, ಅದಕ್ಕೆ ಹೈಕಮಾಂಡ್ ಸೂಚನೆ ನೀಡಲಿದೆ. ಹೈಕಮಾಂಡ್ ಸೂಚನೆಯನ್ನು ನಾನು ಆದಿಯಾಗಿ ಎಲ್ಲರೂ ಪಾಲನೆ ಮಾಡಬೇಕು ಎಂದು ಹೇಳಿದರು.

### ಹೌದು, ನಾನು ಕೊಟ್ಟ ಮಾತಿನಂತೆ ನಡೆದಿದ್ದೇನೆ!

**ಸಿದ್ದರಾಮಯ್ಯ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಾರೆ ಎಂಬ ಡಿ.ಕೆ ಸುರೇಶ್ ಹೇಳಿಕೆ ವಿಚಾರವಾಗಿ ಮಾತನಾಡಿ, ಹೌದು, ನಾನು ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತೇನೆ. ಕೊಟ್ಟ ಮಾತಿನಂತೆ ಗ್ಯಾರಂಟಿ ಜಾರಿ ಮಾಡಿದ್ದೇನೆ. ಜನರಿಗೆ ಕೊಟ್ಟ ಆಶ್ವಾಸನೆ ಈಡೇರಿಸಿದ್ದೇನೆ ಎಂದು ಡಿಕೆ ಬ್ರದರ್ಸ್‌ಗೆ ಪರೋಕ್ಷವಾಗಿ ಸಿದ್ದರಾಮಯ್ಯ ತಿರುಗೇಟು ನೀಡಿದರು.**

## ಜಾಗತಿಕ ಭ್ರಷ್ಟಾಚಾರ ಕೇಂದ್ರ: ಬಿ.ವೈ.ವಿಜಯೇಂದ್ರ ವಾಗ್ದಾಳಿ



**ಬೆಂಗಳೂರು:** ಒಂದು ಕಾಲದಲ್ಲಿ ಬೆಂಗಳೂರು 'ಜಾಗತಿಕ ಸಾಮರ್ಥ್ಯ ಕೇಂದ್ರ'ಗಳ (ಜಿಸಿಸಿ) ಪೈಕಿ ಮುಂಚೂಣಿಯಲ್ಲಿತ್ತು. ಆದರೆ ಕಾಂಗ್ರೆಸ್ ಸರ್ಕಾರ ಬಂದ ಬಳಿಕ ಬೆಂಗಳೂರು 'ಜಾಗತಿಕ ಭ್ರಷ್ಟಾಚಾರ ಕೇಂದ್ರ'ಗಳಲ್ಲಿ ಮುನ್ನಡೆಯಲ್ಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು.

ಭಾರತದ ಜಾಗತಿಕ ಸಾಮರ್ಥ್ಯ ಕೇಂದ್ರಗಳ (ಜಿಸಿಸಿ) ಪಟ್ಟಿಯಲ್ಲಿ ಬೆಂಗಳೂರನ್ನು ಹಿಂದಿಕ್ಕಿರುವ ಹೈದರಾಬಾದ್ ಅಗ್ರಸ್ಥಾನಕ್ಕೇರಿದೆ ಎಂಬ ವರದಿಯನ್ನು ಹಂಚಿಕೊಂಡಿರುವ ವಿಜಯೇಂದ್ರ, ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ರಾಜ್ಯದ ಪ್ರತಿಯೊಂದು ಇಲಾಖೆ, ಸಚಿವಾಲಯ ಭ್ರಷ್ಟಾಚಾರದಿಂದ ತುಂಬಿಕೊಂಡಿದೆ. ಗುಂಡಿ ಮುಚ್ಚುವ ಕಾರ್ಯ, ಕಸ ಗುಡಿಸುವ ಯಂತ್ರಗಳಲ್ಲಿ 600 ಕೋಟಿ ಹಗರಣ ನಡೆದಿದೆ ಎಂದು ಆರೋಪಿಸಿದ್ದಾರೆ.

## ಯಾವುದೇ ಬಣದ ನಾಯಕನಲ್ಲ!

### ಶಾಸಕರು ಸಚಿವ ಸ್ಥಾನಕ್ಕಾಗಿ ದೆಹಲಿಗೆ ಹೋಗಿರಬಹುದು: ಡಿಕೆಶಿ



**ಬೆಂಗಳೂರು:** ನನ್ನ ರಕ್ತದಲ್ಲೇ ಗುಂಪುಗಾರಿಕೆ ಇಲ್ಲ. ನಾನು ಯಾವುದೇ ಬಣದ ನಾಯಕ ಅಲ್ಲ. ನಾನು 140 ಶಾಸಕರ ಅಧ್ಯಕ್ಷ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ಹೇಳಿದರು.

ಡಿ.ಕೆ.ಶಿವಕುಮಾರ್ ಬಣದವರು ಎನ್ನಲಾದ ಕೆಲವು ಶಾಸಕರು ದೆಹಲಿಗೆ ಹೋಗಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿರುವ ಹಿನ್ನೆಲೆಯಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಸಂಪುಟ ಪುನಾರಚನೆಯ ಬಗ್ಗೆ ಮುಖ್ಯಮಂತ್ರಿ ಹೇಳಿದ್ದರು. ಈ ಕಾರಣಕ್ಕೆ ಕೆಲವು ಶಾಸಕರು ಮಂತ್ರಿ ಸ್ಥಾನ ಕೇಳಲು ದೆಹಲಿಗೆ ಹೋಗಿರಬಹುದು ಎಂದರು.

ಶಾಸಕರು ಮಂತ್ರಿ ಸ್ಥಾನಕ್ಕೆ ಬೇಡಿಕೆ ಇಡುವುದು ಸಾಮಾನ್ಯ. ಈ ಕಾರಣಕ್ಕೆ ಅವರು ದೆಹಲಿಗೆ ಹೋಗಿರಬಹುದು. ಹೈಕಮಾಂಡ್ ನಾಯಕರನ್ನು ಭೇಟಿಯಾಗಲು ಹೋದರೆ ತಪ್ಪೇನು? ಈ ಹಿಂದೆ ಕೆಲ ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ದೆಹಲಿಗೆ ಹೋಗಿದ್ದಾರೆ. ನಾನು ಯಾರನ್ನು ದೆಹಲಿಗೆ ಕರೆದುಕೊಂಡು ಹೋಗಿಲ್ಲ ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ಹೈಕಮಾಂಡ್ ಹೇಳಿದಂತೆ ಕೇಳುತ್ತಾರೆ. ಮುಖ್ಯಮಂತ್ರಿಗಳು ಅವರ ವಿಚಾರಧಾರೆಯನ್ನು ಹೇಳಿದ್ದಾರೆ. ನಾನೇ 5 ವರ್ಷ ಸಿಎಂ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಅವರಿಗೆ ಆಲ್ ದಿ ಬೆಸ್ಟ್. ನಾವೆಲ್ಲರೂ ಅವರೊಂದಿಗೆ ಒಗ್ಗಟ್ಟಾಗಿ ಕೆಲಸ ಮಾಡುತ್ತೇವೆ ಎಂದು ಮಾರ್ಮಿಕವಾಗಿ ಹೇಳಿದರು.

### ಸಿಎಂಗೆ ಆಲ್ ದಿ ಬೆಸ್ಟ್!

**ಬೆಂಗಳೂರು:** ಒಂದು ಪಕ್ಷದ ಶಾಸಕರು, ಮಂತ್ರಿ, ಮುಖ್ಯಮಂತ್ರಿ ಆಗಲು ಅರ್ಹರಿರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಐದು ವರ್ಷ ತಾವೇ ಸಿಎಂ ಆಗಿ ಇರುವುದಾಗಿ ಹೇಳಿದ್ದಾರೆ. ಐ ವಿಶ್ ಹಿಮ್ ಆಲ್ ದ ಬೆಸ್ಟ್ (ಅವರಿಗೆ ಶುಭ ಕೋರುತ್ತೇನೆ) ಎಂದು ಡಿಕೆಶಿ ಹೇಳಿದರು.

ಯಾರೇ ಆದರೂ ಆಡಿದ ಮಾತು ಮುಖ್ಯ ಅಲ್ಲವೇ ಎಂಬ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಡಿ.ಕೆ.ಶಿವಕುಮಾರ್ ಅವರು, ಸಿಎಂ ತಮ್ಮ ವಿಚಾರಧಾರೆ ಹೇಳಿದ್ದಾರೆ. ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ನಾನುಂಟು ಹೈಕಮಾಂಡ್ ಉಂಟು. ಹೈಕಮಾಂಡ್ ಹೇಳಿದಂತೆ ಕೇಳುವುದಾಗಿ ಸಿಎಂ ಹೇಳಿದ್ದಾರೆ. ನಾನೂ ಹೇಳಿದ್ದೇನೆ. ಅದಕ್ಕೆ ನಾವು ಬದ್ಧ. ಅಷ್ಟು ಬಿಟ್ಟರೆ ಬೇರೇನೂ ಇಲ್ಲ ಎಂದರು.

ಸತೀಶ್ ಜಾರಕಿಹೊಳಿ ಅವರು ಡಿನ್ನರ್ ಸಭೆ ಮಾಡಿರುವ ಬಗ್ಗೆ ಕೇಳಿದಾಗ, ನನಗೆ ಡಿನ್ನರ್ ಸಭೆಗಳ ಬಗ್ಗೆ ಪುಟ 2ಕ್ಕೆ

## ತೇಜಸ್ ಯುದ್ಧ ವಿಮಾನ ಪತನ ದುಬೈ ಏರ್ ಶೋ ವೇಳೆ ದುರಂತ



**ದುಬೈ:** ದುಬೈ ಏರ್ ಶೋ ವೇಳೆ ಶುಕ್ರವಾರ ಮಧ್ಯಾಹ್ನ ಭಾರತದ ತೇಜಸ್ ಯುದ್ಧ ವಿಮಾನ ಪತನಗೊಂಡಿದೆ.

ಅಲ್ ಮಕ್ತೌಮ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಹಾರಾಟ ನಡೆಸುತ್ತಿದ್ದ ವಿಮಾನ ನೋಡನೋಡುತ್ತಿದ್ದಂತೆಯೇ ಬೆಂಕಿಯುಂಡೆಯಾಗಿ ನೆಲಕ್ಕೆ ಅಪ್ಪಳಿಸಿತು. ಸ್ಫೋಟದ ಬಳಿಕ ದಟ್ಟವಾದ ಕಪ್ಪುಹೊಗೆ ಆವರಿಸಿತು. ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್ ಎಎಲ್) ಅಭಿವೃದ್ಧಿಪಡಿಸಿದ ಏಕ ಆಸನದ ಹಗುರ ಯುದ್ಧ ವಿಮಾನ (ಎಲ್ ಸಿಎ) ಸ್ಥಳೀಯ ಸಮಯ ಮಧ್ಯಾಹ್ನ 2.10ರ ಸುಮಾರಿಗೆ ಪತನವಾಗಿದೆ.

### ಪೈಲಟ್ ಸಾವು

**ಅಪಘಾತದಲ್ಲಿ ಪೈಲಟ್ ಸಾವಿಗೀಡಾಗಿರುವುದನ್ನು ಭಾರತೀಯ ವಾಯುಪಡೆ ದೃಢಪಡಿಸಿದೆ. ಅಪಘಾತಕ್ಕೆ ಕಾರಣ ತಿಳಿಯಲು ವಿಚಾರಣಾ ನ್ಯಾಯಾಲಯ ಸ್ಥಾಪಿಸಲಾಗುವುದು ಎಂದು ಅದು ಹೇಳಿದೆ.**

## ದೆಹಲಿ ಯಾತ್ರೆ–ಡಿಕೆಶಿಗೆ ಕೇಳಿ: ಸಚಿವ ರಾಮಲಿಂಗಾರೆಡ್ಡಿ ಟಾಂಗ್



**ರಾಮನಗರ:** ನವೆಂಬರ್ ಕ್ರಾಂತಿಯೂ ಇಲ್ಲ. ಭ್ರಾಂತಿಯೂ ಇಲ್ಲ, ಒನ್ಲಿ ಶಾಂತಿ. ನಿಮಗೆ ಏನೇ ಮಾಹಿತಿ ಬೇಕಿದ್ದರೂ ಡಿ.ಕೆ.ಶಿವಕುಮಾರ್ ಅವರನ್ನು ಕೇಳಿ ಎಂದು ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಡಿಸಿಎಂ ಡಿಕೆಶಿ ಬಣದ ಶಾಸಕರು ದೆಹಲಿ ಯಾತ್ರೆ ವಿಚಾರ ಕುರಿತು ಮಾತನಾಡಿದ ಅವರು, ಯಾರು ದೆಹಲಿಗೆ ಹೋಗಿದ್ದಾರೆ. ಯಾಕೆ ಹೋಗಿದ್ದಾರೆಂದು ಗೊತ್ತಿಲ್ಲ. ದೆಹಲಿಯಲ್ಲಿ ಏನೇನು ಆಗಿದ್ಯೋ ಗೊತ್ತಿಲ್ಲ. ನಿಮಗೆ ಸಂಪೂರ್ಣ ಮಾಹಿತಿ ಬೇಕಿದ್ದರೆ ಡಿಕೆಶಿ, ಡಿ.ಕೆ. ಸುರೇಶ್ ಜೊತೆ ಮಾತನಾಡಿ ಎಂದು ವ್ಯಂಗ್ಯವಾಡಿದರು.

ನಾಯಕತ್ವ ಬದಲಾವಣೆ ಬಗ್ಗೆ ಗೊತ್ತಿಲ್ಲ. ದಲಿತ ಸಚಿವರು ಸಭೆ ಮಾಡಿರೋದು ನನಗೆ ಗೊತ್ತಿಲ್ಲ. ಏನೂ ನಾಲ್ಕು ಜನ ಊಟಕ್ಕೆ ಸೇರಿಕೊಂಡರೆ ಅದರ ಬಗ್ಗೆ ಮಾತನಾಡಲು ಆಗುತ್ತಾ? ನಾನು ಯಾವ ಬಣವೂ ಅಲ್ಲ, ಪುಟ 2ಕ್ಕೆ

## ನಾಯಕತ್ವ ಬದಲಾವಣೆ: ಹೇಳಿಕೆ ನೀಡದಂತೆ ಸುರ್ಜೇವಾಲ ಎಚ್ಚರಿಕೆ



**ನವದೆಹಲಿ:** ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಬಗ್ಗೆ ಕಾಂಗ್ರೆಸ್ ನಾಯಕರು ಹಾಗೂ ಶಾಸಕರು ಯಾವುದೇ ಹೇಳಿಕೆ ನೀಡಬಾರದೆಂದು ಕಠಿಣ ಎಚ್ಚರಿಕೆ ನೀಡಲಾಗಿದೆ ಎಂದು ಎಐಸಿಸಿ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದ್ದಾರೆ.

ಕಾಂಗ್ರೆಸ್ ಸರ್ಕಾರದ ವಿರುದ್ಧ ಕರ್ನಾಟಕ ಬಿಜೆಪಿ ಅಪಪ್ರಚಾರ ಮಾಡುತ್ತಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಮಾತುಕತೆ ನಡೆಸಿದ್ದೇನೆ ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಕಾಂಗ್ರೆಸ್‌ನ ಕೆಲವು ನಾಯಕರು ಹಾಗೂ ಶಾಸಕರ ಅನಗತ್ಯ ಹೇಳಿಕೆಗಳು ಊಹಾಪೋಹ ಹೆಚ್ಚಳಕ್ಕೆ ಕಾರಣ ವಾಗಿದೆ. ನಾಯಕತ್ವ ಬದಲಾವಣೆ ಬಗ್ಗೆ ಬಹಿರಂಗ ಹೇಳಿಕೆ ನೀಡದಂತೆ ಅಥವಾ ಪಟ್ಟಭದ್ರ ಹಿತಾಸಕ್ತಿಗಳು ಪ್ರಚಾರ ಮಾಡುತ್ತಿರುವ ಕಾರ್ಯಸೂಚಿಗೆ ಬೀಳದಂತೆ ಪಕ್ಷ ಅವರಿಗೆ ಕಠಿಣ ಎಚ್ಚರಿಕೆ ನೀಡಿದೆ ಎಂದು ಬರೆದುಕೊಂಡಿದ್ದಾರೆ. ಪಕ್ಷದ ವಿವಿಧ ಪದಾಧಿಕಾರಿಗಳ ಅಭಿಪ್ರಾಯವನ್ನು ನಾಯಕತ್ವ ಈಗಾಗಲೇ ಸಂಗ್ರಹಿಸಿದೆ ಎಂದೂ ಅವರು ತಿಳಿಸಿದ್ದಾರೆ.

ಎಲ್ಲರನ್ನೂ ಒಳಗೊಂಡ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದ ಅತ್ಯುತ್ತಮ ಮಾದರಿಯಾದ ಗ್ಯಾರಂಟಿ ಗಳು ಮತ್ತು ಭರವಸೆಗಳನ್ನು ದುರ್ಬಲಗೊಳಿಸುವುದು ಏಕೈಕ ಉದ್ದೇಶ ಕಾರ್ಯ ಸೂಚಿಯ ಹಿಂದೆ ಅಡಗಿದೆ ಎಂದು ಹೇಳಿದ್ದಾರೆ.

## ದಲಿತ ಸಚಿವರ ಡಿನ್ನರ್ ಮೀಟಿಂಗ್

### ದಲಿತ ಸಿಎಂ ದಾಳ: ಹೈಕಮಾಂಡ್ ಮುಂದೆ ಪಟ್ಟು ಹಿಡಿಯಲು ನಿರ್ಧಾರ

**ಬೆಂಗಳೂರು:** ರಾಜ್ಯ ಕಾಂಗ್ರೆಸ್‌ನಲ್ಲಿ ಕುರ್ಚಿ ಕದನ ಜೋರಾಗಿದೆ. ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಣದ ದಲಿತ ನಾಯಕರು ಡಿನ್ನರ್ ಮೀಟಿಂಗ್ ನಡೆಸುವ ಮೂಲಕ ವಿರೋಧಿ ಬಣಕ್ಕೆ ಮತ್ತೊಂದು ಸಂದೇಶ ರವಾನಿಸಿದೆ.




ಅಧಿಕಾರ ಹಂಚಿಕೆ ಸೂತ್ರದಂತೆ ಸಿದ್ದರಾಮಯ್ಯ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುವುದಾದರೆ ದಲಿತ ಸಿಎಂ ದಾಳ ಮುನ್ನಲೆಗೆ ತರುವ ಬಗ್ಗೆ ಚರ್ಚೆ ನಡೆದಿದೆ. ಈಗ ನಾವಾಗಿಯೇ ಕೇಳುವುದು ಬೇಡ. ಪವರ್ ಶೇರಿಂಗ್ ಇದೆ ಎಂಬುದು ಅಂತಿಮವಾದರೆ ದಲಿತ ಸಿಎಂ ಮಾಡಿ ಎಂದು ಪಟ್ಟು ಹಿಡಿಯುವ ಬಗ್ಗೆ ಚರ್ಚಿಸಿದ್ದಾರೆಂದು ತಿಳಿದುಬಂದಿದೆ.

ಸಚಿವ ಸತೀಶ್ ಜಾರಕಿಹೊಳಿ ನಿವಾಸದಲ್ಲಿ ಸಿಎಂ ಆಪ್ತ ಸಚಿವರು ಡಿನ್ನರ್ ಮೀಟಿಂಗ್ ನಡೆಸಿದ್ದಾರೆ. ಮೂರು ಪ್ರಮುಖ ಅಜೆಂಡಗಳ ಮೇಲೆ ಸಚಿವರ ಡಿನ್ನರ್ ಮೀಟಿಂಗ್ ನಡೆದಿದೆ. ಜಿ.ಪರಮೇಶ್ವರ್, ಎಚ್.ಸಿ.ಮಹದೇವಪ್ಪ, ವೆಂಕಟೇಶ್, ಮಾಜಿ ಸಚಿವ ಕೆ.ಎನ್.ರಾಜಣ್ಣ ಸಭೆಯಲ್ಲಿ ಭಾಗಿಯಾಗಿದ್ದರು.

ಹೈಕಮಾಂಡ್ ನಾಯಕರು ಕರೆದು ಮಾತನಾಡುವ ಭರವಸೆ ನೀಡಿದ ಮೇಲೂ ಡಿಕೆಶಿ ಬಣದಿಂದ ದೆಹಲಿ ಪರೇಡ್ ಅಗತ್ಯ ಏನಿತ್ತು? ಡಿಕೆಶಿ ಬೆಂಬಲಿಗರು ಪಕ್ಷದ ಶಿಸ್ತು ಮೀರಿ ನಡೆದುಕೊಂಡಿದ್ದಾರೆ ಎಂಬುದನ್ನು ಹೈಕಮಾಂಡ್ ಗಮನಕ್ಕೆ ತರಲು ನಿರ್ಧಾರ. ಹೈಕಮಾಂಡ್ ಭೇಟಿಗೆ ಡಿಕೆಶಿ ಬಣ ಹೋದಂತೆ ನಾವು ಸದ್ಯಕ್ಕೆ ಹೋಗುವುದು ಬೇಡ. ದೆಹಲಿಗೆ ಹೋಗುವ ಅಗತ್ಯ ಬಿದ್ದರೆ ಸಂಖ್ಯಾಬಲ ಪ್ರದರ್ಶನದ ಲೆಕ್ಕಾಚಾರದಲ್ಲೇ ಹೋಗಲು ಸಿದ್ಧರಾಗೋಣ ಎಂದು ತೀರ್ಮಾನಿಸಲಾಗಿದೆ ಎನ್ನಲಾಗಿದೆ.ಇತ್ತ ಸಚಿವ ಚಲುವರಾಯಸ್ವಾಮಿ ನೇತೃತ್ವದಲ್ಲಿ ಪುಟ 2ಕ್ಕೆ

## 24ರವರೆಗೆ ಸಾಧಾರಣ ಮಳೆ: ಮುಂಜಾನೆ ಚಳಿ, ಮಂಜಿನ ವಾತಾವರಣ

**ಬೆಂಗಳೂರು:** ರಾಜ್ಯದಾದ್ಯಂತ ನ. 24ರವರೆಗೆ ಅಲ್ಲಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಮುಂಜಾನೆ ಚಳಿ ಮತ್ತು ಮಂಜಿನ ವಾತಾವರಣ ಇರಲಿದೆ. ಉಳಿದೆಡೆ ಒಣಹವೆ ಮುಂದುವರಿಯುವ ನಿರೀಕ್ಷೆಯಿದೆ.

ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಒಂದೆರಡು ಸ್ಥಳಗಳಲ್ಲಿ ಹಗುವ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಒಣಹವೆ ಇರುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ವರದಿ ಹೇಳಿದೆ.

ನ. 23ರಂದು ಕೊಪ್ಪಳ, ರಾಯಚೂರು, ಯಾದಗಿರಿ, ಗದಗ, ಧಾರವಾಡ, ಹಾವೇರಿ ಜಿಲ್ಲೆಯ ಒಂದೆರಡು ಸ್ಥಳಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗಲಿದೆ. ಬಾಗಲಕೋಟೆ, ಬೆಳಗಾವಿ, ಬೀದರ್, ಕಲಬುರಗಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಒಣಹವೆ ಇರುವ ಸಾಧ್ಯತೆಯಿದೆ. ಪುಟ 2ಕ್ಕೆ

## ಜೈಲಿಗೂ ಡಿಕೆಶಿ ಭೇಟಿ: ಶಾಸಕರ ಜೊತೆ ಮಾತುಕತೆ

**ಬೆಂಗಳೂರು:** ಡಿಸಿಎಂ ಡಿ.ಕೆ.ಶಿವಕುಮಾರ್ ಶುಕ್ರವಾರ ಪರಪ್ಪನ ಅಗ್ರಹಾರಕ್ಕೆ ಭೇಟಿ ನೀಡಿದ್ದರು. ಜೈಲಿನಲ್ಲಿರುವ ಧಾರವಾಡ ಶಾಸಕ ವಿನಯ್ ಕುಲಕರ್ಣಿ ಮತ್ತು ಚಿತ್ರದುರ್ಗ ಶಾಸಕ ವೀರೇಂದ್ರ ಪಪ್ಪಿ ಅವರನ್ನು ಭೇಟಿ ಮಾಡಿದ್ದಾರೆ ಎನ್ನಲಾಗಿದೆ.



ಈ ಇಬ್ಬರು ಕಾಂಗ್ರೆಸ್ ಶಾಸಕರು ಜೈಲಿನಲ್ಲಿದ್ದಾರೆ. ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿನಯ್ ಕುಲಕರ್ಣಿ ಮತ್ತು ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ವೀರೇಂದ್ರ ಪಪ್ಪಿ ಜೈಲು ಸೇರಿದ್ದಾರೆ. ಈಗಾಗಲೇ ಡಿಕೆಶಿ ಬಣದ ಕೆಲ ಶಾಸಕರು ದೆಹಲಿಗೆ ತೆರಳಿದ್ದಾರೆ. ಸಿದ್ದರಾಮಯ್ಯ ಬಣದ ಶಾಸಕರು ಬೆಂಗಳೂರಿನಲ್ಲಿ ಡಿನ್ನರ್ ಸಭೆ ನಡೆಸಿದ್ದಾರೆ. ಅಧಿಕಾರ ಹಂಚಿಕೆ ವಿಚಾರ ಬಂದರೆ ಎರಡು ಬಣದಲ್ಲಿ ಎಷ್ಟು ಜನ ಶಾಸಕರಿದ್ದಾರೆ ಪುಟ 2ಕ್ಕೆ

## ರಾಜ್ಯದಿಂದ ಕಳ್ಳಸಾಗಣೆ: 3.15 ಕೋಟಿ ರೂ. ವಶ




**ವಯನಾಡು:** ಕರ್ನಾಟಕದಿಂದ ಕೇರಳಕ್ಕೆ ಕಳ್ಳಸಾಗಣೆ ಮಾಡುತ್ತಿದ್ದ ಕಾರಿನಿಂದ 3.15 ಕೋಟಿ ರೂ. ಹಣವನ್ನು ವಯನಾಡು ಸಮೀಪ ಕಸ್ಟಮ್ಸ್ ಅಧಿಕಾರಿಗಳು ವಶಪಡಿಸಿಕೊಂಡಿರುವುದಾಗಿ ಶುಕ್ರವಾರ ತಿಳಿಸಿದ್ದಾರೆ.

ಕೇರಳದಲ್ಲಿ ಅತೀ ದೊಡ್ಡ ಹಣ ಕಳ್ಳಸಾಗಾಣಿಕೆಯನ್ನು ಕಸ್ಟಮ್ಸ್ ಅಧಿಕಾರಿಗಳು ತಡೆದಿದ್ದಾರೆ. ಕೇರಳದ ಕೋಜಿಕೋಡ್ ವಿಭಾಗದ ಕಸ್ಟಮ್ಸ್ (ತಡೆಗಟ್ಟುವಿಕೆ) ಕಮಿಷನರೇಟ್ ಈ ಬಗ್ಗೆ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದು, ಶಂಕಾಸ್ಪದ ವಾಹನದ ಚಲನವಲನಗಳನ್ನು ಹಲವಾರು ತಿಂಗಳುಗಳಿಂದ ಕಣ್ಗಾವಲಿನಲ್ಲಿ ಇರಿಸಲಾಗಿತ್ತು. ಗುಪ್ತಚರ ಮಾಹಿತಿ ಮೇರೆಗೆ, ಪೊಲೀಸರು ಮತ್ತು ಇತರ ಕೇಂದ್ರ ಸಂಸ್ಥೆಗಳ ಬೆಂಬಲದೊಂದಿಗೆ ಶುಕ್ರವಾರ ಬೆಳಗಿನ ಜಾವ ಮಾನಂದವಾಡಿಯಲ್ಲಿ ಕಾರನ್ನು ತಡೆಹಿಡಿಯಲಾಯಿತು ಎಂದು ಹೇಳಿದೆ.

ಜಂಟಿ ಆಯುಕ್ತ ಶಶಿಕಾಂತ್ ಶರ್ಮಾ ಮತ್ತು ಉಪ ಆಯುಕ್ತ ಶ್ಯಾಮನಾಥ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯು, ಬೆಂಗಳೂರಿನಿಂದ ವಾರಕ್ಕೊಮ್ಮೆ ನಿಷಿದ್ಧ ವಸ್ತುಗಳನ್ನು ಕಳ್ಳಸಾಗಣೆ ಮಾಡುತ್ತಿರುವ ಗ್ಯಾಂಗ್ ಬಗ್ಗೆ ವ್ಯಾಪಕ ಗುಪ್ತಚರ ಮಾಹಿತಿಯನ್ನು ಆಧರಿಸಿತ್ತು ಎಂದು ಕಸ್ಟಮ್ಸ್ ಅಧಿಕಾರಿಗಳು ತಿಳಿಸಿದ್ದಾರೆ. ಪುಟ 2ಕ್ಕೆ

## ನೀನು ದೆಹಲಿಗೆ ಹೋಗಿದ್ದೀಯಾ? ಚಲುವರಾಯಸ್ವಾಮಿಗೆ ಸಿಎಂ ಪ್ರಶ್ನೆ!





**ಮೈಸೂರು:** ಡಿ.ಕೆ.ಶಿವಕುಮಾರ್ ಪರ ಲಾಬಿ ಮಾಡಲು ಸಚಿವ ಚಲುವರಾಯಸ್ವಾಮಿ ದೆಹಲಿಗೆ ತೆರಳಿದ್ದಾರೆ. ಚಲುವರಾಯಸ್ವಾಮಿಗೆ ಶುಕ್ರವಾರ ಕರೆ ಮಾಡಿದ ಸಿಎಂ ಸಿದ್ದರಾಮಯ್ಯ ಅವರು, ನೀನು ದೆಹಲಿಗೆ ಹೋಗಿದ್ದೀಯಾ ಎಂದು ಪ್ರಶ್ನಿಸಿದ್ದಾರೆ. ಹೌದು ಎಂದಿರುವ ಚಲುವರಾಯಸ್ವಾಮಿ, ಇಲಾಖೆ ಕೆಲಸ ಹಾಗೂ ಕೇಂದ್ರ ಸಚಿವರ ಭೇಟಿಗೆ ಬಂದಿದ್ದೇನೆ ಎಂದಿದ್ದಾರೆ. ಹೈಕಮಾಂಡ್ ಭೇಟಿಗಲ್ಲ ಎಂದು ಚಲುವರಾಯಸ್ವಾಮಿ ಸಿಎಂಗೆ ಮಾಹಿತಿ ನೀಡಿದ್ದಾರೆ. ಕೆಲ ಶಾಸಕರು ದೆಹಲಿಗೆ ದಿಢೀರ್ ಆಗಿ ಹೋಗಿರುವುದು ರಾಜ್ಯ ಕಾಂಗ್ರೆಸ್‌ನಲ್ಲಿ ಕಂಪನ ಎಬ್ಬಿಸಿದೆ. ಸಿಎಂ ಸಿದ್ದರಾಮಯ್ಯ ಬಣ ಕೂಡಾ ಸಕ್ರಿಯವಾಗಿದೆ.

## ದರೋಡೆ ಪ್ರಕರಣ: ನಾಲ್ವರ ಬಂಧನ

### ಚೆನ್ನೈನಲ್ಲಿ 6.3 ಕೋಟಿ ಹಣ ವಶಕ್ಕೆ ಪಡೆದ ಪೊಲೀಸರು

**ಬೆಂಗಳೂರು:** ಎಟಿಎಂಗೆ ಹಣ ತುಂಬಿಸುವ ವಾಹನ ಅಡ್ಡಗಟ್ಟಿ 7.11 ಕೋಟಿ ಹಣ ದರೋಡೆ ಮಾಡಿದ್ದ ಪ್ರಕರಣವನ್ನು ಬೆಂಗಳೂರು ಪೊಲೀಸರು ಬೇಧಿಸಿದ್ದಾರೆ. ಚೆನ್ನೈನಲ್ಲಿ ಆರೋಪಿಗಳನ್ನು ಹಿಡಿದು 6.3 ಕೋಟಿ ಹಣವನ್ನು ವಶಕ್ಕೆ ಪಡೆದಿದ್ದಾರೆ.

ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಉಳಿದ ಹಣ, ಆರೋಪಿಗಳ ಪತ್ತೆಗೆ ಶೋಧ ಮುಂದುವರಿಸಿದ್ದಾರೆ. ದರೋಡೆಕೋರರ ಬೆನ್ನಟ್ಟಿದ್ದ ಪೊಲೀಸರು ಚಿತ್ತೂರಿನಲ್ಲಿ ಇನ್ನೋವಾ ಕಾರನ್ನು ವಶಕ್ಕೆ ಪಡೆದಿದ್ದರು. ದರೋಡೆಕೋರರು ಈ ಕಾರನ್ನು ಕೃತ್ಯಕ್ಕೆ ಬಳಸಿದ್ದರು. ಕಾರು ವಶಕ್ಕೆ ಪಡೆದು ಬೆಂಗಳೂರಿಗೆ ತಂದು ಪರಿಶೀಲನೆ ನಡೆಸಿದ್ದರು. ಯುಪಿ ನೋಂದಣಿಯ ನಂಬರ್ ಪ್ಲೇಟ್ ಅಳವಡಿಸಿ ಗ್ಯಾಂಗ್ ಪರಾರಿಯಾಗಿತ್ತು.

ದರೋಡೆಕೋರರಿಗೆ ಇನ್ನೋವಾ ಕಾರು ಕೊಟ್ಟಿದ್ದ ಇಬ್ಬರನ್ನ ಪೊಲೀಸರು ಬಂಧಿಸಿದ್ದಾರೆ. ಚಿತ್ತೂರು ಗುಡಿಪಲ್ಲಿ ಬಳಿ ಪತ್ತೆಯಾಗಿದ್ದ ಕಾರು ಎಂಜಿನ್‌ನ



ಚಾರ್ಸಿ ನಂಬರ್ ಆಧರಿಸಿ ಇಬ್ಬರನ್ನ ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಕರಣ ದಾಖಲಿಸಿಕೊಂಡು ವಿಶೇಷ ತಂಡಗಳನ್ನು ರಚಿಸಿದ್ದ ಪೊಲೀಸರು, ಗೋವಿಂದಪುರ ಠಾಣೆಯ ಕಾನ್‌ಸ್ಟೇಬಲ್ ಅಣ್ಣಪ್ಪನಾಯ್ಕ್, ಕೇರಳ ಮೂಲದ ದೇವಿಯರ್ ಸೇರಿದಂತೆ ಇಬ್ಬರನ್ನು ಬಂಧಿಸಿದ್ದಾರೆ. ಬುಧವಾರ ರಾತ್ರಿಪಾಳಿಯಲ್ಲಿಯೇ ಇದ್ದ ಅಣ್ಣಪ್ಪನಾಯ್ಕ್ ಗುರುವಾರ ಬೆಳಗ್ಗೆ ಕೆಲಸ ಮುಗಿಸಿ ಮನೆಗೆ ಹೋಗುವಾಗ ಪೊಲೀಸರು ವಶಕ್ಕೆ ಪಡೆದಿದ್ದರು.

## ಮೆಕ್ಕೆಜೋಳ ರೈತರಿಗೆ ಸರ್ಕಾರದ ನೆರವು

### ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ | ಸಭೆಗೆ ಕೃಷಿ ಸಚಿವ ಚಲುವರಾಯಸ್ವಾಮಿ ಗೈರು

**ಬೆಂಗಳೂರು:** ಮೆಕ್ಕೆಜೋಳ ಬೆಳೆದ ರೈತರು ಖರೀದಿ ಕೇಂದ್ರ ತೆರೆಯಲು ಒತ್ತಾಯಿಸುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಕಾವೇರಿ ನಿವಾಸದಲ್ಲಿ ಸಭೆ ನಡೆಸಿದರು. ಆದರೆ ಈ ಸಭೆಗೆ ಕೃಷಿ ಸಚಿವ ಚಲುವರಾಯಸ್ವಾಮಿ ಅವರೇ ಭಾಗವಹಿಸಿರಲಿಲ್ಲ.

ಬೆಲೆ ಕುಸಿತದಿಂದ ಸಂಕಷ್ಟ ಎದುರಿಸುತ್ತಿರುವ ರಾಜ್ಯದ ಮೆಕ್ಕೆಜೋಳ ರೈತರ ನೆರವಿಗೆ ಸರ್ಕಾರ ಎಲ್ಲಾ ರೀತಿಯ ನೆರವು ಒದಗಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

70 ಲಕ್ಷ ಮೆ. ಟನ್ ಮೆಕ್ಕೆ ಜೋಳವನ್ನು ಆಮದು ಮಾಡಿಕೊಳ್ಳಲಾಗಿದೆ. ನಮ್ಮ ದೇಶದಲ್ಲಿಯೇ ಉತ್ಪಾದನೆ ಹೆಚ್ಚಾಗಿರುವುದರಿಂದ ಆಮದು ಮೇಲೆ ನಿರ್ಬಂಧ ವಿಧಿಸಲು ಒತ್ತಾಯಿಸಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುತ್ತೇವೆ. ಎಥೆನಾಲ್ ಉತ್ಪಾದನೆಗಾಗಿ ಮೆಕ್ಕೆ ಜೋಳವನ್ನು ತಕ್ಷಣ ಖರೀದಿಸುವಂತೆ ರಾಜ್ಯದ ಪ್ರಮುಖ ಡಿಸ್ಟಿಲರಿಗಳೊಂದಿಗೆ ಸಭೆ ನಡೆಸಿ, ಸೂಚನೆ ನೀಡಲಾಗುವುದು.



ಕುಕ್ಕುಟೋದ್ಯಮಕ್ಕೆ ಮೆಕ್ಕೆಜೋಳದ ಬೇಡಿಕೆಯಿದ್ದು, ಅವರೊಂದಿಗೆ ಸಹ ಮಾತುಕತೆ ನಡೆಸಲಾಗುವುದು ಎಂದು ಅವರು ಹೇಳಿದರು.

ಮೆಕ್ಕೆಜೋಳದಿಂದ ಎಥೆನಾಲ್ ಉತ್ಪಾದಿಸಲು ಕೇಂದ್ರ ಸರ್ಕಾರ ರಾಜ್ಯಕ್ಕೆ ನಿಗದಿ ಮಾಡಿರುವ ಕೋಟಾ ಪ್ರಮಾಣ ಅತ್ಯಂತ ಕಡಿಮೆ ಇದೆ. ಇದರಿಂದಾಗಿ ಖರೀದಿದಾರರಿಂದ ಮೆಕ್ಕೆಜೋಳದ ಖರೀದಿ ಪ್ರಮಾಣವೂ ಕಡಿಮೆಯಾಗಿದೆ ಎಂಬ ಅಭಿಪ್ರಾಯ ಸಿಎಂ

### ಖರೀದಿ ಕೇಂದ್ರ ಆರಂಭಿಸದ ಕೇಂದ್ರ ಸರ್ಕಾರ: ಸಿಎಂ ಟೀಕೆ

**ಮೈಸೂರು:** ಮೆಕ್ಕೆಜೋಳದ ಎಂಎಸ್‌ಪಿ ಕ್ವಿಂಟಲ್‌ಗೆ 2400 ನಿಗದಿ ಆಗಿದೆ. ಆದರೆ ಈವರೆಗೆ ಕೇಂದ್ರ ಸರ್ಕಾರದಿಂದ ರಾಜ್ಯದಲ್ಲಿ ಖರೀದಿ ಕೇಂದ್ರ ಆರಂಭ ಆಗಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಮಾರುಕಟ್ಟೆಯಲ್ಲಿ ಬೆಲೆ ಕುಸಿತ ಆಗಿದೆ. ರೈತರು ಸುಮಾರು 55 ಲಕ್ಷ ಟನ್‌ನಷ್ಟು ಜೋಳ ಬೆಳೆದಿದ್ದಾರೆ. ಕೇಂದ್ರವು ಇಲ್ಲಿ ಖರೀದಿ ಬದಲಿಗೆ ವಿದೇಶದಿಂದ 70 ಲಕ್ಷ ಟನ್ ಆಮದಿಗೆ ಮುಂದಾಗಿರುವುದು ಸರಿಯಲ್ಲ. ಕೇಂದ್ರದ ನೋಡಲ್ ಏಜೆನ್ಸಿಗಳು ಇಲ್ಲಿಯೇ ಖರೀದಿ ಮಾಡಬೇಕು ಎಂದು ಆಗ್ರಹಿಸಿದರು. ಡಿಸ್ಟಿಲರಿ ಏಜೆನ್ಸಿಗಳು ಮುಕ್ತ ಮಾರುಕಟ್ಟೆ ಪುಟ 2ಕ್ಕೆ

## ಮೊದಲ ಪುಟದಿಂದ

### ಮೆಕ್ಕೆಜೋಳ ರೈತರಿಗೆ ಸರ್ಕಾರದ ನೆರವು

ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ವ್ಯಕ್ತವಾಯಿತು.

ರಾಜ್ಯದಲ್ಲಿ ಮತ್ತು ದೇಶದಲ್ಲಿ ಮೆಕ್ಕೆಜೋಳ ಉತ್ಪಾದನೆ ಹೆಚ್ಚಳವಾಗಿದೆ. ಈ ಬಗ್ಗೆ ಮಾಹಿತಿ ಇದ್ದೂ ಕೂಡ ಕೇಂದ್ರ ಸರ್ಕಾರ ವಿದೇಶಗಳಿಂದ 70 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳವನ್ನು ಆಮದು ಮಾಡಿಕೊಂಡಿದೆ. ಇದರಿಂದಾಗಿ ರಾಜ್ಯದ ಮತ್ತು ದೇಶದ ಮೆಕ್ಕೆಜೋಳ ಬೆಳೆದ ರೈತರಿಗೆ ವಿಪರೀತ ಹೊರೆ ಆಗಿದೆ. ಮೆಕ್ಕೆಜೋಳದಿಂದ ಎಥೆನಾಲ್ ಉತ್ಪಾದಿಸಲು ಕೇಂದ್ರ ಸರ್ಕಾರ ರಾಜ್ಯಕ್ಕೆ ನಿಗದಿ ಮಾಡಿರುವ ಕೋಟಾ ಪ್ರಮಾಣವೂ ಅತ್ಯಂತ ಕಡಿಮೆ ಇದೆ. ಇದರಿಂದಾಗಿ ಡಿಸ್ಟಿಲರಿಗಳು ಮೆಕ್ಕೆಜೋಳ ಖರೀದಿಸುವ ಪ್ರಮಾಣವೂ ಕಡಿಮೆ ಆಗಿದೆ.

ಡಿಸ್ಟಿಲರಿಗಳು ಮೆಕ್ಕೆಜೋಳ ಬೆಲೆ ಕಡಿಮೆ ಇದ್ದಾಗಲೇ ಹಿಂದೆಯೇ ಖರೀದಿಸಿ ಶೇಖರಣೆ ಮಾಡಿಕೊಂಡಿವೆ. ಇದರಿಂದಾಗಿ ಈಗ ಖರೀದಿಗೆ ಮುಂದೆ ಬರುತ್ತಿಲ್ಲ. ಇದು ಸ್ಪಷ್ಟ ನಿಯಮ ಉಲ್ಲಂಘನೆ. ಡಿಸ್ಟಿಲರಿಗಳು ನಿಯಮಾನುಸಾರ ಮೆಕ್ಕೆ ಖರೀದಿಗೆ ಮುಂದೆ ಬರಬೇಕಿದೆ.

### 24ರವರೆಗೆ ಸಾಧಾರಣ ಮಳೆ: ಮುಂಜಾನೆ ಚಳಿ, ಮಂಜಿನ ವಾತಾವರಣ

ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ನ. 24ರವರೆಗೆ ಮಳೆಯಾಗಲಿದೆ. 25ರಿಂದ ಒಣಹವೆ ಮುಂದುವರಿಯಲಿದೆ.

### ಸಿಎಂಗೆ ಆಲ್ ದಿ ಬೆಸ್ಟ್!

ಗೊತ್ತಿಲ್ಲ. ನಾಲ್ಕೈದು ಡಿಸಿಎಂ ಮಾಡಬೇಕು. ಅಧ್ಯಕ್ಷರ ಬದಲಾವಣೆ ಮಾಡಬೇಕು ಎಂದು ಎರಡೂವರೆ ವರ್ಷಗಳಿಂದ ಡಿನ್ನರ್ ಸಭೆಗಳನ್ನು ಮಾಡುತ್ತಲೇ ಇದ್ದಾರೆ. ಇನ್ನು ಹೆಚ್ಚು ಸಭೆಗಳನ್ನು ಮಾಡಲಿ ಎಂದು ವ್ಯಂಗ್ಯವಾಡಿದರು.

### ಜೈಲಿಗೂ ಡಿಕೆಶಿ ಭೇಟಿ: ಶಾಸಕರ ಜೊತೆ ಮಾತುಕತೆ

ಎನ್ನುವುದು ಮುಖ್ಯವಾಗುತ್ತದೆ. ಈ ಬಗ್ಗೆ ಮಾತನಾಡಲು ಡಿಕೆಶಿ ಇಬ್ಬರು ಶಾಸಕರ ಜೊತೆ ಮಾತನಾಡಲು ತೆರಳಿದ್ದರು ಎನ್ನಲಾಗಿದೆ.

### ದೆಹಲಿ ಯಾತ್ರೆ–ಡಿಕೆಶಿಗೆ ಕೇಳಿ: ಸಚಿವ ರಾಮಲಿಂಗಾರೆಡ್ಡಿ ಟಾಂಗ್

ಕಾಂಗ್ರೆಸ್ ಬಣ. ಸರ್ಕಾರದಲ್ಲಿ ಯಾರೂ ಗೊಂದಲ ಮಾಡಿಕೊಳ್ಳಬಾರದು. ಎಲ್ಲವನ್ನೂ ಹೈಕಮಾಂಡ್ ತೀರ್ಮಾನಕ್ಕೆ ಬಿಡಬೇಕು ಎಂದರು.

### ಖರೀದಿ ಕೇಂದ್ರ ಆರಂಭಿಸದ ಕೇಂದ್ರ ಸರ್ಕಾರ: ಸಿಎಂ ಟೀಕೆ

ಬದಲಿಗೆ ಖರೀದಿ ಕೇಂದ್ರದ ಮೂಲಕವೇ ಮೆಕ್ಕೆಜೋಳ ಖರೀದಿಸುವಂತೆ ಸೂಚಿಸಲಾಗಿದೆ. ರೈತರಿಗೆ ಅಗತ್ಯ ಸಹಾಯ ಒದಗಿಸಲಾಗುವುದು. 10 ಲಕ್ಷ ಟನ್ ಜೋಳ ಖರೀದಿಗೆ ಕೂಡಲೇ ಖರೀದಿ ಕೇಂದ್ರ ತೆರೆಯಲು ಸೂಚಿಸಲಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೂ ಪತ್ರ ಬರೆಯಲಾಗುವುದು ಎಂದು ಸಿಎಂ ಹೇಳಿದರು.

ಮೆಕ್ಕೆಜೋಳದ ಜೊತೆಗೆ ಹೆಸರು ಕಾಳು ಬೆಳೆ ಸಮಸ್ಯೆ ಬಗ್ಗೆ ಚರ್ಚಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಎಫ್ಎಕ್ಯು ಬದಲಾವಣೆಗೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸುವ ಜೊತೆಗೆ ಸಂಬಂಧಪಟ್ಟ ತಂಡ ಈ ಬಗ್ಗೆ ದೆಹಲಿಗೂ ಭೇಟಿ ನೀಡಬೇಕೆಂದು ಸೂಚನೆ ನೀಡಲಾಗಿದೆ. ಇತ್ತೀಚೆಗೆ ಪ್ರಧಾನಿಯವರನ್ನು ಭೇಟಿಯಾಗಿ ಮಳೆಯಿಂದಾದ ಬೆಳೆ ಹಾನಿಗೆ ಪರಿಹಾರ ಕೋರಲಾಗಿದೆ. ಈ ಬಾರಿ ರಾಜ್ಯದಲ್ಲಿ ಸುಮಾರು 15.5 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಸಂಭವಿಸಿದೆ. ಕಬ್ಬಿನ ಎಂಎಸ್‌ಪಿ ದರ ನಿಗದಿ, ಎಥೆನಾಲ್ ಉತ್ಪಾದನೆ, ಅತಿವೃಷ್ಟಿ ಪರಿಹಾರ ಸಂಬಂಧ ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದು, ಪೂರಕವಾಗಿ ಸ್ಪಂದಿಸುವ ನಿರೀಕ್ಷೆ ಇದೆ ಎಂದು ಸಿಎಂ ಸಿದ್ದರಾಮಯ್ಯ ಭರವಸೆ ವ್ಯಕ್ತಪಡಿಸಿದರು.

### ತೇಜಸ್ ಯುದ್ಧ ವಿಮಾನ ಪತನ ದುಬೈ ಏರ್ ಶೋ ವೇಳೆ ದುರಂತ

ವಿಶ್ವದ ಅತಿದೊಡ್ಡ ವಾಯುಯಾನ ಪ್ರದ ರ್ಶನಗಳಲ್ಲಿ ಒಂದಾದ ದ್ವೈವಾರ್ಷಿಕ ದುಬೈ ಏರ್ ಶೋ ವೇಳೆ ಈ ಅಪಘಾತ ಸಂಭವಿಸಿದೆ. ಇದು ತೇಜಸ್ ವಿಮಾನದ ಎರಡನೇ ಅಪಘಾ ತವಾಗಿದೆ. 2024ರ ಮಾರ್ಚ್ ನಲ್ಲಿ ರಾಜಸ್ಥಾ ನದ ಜೈಸಲ್ಮೇರ್‌ನಲ್ಲಿ ತೇಜಸ್ ಯುದ್ಧವಿಮಾನ ಪತನಗೊಂಡಿತ್ತು. ಆ ವೇಳೆ ಪೈಲಟ್ ಸುರಕ್ಷಿ ತವಾಗಿ ಜಿಗಿಯುವ ಮೂಲಕ ಪ್ರಾಣಾಪಾಯ ದಿಂದ ಪಾರಾಗಿದ್ದರು.

ತೇಜಸ್ 4.5 ಪೀಳಿಗೆಯ ಬಹೂಪಯೋಗಿ ಯುದ್ಧ ವಿಮಾನವಾಗಿದ್ದು, ವಾಯು–ರಕ್ಷಣಾ ಕಾರ್ಯಾಚರಣೆ, ಆಕ್ರಮಣಕಾರಿ ವಾಯು ಬೆಂಬಲ ಮತ್ತು ಯುದ್ಧ ಕಾರ್ಯಾಚರಣೆ ಗಳನ್ನು ನಿರ್ವಹಿಸುತ್ತದೆ. ಇದು ಹಗುರ ಮತ್ತು ಚಿಕ್ಕ ಯುದ್ಧ ವಿಮಾನಗಳಲ್ಲಿ ಒಂದಾಗಿದೆ.

### ದಲಿತ ಸಚಿವರ ಡಿನ್ನರ್ ಮೀಟಿಂಗ್

ಶಾಸಕರ ತಂಡ ದೆಹಲಿಗೆ ತೆರಳಿದೆ. ಡಿ.ಕೆ.ಶಿವಕುಮಾರ್ ಪರವಾಗಿ 10ಕ್ಕೂ ಹೆಚ್ಚು ಶಾಸಕರು ದೆಹಲಿ ಪರೇಡ್ ನಡೆಸಿದ್ದಾರೆ. ಶುಕ್ರವಾರ ಅಥವಾ ಶನಿವಾರ ಇನ್ನೊಂದು ಟೀಂ ದೆಹಲಿಗೆ ಪ್ರಯಾಣ ಬೆಳೆಸುವ ಸಾಧ್ಯತೆ ಇದೆ. ಮಾಗಡಿ ಬಾಲಕೃಷ್ಣ, ಇಕ್ಬಾಲ್ ಹುಸೇನ್, ಶಿವಗಂಗಾ ಬಸವರಾಜ್ ತೆರಳುವ ಸಾಧ್ಯತೆ ಇದೆ.

### 3.15 ಕೋಟಿ ರೂ. ವಶ

ಪರಿಶೀಲನೆ ವೇಳೆ ಅದರಲ್ಲಿ ಅಪಾರ ಪ್ರಮಾ ಣದ ನಗದು ಪತ್ತೆಯಾಗಿದೆ. ಕಾರಿನ ಸೀಟು, ಡೋರ್‌ನ ಖಾಲಿ ಜಾಗಗಳಲ್ಲಿ ತುಂಬಲಾಗಿದ್ದ ಹಣ ವನ್ನು ಅಧಿಕಾರಿಗಳು ಒಂದೊಂದಾಗಿ ಹೊರಕ್ಕೆ ತೆಗೆದು ವಶಕ್ಕೆ ಪಡೆದಿದ್ದಾರೆ. ಈ ರೀತಿ ವಶಕ್ಕೆ ಪಡೆದ ಹಣದ ಮೌಲ್ಯವೇ ಬರೊಬ್ಬರಿ 3.15 ಕೋಟಿ ರೂ ಗಳು ಎಂದು ಅಂದಾಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಕನ್ನಡದ ಬೆಳವಣಿಗೆ, ಸಂರಕ್ಷಣೆ ರಾಜ್ಯೋತ್ಸವದ ಉದ್ದೇಶ



ಮೈಸೂರು: ಜೈ ಭುವನೇಶ್ವರಿ ಕನ್ನಡ ಯುವಕರ ಬಳಗ ಮತ್ತು ಅಭಿವೃದ್ಧಿ ಯಶಸ್ವಿ ಮಿಲನ ವತಿಯಿಂದ 15ನೇ ವರ್ಷದ ಕನ್ನಡ ರಾಜ್ಯೋತ್ಸವ ಸಮಾರಂಭ ನಜರಾಬಾದ್ ನ ಕಾಮಟಗೇರಿಯಲ್ಲಿ ವಿಜೃಂಭಣೆಯಿಂದ ಜರುಗಿತು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಜೈ ಭುವನೇಶ್ವರಿ ಪ್ರತಿಮೆಯುಳ್ಳ ಬೆಳ್ಳಿ ರಥದ ಮೆರವಣಿಗೆಗೆ ಪುಷ್ಪಾರ್ಚನೆಯ ಮೂಲಕ ಚಾಲನೆ ನೀಡಿದರು. ಬಳಿಕ ಮಾತನಾಡಿ, ಕನ್ನಡ ರಾಜ್ಯೋತ್ಸವ ಕರ್ನಾಟಕ ಮಾತ್ರವಲ್ಲದೆ ದೇಶದ ವಿವಿಧೆಡೆ,ವಿದೇಶದ ನೆಲದಲ್ಲಿಯೂ ಸಹ ಕನ್ನಡಿಗರ ಒಗ್ಗಟ್ಟು ಮತ್ತು ಸಂಘಟನೆಯಿಂದ ಅತ್ಯಂತ ಸಂಭ್ರಮ ಸಡಗರದಿಂದ ಎಲ್ಲೆಡೆ ನೆಡೆಯುತ್ತಿದೆ. ನವೆಂಬರ್ ಮಾಸ ಕನ್ನಡಿಗರ ಭಾಷಾಭಿಮಾನ ವ್ಯಕ್ತ ಪಡಿಸುವ, ಆರಾಧಿಸುವ ಭವ್ಯ ಕಾಲ. ಬಹುಶಹ ಒಂದು ನಾಡಿನ ಒಂದು ಭಾಷೆಯ ಹಬ್ಬವನ್ನು ಕನ್ನಡಿಗರಷ್ಟು ಉತ್ಸಾಹ, ಅಭಿಮಾನದಿಂದ ಆಚರಿಸುವವರು ಯಾರು ಇಲ್ಲ ಎಂದೆನಿಸುತ್ತದೆ. ಅಷ್ಟು ಭಾವೈಕ್ಯತೆ, ಭಾಂದವ್ಯದಿಂದ ಕನ್ನಡ ರಾಜ್ಯೋತ್ಸವ ಆಚರಿಸುತ್ತಾರೆಂದರು.

ಈ ವೇಳೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಜೈ ಭುವನೇಶ್ವರಿ ಕನ್ನಡ ಯುವಕರ ಬಳಗದ ಅಧ್ಯಕ್ಷರಾದ ರವಿನಾಯಕ್, ಅಭಿವೃದ್ಧಿ ಯಶಸ್ವಿ ಮಿಲನದ ಅಧ್ಯಕ್ಷರಾದ ಎಂ.ಪಿ. ದೀಪಕ್ ಪುಟ್ಟಸ್ವಾಮಿ,ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ನಿರ್ದೇಶಕರಾದ ಲೋಕೇಶ್ ಕುಮಾರ್ ಎಂ ಮಾದಾಪುರ, ಕಾಂಗ್ರೆಸ್ ಅಸಂಘಟಿತ ಕಾರ್ಮಿಕರ ಘಟಕದ ಸುನೀಲ್ ನಾರಾಯಣ್, ಸುರೇಶ್ ರಾವ್,ನಿರಂಜನ್ ರಾವ್, ವರದರಾಜ್, ಜಾವೀದ್, ಜಮೀದ್, ವಿಕಾಸ್ ಸಿಂಹ, ನಗರಪಾಲಿಕೆ ಮಾಜಿ ಸದಸ್ಯ ಕುಶಾಲ್ ಕುಮಾರ್, ಮಹದೇವು, ಶ್ರೀಪಾಲ್, ಶರತ್ ಮತ್ತಿತರರು ಉಪಸ್ಥಿತರಿದ್ದರು

## ಪ್ರತಿಭಾ ಕಾರಂಜಿಯಲ್ಲಿ ಪಾಲ್ಗೊಳ್ಳಿ



ಕೆ.ಆರ್.ನಗರ: ವಿದ್ಯಾರ್ಥಿಗಳು ಪ್ರತಿಭಾ ಕಾರಂಜಿಯಂತ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ತಮ್ಮ ಪ್ರತಿಭೆಯ ಅನಾವರಣವನ್ನು ಮಾಡ ಬೇಕು ಎಂದು ಕರ್ಪೂರವಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪ್ರೇಮ ಸ್ವಾಮಿ ಹೇಳಿದರು.

ಸಾಲಿಗ್ರಾಮ ತಾಲೂಕಿನ ರಾಂಪುರದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಬೆಂಗಳೂರಿನ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಕೆ.ಆರ್.ನಗರ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಂಪನ್ಮೂಲ ಸಮನ್ವಾಧಿಕಾರಿಗಳ ಕಾರ್ಯಾಲಯ ಇವರುಗಳ ಸಹಯೋಗದಲ್ಲಿ ಆಯೋಜಿಸಿದ್ದ ಸಾಲಿಗ್ರಾಮ ವಲಯ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಪೋಷಕರು ಮತ್ತು ಶಿಕ್ಷಕರುಗಳು ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಬೇಕು. ಒಂದೊಂದು ಮಕ್ಕಳಲ್ಲೂ ಕೂಡ ಒಂದೊಂದು ರೀತಿಯ ಪ್ರತಿಭೆಗಳು ಇರುತ್ತವೆ. ಅವರು ಅದನ್ನು ವ್ಯಕ್ತಪಡಿಸಲು ಸೂಕ್ತ ವೇದಿಕೆ ಅವಶ್ಯಕವಾಗಿದ್ದು. ಅದನ್ನು ಶಿಕ್ಷಣ ಇಲಾಖೆಯು ಕಲ್ಪಿಸಿ ಕೊಡುತ್ತಿರುವುದನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಗ್ರಾಮ ಪಂಚಾಯಿತಿ ಸದಸ್ಯ ರಾಂಪುರ ಲೋಕೇಶ್ ಮಾತನಾಡಿ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳಬೇಕು ಎಂದರು. ಶಾಲೆಗಳಲ್ಲಿ ನಡೆಯುವ ವಿವಿಧ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಬೇಕು. ಇಂತಹ ಸಂದರ್ಭದಲ್ಲಿ ಸೋಲು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಿ ಎಲ್ಲರೊಂದಿಗೆ ಪ್ರೀತಿ ವಿಶ್ವಾಸದಿಂದ ನಡೆಯುವ ಮೂಲಕ ತಮ್ಮ ಗುರಿ ಸಾಧನೆಯನ್ನು ಮಾಡಬೇಕು. ಆ ಮೂಲಕ ಕಲಿತ ಶಾಲೆಗೆ, ಹೆತ್ತವರಿಗೆ ಹಾಗೂ ಕಲಿಸಿದ ಗುರುಗಳಿಗೆ ಕೀರ್ತಿಯನ್ನು ತರಬೇಕೆಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು. ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ವಿವಿಧ ಶಾಲೆಗಳ ವಿದ್ಯಾರ್ಥಿಗಳು ವಿವಿಧ ಕಲಾ ಪ್ರಕಾರಗಳನ್ನು ಪ್ರದರ್ಶಿಸುವ ಮೂಲಕ ಎಲ್ಲರ ಗಮನ ಸೆಳೆದಿದ್ದು ವಿಶೇಷವಾಗಿತ್ತು.ಗ್ರಾಮ ಪಂಚಾಯಿತಿ ಸದಸ್ಯ ಹರ್ಷವರ್ಧನ, ಪಿಡಿಓ ಭಾಸ್ಕರ್, ಶಿಕ್ಷಣ ಸಂಯೋಜಕಿ ಕುಸುಮ, ಎನ್ಪಿಎಸ್ ತಾಲೂಕು ಅಧ್ಯಕ್ಷ ಮಂಜುನಾಥ್, ಪ್ರಾಂಶುಪಾಲ ಮರಯ್ಯ, ಸಕ್ಕರೆ ಗ್ರಾಮದ ಅಂಬೇಡ್ಕರ್ ವಸತಿ ಶಾಲೆಯ ಪ್ರಾಂಶುಪಾಲ ಸುರೇಶ್, ಮುಖ್ಯ ಶಿಕ್ಷಕ ಜಗದೀಶ್, ಮುಖಂಡ ದಡದಹಳ್ಳಿಸ್ವಾಮಿ, ಶಿಕ್ಷಕರಾದ ಮಧು, ಲಕ್ಷ್ಮಣ, ಭವಾನಿ, ರವಿಪ್ರಕಾಶ್, ಕುಮಾರ, ಭೂಮಿಕ, ನೇತ್ರ, ಮಂಜು, ಯೋಗೇಶ್, ಶಿವಶಂಕರ್, ಅಶೋಕ್, ಪ್ರಕಾಶ್, ವಿವಿಧ ಶಾಲೆಗಳ ಶಿಕ್ಷಕರುಗಳು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಜಲಜೀವನ ಮಿಷನ್: ಆರು ವರ್ಷಗಳಾದರೂ ಕಾಮಗಾರಿ ಅಪೂರ್ಣ

**ಸಚಿವ ರಾಮಲಿಂಗಾ ರೆಡ್ಡಿ ಅಸಮಾಧಾನ। ವಿಳಂಬಕ್ಕೆ ಕಾರಣರಾದ ಗುತ್ತಿಗೆದಾರರ ವಿರುದ್ಧ ಕ್ರಮಕ್ಕೆ ಆದೇಶ। ಓವರ್‌ಹೆಡ್ ಟ್ಯಾಂಕ್ ನಿರ್ಮಾಣಕ್ಕೆ ಸ್ಥಳ ಗುರುತಿಸಲು ಅಧಿಕಾರಿಗಳಿಗೆ ಸೂಚನೆ**

ರಾಮನಗರ: ಜಲ ಜೀವನ್ ಮಿಷನ್ ಯೋಜನೆಯಡಿ ಮನೆ, ಮನೆಗೆ ನೀರು ಪೂರೈಕೆಯ ಮೊದಲ ಹಂತದ ಕಾಮಗಾರಿಗಳು ಇನ್ನು ಪೂರ್ಣಗೊಳ್ಳದಿರುವ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಸಾರಿಗೆ ಸಚಿವ ರಾಮಲಿಂಗಾರೆಡ್ಡಿಯವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಆರು ವರ್ಷ ಕಳೆದರು ಮೊದಲ ಹಂತದ ಕಾಮಗಾರಿ ಪೂರ್ಣಗೊಂಡಿಲ್ಲ, ಕಾಮಗಾರಿಗೆ ಹಣ ಪಾವತಿಬೇಡ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಶುಕ್ರವಾರ ನಡೆದ ಕೆ.ಡಿ.ಪಿ ಸಭೆಯಲ್ಲಿ ಅವರು ಮಾತನಾಡಿದರು. ಜಲಜೀವನ್ ಮಿಷನ್ ಕಾಮಗಾರಿಯ ಬಗ್ಗೆ ತಾಲ್ಲೂಕುವಾರು ಮಾಹಿತಿ ಪಡೆದ ಅವರು ಅಸಮಾಧಾನ ವ್ಯಕ್ತಪಡಿಸಿ, ಡಿಸೆಂಬರ್ ಅಂತ್ಯದ ವೇಳೆ ಎಲ್ಲಾ ಕಾಮಗಾರಿಗಳು ಪೂರ್ಣಗೊಳ್ಳಬೇಕು. ಕಾಮಗಾರಿ ಪೂರ್ಣಗೊಳ್ಳುವವರೆಗೂ ಹಣ ಬಿಡುಗಡೆ ಮಾಡಬೇಡಿ. ಡಿಸೆಂಬರ್ ಮಾಸದೊಳಗೆ ಕಾಮಗಾರಿ ಪೂರ್ಣಗೊಳ್ಳದಿದ್ದರೆ, ಸದರಿ ಗುತ್ತಿಗೆದಾರರಿಗೆ ನೋಟಿಸ್ ಜಾರಿ ಮಾಡಿ, ದಂಡ ವಿಧಿಸಿ ಅವರನ್ನು ಕಪ್ಪುಪಟ್ಟಿಗೆ ಸೇರಿಸಿ ಎಂದು ಆದೇಶಿಸಿದರು. ಕಾಮಗಾರಿ ಪೂರ್ಣಗೊಂಡ ನಂತರ ಎಲ್ಲಾ ಮೊತ್ತವನ್ನು ಬಿಡುಗಡೆ ಮಾಡಿ ಎಂದು ಅವರು ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರ ವೀರನಂಜೇಗೌಡ ಅವರಿಗೆ ಸೂಚನೆ ಕೊಟ್ಟರು.

ಮಾಗಡಿ ಹಾಗೂ ರಾಮನಗರ ತಾಲ್ಲೂಕಿನಲ್ಲಿ ಕೈಗೊಳ್ಳಲಾದ ಜೆಜೆಎಂ ಕಾಮಗಾರಿಗಳಲ್ಲಿ ಹೆಚ್ಚು ಸಮಸ್ಯೆಗಳು ಕಂಡುಬಂದಿದ್ದು, ಸಂಬಂಧಿಸಿದ ಇಲಾಖೆಯ ಕಾರ್ಯಪಾಲಕ ಅಭಿಯಂತರರು ಓವರ್ ಹೆಡ್ ಟ್ಯಾಂಕ್ ನಿರ್ಮಾಣಕ್ಕೆ ಜಾಗದ ಸಮಸ್ಯೆ, ಗುಣಮಟ್ಟದ ಪರಿಶೀಲನೆ ನಡೆಸಿ ಅಗತ್ಯ ಕ್ರಮ ವಹಿಸಬೇಕು ಎಂದರು.

ಚನ್ನಪಟ್ಟಣದ ಕಾಮಗಾರಿಗಳ ಬಗ್ಗೆ ಮಾಹಿತಿ ನೀಡಿದ ಚನ್ನಪಟ್ಟಣದ ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆಯ ಸಹಾಯಕ ಇಂಜಿನಿಯರ್ ಅವರು, ಜೆಜೆಎಂನ 177 ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಕಾಮಗಾರಿಯಲ್ಲಿ 150 ಕಾಮಗಾರಿಗಳು ಪೂರ್ಣಗೊಂಡಿವೆ. ಬಾಕಿ ಇರುವ 27 ಕಾಮಗಾರಿಗಳಲ್ಲಿ ಓವರ್ ಹೆಡ್ ಟ್ಯಾಂಕ್ ನಿರ್ಮಿಸಲು ಸ್ಥಳದ ಕೊರತೆ ಎದುರಾಗಿದೆ ಎಂದು ಸಚಿವರ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು ಓವರ್ ಹೆಡ್ ಟ್ಯಾಂಕ್ ಕಟ್ಟಲು ಎಲ್ಲೆಲ್ಲಿ ನಿವೇಶನದ ಸಮಸ್ಯೆ ಇದೆಯೋ 15 ದಿನದೊಳಗಡೆ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಕಂದಾಯ ನಿರೀಕ್ಷರು, ಗ್ರಾಮ ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿಗಳು ನಿವೇಶನ ಒದಗಿಸಿಕೊಡಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.



ಮಾಗಡಿ ತಾಲೂಕಿನಲ್ಲಿ 393 ಕಾಮಗಾರಿಗಳಲ್ಲಿ 180 ಕಾಮಗಾರಿಗಳು ಪೂರ್ಣಗೊಂಡಿವೆ. 186 ಪ್ರಗತಿಯಲ್ಲಿವೆ, 13 ಕಾಮಗಾರಿಗಳು ಆರಂಭಗೊಂಡಿಲ್ಲ ಎಂದು ಅಧಿಕಾರಿಗಳು ನೀಡಿದ ಮಾಹಿತಿಗೆ ಸಚಿವರು ಅಸಮಾಧಾನ ವ್ಯಕ್ತಪಡಿಸಿದರು. ಜೆ.ಜೆ.ಎಂ.ನ ಬ್ಯಾಚ್ ಒನ್ ಕಾಮಗಾರಿಗಳಲ್ಲಿ ಸಮಸ್ಯೆಯಿದ್ದು ಸುಮಾರು 6 ವರ್ಷವಾದರೂ ಕೆಲವು ಕಾಮಗಾರಿಗಳು ಪ್ರಾರಂಭಗೊಂಡಿಲ್ಲ ಅವುಗಳನ್ನು ಬೇಗ ಪೂರ್ಣಗೊಳಿಸುವಂತೆ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಕೆ. ರಾಜು ಅವರು ಸೂಚಿಸಿದರು. ಇದಕ್ಕೆ ಮಾಗಡಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಾಲಕೃಷ್ಣ ಅವರು ದನಿಗೂಡಿಸಿದರು. ರಾಮನಗರದಲ್ಲಿ 305 ಕಾಮಗಾರಿಗಳಲ್ಲಿ, 205 ಪೂರ್ಣಗೊಂಡಿದೆ, 70 ಪ್ರಗತಿಯಲ್ಲಿದೆ 18 ಕಾಮಗಾರಿಗಳಲ್ಲಿ ನಿವೇಶನದ ಸಮಸ್ಯೆಯಿಂದ ಕಾಮಗಾರಿ ಆರಂಭಗೊಂಡಿಲ್ಲ. ಕನಕಪುರದಲ್ಲಿ 600ಕ್ಕೂ ಹೆಚ್ಚು ಕಾಮಗಾರಿಗಳಲ್ಲಿ 355 ಪೂರ್ಣ ಗೊಂಡಿದೆ 229 ಪ್ರಗತಿಯಲ್ಲಿದೆ 27 ಕಾಮಗಾರಿಗಳಲ್ಲಿ ನಿವೇಶನದ ಸಮಸ್ಯೆ ಇದೆ ಎಂಬ ಮಾಹಿತಿ ಸಭೆಗೆ ದೊರೆಯಿತು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು ಜಿಲ್ಲಾ ಪಂಚಾಯತ್ ಸಿಇಒ ಮತ್ತು ತಾಪಂ ಕಾರ್ಯನಿರ್ವಹಣಾಧಿಕಾರಿಗಳು ಪ್ರತಿವಾರ ಸಭೆ ನಡೆಸಿ ಕಾಮಗಾರಿಯ ಉಸ್ತುವಾರಿ ನಡೆಸಬೇಕು. ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಸೂಚನೆ ಕೊಟ್ಟರು.


ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಮಾಗಡಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಚ್.ಸಿ. ಬಾಲಕೃಷ್ಣ, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಅಧ್ಯಕ್ಷರಾದ ಗಂಗಾಧರ್, ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಅನ್ಮೋಲ್ ಜೈನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸಗೌಡ, ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ ವೇದಿಕೆಯಲ್ಲಿದ್ದರು. ಕೆಡಿಪಿ ಸಭೆಯ ನಾಮನಿರ್ದೇಶಿತ ಸದಸ್ಯರಾದ ಗುರುಮೂರ್ತಿ, ಮುಕುಂದ, ಸುಕನ್ಯಾ, ದೌಲತ್ ಪಾಷ ಹಾಗೂ ವರದರಾಜ್ ಸಭೆಯಲ್ಲಿದ್ದರು.

### ಶೋಕಾಸ್ ನೋಟಿಸ್ ಜಾರಿಗೆ ಸೂಚನೆ

ಬಸವ ವಸತಿ ಹಾಗೂ ಅಂಬೇಡ್ಕರ್ ವಸತಿ ಯೋಜನೆಯಡಿ ಫಲಾನುಭವಿಗಳ ಆಯ್ಕೆ ಮಾಡದಿದ್ದರೆ ಸಂಬಂಧಿಸಿದ ಅಧಿಕಾರಿಗಳಿಗೆ ಹಾಗೂ ಗ್ರಾಮ ಪಂಚಾಯಿತಿಗೆ ಶೋಕಾಸ್ ನೋಟಿಸ್ ನೀಡಿ ಸಸ್ಪೆಂಡ್ ಮಾಡುವಂತೆ ಜಿಲ್ಲಾ ಪಂಚಾಯತ್ ಸಿ.ಇ. ಓ. ಗೆ ಸಚಿವರು ಸೂಚನೆ ನೀಡಿದರು. ವಸತಿ ಯೋಜನೆಗೆ ಸಾರ್ವಜನಿಕರು ಅರ್ಜಿ ಹಾಕಿದ್ದಾಗಿಯೂ ಗ್ರಾಮ ಪಂಚಾಯತ್‌ನವರು ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡದಿದ್ದರೆ ಯೋಜನೆಗಳ ಮಹತ್ವಕ್ಕೆ ಬೆಲೆ ಇರುವುದಿಲ್ಲ, ಇದರಲ್ಲಿ ಲೋಪವೆಸಗಿದ ಗ್ರಾಮ ಪಂಚಾಯತ್‌ಗಳು ಹಾಗೂ ಸಂಬಂಧಿಸಿದವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಪಿ.ಡಿ.ಓ.ಗಳು ಪ್ರತಿ ತಿಂಗಳು ಈ ಯೋಜನೆಯನ್ನು ಪ್ರಗತಿ ಪರಿಶೀಲಿಸಿ ಸ್ಥಳಕ್ಕೆ ಭೇಟಿ ನೀಡಬೇಕು. ಇಲ್ಲಿ ತಾಲೂಕು ಪಂಚಾಯಿತಿ ಇ.ಓ. ಗಳಿಗೂ ಸಾಕಷ್ಟು ಜವಾಬ್ದಾರಿಗಳಿದ್ದು ಬಾಕಿ ಉಳಿಸಿಕೊಂಡವರಿಗೆ ನೋಟಿಸ್ ನೀಡುವಂತೆ ತಿಳಿಸಿದರು. ಜಿಲ್ಲೆಯ ಐದು ಜನ ಇಓ ಗಳು ಡಿಸೆಂಬರ್ 31ರ ಒಳಗೆ ಈ ಯೋಜನೆ ಅಡಿ ಫಲಾನುಭವಿಗಳ ಪಟ್ಟಿ ನೀಡಬೇಕು ಎಂದು ಅವರು ಸೂಚಿಸಿದರು. ಕರ್ನಾಟಕ ನಗರ ನೀರು ಸರಬರಾಜು ಒಳಚರಂಡಿ ಮಂಡಳಿಯಿಂದ ಸಾಮೂಹಿಕ ಶೌಚಾಲಯ ನಿರ್ಮಾಣಕ್ಕಿಂತ ಪ್ರತಿ ಮನೆಗೆ ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಹೆಚ್ಚು ಆದ್ಯತೆ ನೀಡಬೇಕೆಂದು ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ನಟರಾಜು ಗಾಣಕಲ್ ಮಾತನಾಡಿ ಕೆಡಿಪಿ ಸಭೆಯ ಮಾಹಿತಿ ಕನ್ನಡದಲ್ಲೇ ಮುದ್ರಣವಾಗಬೇಕು ಎಂದು ಒತ್ತಾಯಿಸಿದರು.

### ಸಿಎಂಗೆ ಅಭಿಮಾನಿ ಬಳಗದಿಂದ ಸನ್ಮಾನ

ಚಾಮರಾಜನಗರ, ನಗರದ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭಕ್ಕೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅವರ ಅಭಿಮಾನಿ ಬಳಗದ ವತಿಯಿಂದ ಸನ್ಮಾನಿಸಲಾಯಿತು. ಸಿದ್ದರಾಮಯ್ಯ ಅಭಿಮಾನಿ ಬಳಗದ ಅಧ್ಯಕ್ಷರು, ಚಾಮರಾಜನಗರ ತಾಲೂಕು ಕುರುಬರ ಸಂಘದ ಗೌರವ ಅಧ್ಯಕ್ಷ ಬೆಳ್ಳೇಗೌಡ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದೊಡ್ಡ ಗುಲಾಬಿ ಹೂವಿನಹಾರ, ಮೈಸೂರು ಪೇಟ ತೊಡಿಸಿ, ಶಾಲು ಹೊದಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ತಾಲೂಕು ಕುರಬರ ಸಂಘದ ಅಧ್ಯಕ್ಷ ಉಮೇಶ್, ಸಿದ್ದರಾಮಯ್ಯ ಅಭಿಮಾನಿಗಳು ಬಳಗದ ಜಿಲ್ಲಾ ಉಪಾಧ್ಯಕ್ಷ ಸೋಮಣ್ಣ, ಪ್ರಧಾನ ಕಾರ್ಯದರ್ಶಿ ಕುದೇರು ಲಿಂಗಣ್ಣ, ರಾಚಪ್ಪ, ತಮ್ಮಡಹಳ್ಳಿಗೌಡ, ಮಾದಾಪುರ ಗುರುಸ್ವಾಮಿ,



**ಶಾಸಕ ತನ್ವೀರ್ ಸೇಠ್ ಆಗ್ರಹ**

# ಅಧಿಕಾರ ಹಂಚಿಕೆ ಹೈಕಮಾಂಡ್ ಸ್ಪಷ್ಟಪಡಿಸಲಿ

ಮೈಸೂರು: ಅಧಿಕಾರ ಹಂಚಿಕೆ ಕುರಿತು ಏನು ಮಾತುಕತೆ ಆಗಿದೆ ನನಗೇನೂ ಗೊತ್ತಿಲ್ಲ. ಈ ಬಗ್ಗೆ ಹೈ ಕಮಾಂಡ್ ಸ್ಪಷ್ಟನೆ ಕೊಡಬೇಕು ಎಂದು ಶಾಸಕ ತನ್ವೀರ್ ಸೇಠ್ ಆಗ್ರಹಿಸಿದರು.

ಮೈಸೂರಿನಲ್ಲಿ ಮಾಧ್ಯಮಗಳ ಜೊತೆ ಮಾತನಾಡಿ ಅವರು, ರಾಜ್ಯದ ಜನ ಬಿಜೆಪಿ ವಿರುದ್ಧ ಸ್ಪಷ್ಟ ಅಧಿಕಾರ ನೀಡಿದ್ದಾರೆ. ಕಾಂಗ್ರೆಸ್ ಸರ್ಕಾರ ನಿನ್ನೆಗೆ ಎರಡೂವರೆ ವರ್ಷ ಪೂರೈಸಿದೆ. ವರಿಷ್ಠರು ತೀರ್ಮಾನದಂತೆ ನಾವು ಪಾಲಿಸುತ್ತೇವೆ. ಸಿಎಂ, ಡಿಸಿಎಂ ಕೂಡ ಸಾರಿ ಸಾರಿ ಹೇಳಿದ್ದಾರೆ. ವರಿಷ್ಠರು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮ. ನಮಗೆ ಮಾಹಿತಿ ಇಲ್ಲ. ಅಧಿಕಾರ ಹಂಚಿಕೆ ಸೂತ್ರ ನಮಗೆ ಗೊತ್ತಿಲ್ಲ. ನಮ್ಮದು ಸುಭದ್ರ ಸರ್ಕಾರವಾಗಿದ್ದು ನಾನು ಯಾವ ಬಣದಲ್ಲೂ ಇಲ್ಲ. ನಾನು ಕಾಂಗ್ರೆಸ್ ಬಣ. ಯಾರು ಯಾರ ಪರ ಹೋಗುತ್ತಿಲ್ಲ. ನಮ್ಮ ಆದ ನೂರೆಂಟಿದೆ. ನಾವು ನಾಯಕರ ಪೂಜೆ, ಆರಾಧನೆ ಮಾಡಲ್ಲ. ಕೇವಲ ರಾಜಕಾರಣ ಮಾಡಲು ಪಕ್ಷದಲ್ಲಿಲ್ಲ ಎಂದರು.

ಡಿ.ಕೆ.ಸುರೇಶ್, ಕೆ.ಎನ್.ರಾಜಣ್ಣ ಅವರ ಹೇಳಿಕೆಗೆ ವೈಯ್ಯಕ್ತಿಕ ಸ್ವಾತಂತ್ರ್ಯವಿದೆ. ನಾನು ಆರಾಧಿಸುವ ದೈವವೇ ಸರಿ ಅನ್ನೋದು ಸರಿ ಅಲ್ಲ. ಡಿ. ಕೆ.ಶಿವಕುಮಾರ್ ಋಣ ನನ್ನ ಮೇಲೆ ಇದ್ದೇ ಇದೆ. ಈ ಹಿಂದೆ ನನ್ನ ತಂದೆ ತೀರಿ ಹೋದ ಸಮಯದಲ್ಲಿ ಉಪ ಚುನಾವಣೆ ಬಂತು. ಲೋಕಸಭಾ ಸೋತಿದ್ದರೂ ಡಿ.ಕೆ.ಶಿವಕುಮಾರ್ ನನ್ನ ಪರವಾಗಿ ಪ್ರಚಾರ ಮಾಡಿ ಗೆಲ್ಲಿಸಿದರು. ನಾನು ಅದನ್ನು ಮರೆಯಲ್ಲ. ನಾನು ಪಕ್ಷೇತರವಾಗಿ ನಗರ ಪಾಲಿಕೆಗೆ ಆಯ್ಕೆಯಾಗಿದ್ದೆ. ಆ ಸಮಯದಲ್ಲಿ ಸಿದ್ದರಾಮಯ್ಯ ಜೆಡಿಎಸ್ ನಲ್ಲಿದ್ದು, ನನ್ನ ಮೇಯರ್ ಅಭ್ಯರ್ಥಿಯಾಗಿ ಆಯ್ಕೆ ಮಾಡಿದರು. ಆದರೆ, ನಾನು ಮೇಯರ್ ಆಗಲಿಲ್ಲ ಅದು ಬೇರೆ ವಿಚಾರ. ಸಿದ್ದರಾಮಯ್ಯ ಋಣ ಕೂಡ ನನ್ನ ಮೇಲಿದೆ. ನಾನು ಯಾರ ಬಣ ನಾಯಕರ ಪರ ಇಲ್ಲ. ನನ್ನದು ಕಾಂಗ್ರೆಸ್ ಬಣ ಕಾಂಗ್ರೆಸ್ ಸಿದ್ಧಾಂತ. ಪಕ್ಷದ ಹೈ ಕಮಾಂಡ್ ತೀರ್ಮಾನಕ್ಕೆ ನಾನು ಬದ್ಧ. ನಾಯಕತ್ವ ಬದಲಾವಣೆ ಏನೇ ಆದರೂ ನಾವು ಹೈಕಮಾಂಡ್ ನಿಲುವಿಗೆ ಬದ್ಧ. ಅಧಿಕಾರ ಹಂಚಿಕೆ ಏನು ಮಾತುಕತೆ ಆಗಿದೆ ಆ ಬಗ್ಗೆ ನನಗೇನೂ ಗೊತ್ತಿಲ್ಲ. ಈ ಬಗ್ಗೆ ಹೈ ಕಮಾಂಡ್ ಸ್ಪಷ್ಟನೆ ಕೊಡಬೇಕು. ಬದಲಾವಣೆ ಬಗ್ಗೆ ಏನು ಮಾತನಾಡಬೇಡಿ ಅಂತ ಹೈ ಕಮಾಂಡ್ ಹೇಳಿತ್ತು ಎಂದು ಶಾಸಕ ತನ್ವೀರ್ ಸೇಠ್ ಹೇಳಿದರು.



ಸಚಿವ ಸಂಪುಟ ಪುನಾರಚನೆ ಆದರೆ ನನಗೂ ಸಚಿವ ಸ್ಥಾನ ಸಿಗತ್ತೆ.ನನಗೆ ಸಂಪೂರ್ಣ ಭರವಸೆ ಇದೆ. ನಾನು ಸನ್ಯಾಸಿ ಅಲ್ಲ. ಹೈ ಕಮಾಂಡ್ ಏನೇ ನಿರ್ಧಾರ ತೆಗೆದುಕೊಂಡರೂ ನನ್ನ ಬೆಂಬಲ ಇದೆ. ಹೈಕಮಾಂಡ್ ಯಾರನ್ನೇ ಸಿಎಂ ಮಾಡಿದರೂ ನಾನು ಬೆಂಬಲಿಸುತ್ತೇನೆ. ಅಧಿಕಾರ ಕೊಟ್ಟವರ ಪರ ನಾನು ನಿಲ್ಲಲ್ಲ. ಪಕ್ಷದ ಪರ ನಾನು ನಿಲ್ಲುತ್ತೇನೆ ಎಂದು ತಿಳಿಸಿದರು. ಮಲ್ಲಿಕಾರ್ಜುನ್ ಖರ್ಗೆ ಭೇಟಿ ಮಾಡುವ ವಿಚಾರ ಕುರಿತು ಪ್ರತಿಕ್ರಿಯಿಸಿದ ತನ್ವೀರ್ ಸೇಠ್, ನಾನು ನನ್ನ ನಾಯಕರನ್ನು ಭೇಟಿಯಾಗುವ ಸಂದರ್ಭ ಬಂದರೆ ಭೇಟಿ ಆಗುತ್ತೇನೆ. ನಾನು ಧರ್ಮ ಭಿಕ್ಷೆ ಕೇಳಲ್ಲ. ಪಕ್ಷ ಯುದ್ಧಕ್ಕೆ ನಿಲ್ಲು ಅಂದರೆ ನಿಲ್ಲುತ್ತೇನೆ. ಕುರ್ಚಿ ಕೊಟ್ಟು ಅಧಿಕಾರ ಮಾಡು ಅಂದರೂ ಮಾಡುತ್ತೇನೆಂದರು. ಸತೀಶ್ ಜಾರಕಿಹೊಳಿ ಡಿನ್ನರ್ ಮೀಟಿಂಗ್, ಒಕ್ಕಲಿಗರು ದೆಹಲಿ ಭೇಟಿ ವಿಚಾರ ಕುರಿತು ಪ್ರತಿಕ್ರಿಯಿಸಿದ ಶಾಸಕ ತನ್ವೀರ್ ಸೇಠ್, ಇಕ್ಬಾಲ್ ಹುಸೇನ್ ಯಾವ ಜಾತಿ ? ನಾಯಕರ ಮೇಲೆ ನಂಬಿಕೆಯಿಂದ ಮಾತನಾಡುತ್ತಾರೆ. ಯಾರಿಗೆ ರಾಜಕೀಯ ಬೆಂಬಲ ಇದೆ. ಅವರ ಪರ ಕೆಲವರು ನಿಲ್ಲುತ್ತಾರೆ ಎಂದು ತಿಳಿಸಿದರು.

## ನಾಳೆ ಅಕ್ಷರೋ ರಕ್ಷತಿ ರಕ್ಷಿತಃ ತೆರೆಗೆ

ಮೈಸೂರು: ರಾಡಿಯೂ ಪ್ರೊಡಕ್ಷನ್ ವತಿಯಿಂದ ಅಕ್ಷರೋ ರಕ್ಷತಿ ರಕ್ಷಿತಃ ಎಂಬ ವಿಶಿಷ್ಟ ಕಥಾ ಹಂದರದ ಸಿನಿಮಾ ನಿರ್ಮಿಸುತ್ತಿದ್ದು,, ನ. 23 ರ ಬೆಳಗ್ಗೆ 10.30ಕ್ಕೆ ಜಯನಗರ 5 ನೇ ಕ್ರಾಸ್‌ನ ಶ್ರೀನಿವಾಸ ದೇವಾಲಯದಲ್ಲಿ ಮುಹೂರ್ತ ನಡೆಯಲಿದೆ ಎಂದು ನಿರ್ದೇಶಕ ರಕ್ಷಿತ್ ಮಹಾದೇವ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಚಿತ್ರವನ್ನು ಅತಿ ಕಡಿಮೆ ಅವಧಿಯಲ್ಲಿ ನಿರ್ಮಿಸುತ್ತಿರುವುದು ಇದರ ವಿಶೇಷ. ನಾಯಕ, ನಾಯಕಿ ನಟ ನಟಿಯರು ಯಾರೆಂಬುದರ ಬಗ್ಗೆ ಕುತೂಹಲ ಕಾಯ್ದಿಕೊಂಡಿದ್ದು, ಅಂದು ಪ್ರಕಟಿಸಲಾಗುವುದೆಂದರು.

ಚಿತ್ರ ತಂಡದ ಪಂಟ ಸತೀಶ್, ವೈಭವ್, ಸೆಲ್ವಂ, ತೇಜಸ್ವಿ, ತರುಣ್, ದೀಪಕ್ ಇನ್ನಿತರರು ಇದ್ದರು.



## ವಿವಿಧ ಬೇಡಿಕೆಗಳ ಈಡೇರಿಸಲು ಒತ್ತಾಯ



ಚಾಮರಾಜನಗರ, ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರೈತ ಸಂಘಟನೆಗಳಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು.


ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಕಾರ್ಯಕ್ರಮಕ್ಕೆ ಆಗಮಿಸಿದ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿ, ದಕ್ಷಿಣ ಕರ್ನಾಟಕದ ಕಬ್ಬು ಬೆಳೆಗಾರರಿಗೆ ಕಟಾವು ಸಾಗಾಣಿಕೆಯನ್ನು ಬಿಟ್ಟು ಪ್ರತಿ ಟನ್ ಕಬ್ಬಿಗೆ 2900 ರೂ ನೇರವಾಗಿ ರೈತರ ಖಾತೆಗೆ ಜಮಾ ಆಗಲು ಕ್ರಮವಹಿಸಬೇಕು. ಕಳೆದ ಎರಡು ವರ್ಷಗಳ ಹಿಂದಿನ ಬಾಕಿ 1950 ಕೋಟಿ ನೀಡಬೇಕು. ಸಕ್ಕರೆ ಕಾರ್ಖಾನೆಗಳ ಮುಂದೆ ತೂಕದಲ್ಲಿ ಮೋಸ ತಪ್ಪಿಸಲು ತೂಕದ ಯಂತ್ರ ಮತ್ತು ಇಳುವರಿಯಲ್ಲಿನ ಮೋಸ ನಿಲ್ಲಿಸಲು ಲ್ಯಾಬ್ ಸ್ಥಾಪಿಸಬೇಕು. ರಾಜ್ಯದ ಭತ್ತ ಬೆಳೆಗಾರರಿಗೆ ಎಫ್ಆರ್‌ಪಿ ಜೊತೆ 500 ಹೆಚ್ಚುವರಿ ಪ್ರೋತ್ಸಾಹ ಧನ ಹಾಗೂ ಖರೀದಿ ಕೇಂದ್ರಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ತೆರೆಯಬೇಕೆಂದು ಒತ್ತಾಯಿಸಿದರು.

ಜಿಲ್ಲೆಯ ಕೆರೆಕಟ್ಟೆಗಳಿಗೆ ನದಿ ಮೂಲದಿಂದ ನೀರು ತುಂಬಿಸಲುವಿಶೇಷ ಪ್ಯಾಕೇಜ್ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಾಲ ಮನ್ನಾ ಮಾಡಲು ಆಗ್ರಹಿಸಿದರು.

ಚಾಮುಲ್ ಗೆ ಬಾಕಿ ಇರುವ ಐವತ್ತು ಕೋಟಿ ಅನುದಾನ ತಕ್ಷಣ ಮಾಡಬೇಕು. ಅಕ್ರಮ ಸಕ್ರಮ ಯೋಜನೆ ಜಾರಿಗೆ ಹಾಗೂ ಐಸ್ ಕ್ರೀಮ್ ಘಟಕ ಪ್ರಾರಂಭಕ್ಕೆ ಕ್ರಮವಹಿಸಬೇಕು. ಜಿಲ್ಲೆಯ ಕೆರೆಕಟ್ಟೆಗಳಿಗೆ ನದಿ ಮೂಲದಿಂದ ನೀರು ತುಂಬಿಸಲುವಿಶೇಷ ಪ್ಯಾಕೇಜ್ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಾಲ ಮನ್ನಾ ಮಾಡಿ, ಮಾನವ ಪ್ರಾಣಿ ಸಂಘರ್ಷ ತಡೆಯಲು ವಿಶೇಷ ಅನುದಾನ ನೀಡಿ ಸೂಕ್ತ ಕ್ರಮಕೈಗೊಳ್ಳಲು ಒತ್ತಾಯಿಸಲಾಗಿತು.

ಇದೇ ಸಂದರ್ಭದಲ್ಲಿ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ ಮುಖ್ಯಮಂತ್ರಿಗಳಿಗೆ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಮನವಿ ಪತ್ರ ಸಲ್ಲಿಸಲಾಗಿದೆ. ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಬೆಳಗಾವಿ ಅಧಿವೇಶನದಲ್ಲಿ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು. ಇದೇ ವೇಳೆ ಚಾಮರಾಜನಗರ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ಜಿಲ್ಲಾ ಕಾರ್ಯದರ್ಶಿ ಮಲಿಯೂರು ಮಹೇಂದ್ರ, ಹೊನ್ನೇಗೌಡನಹಳ್ಳಿ ಮಹೇಶ್, ಕೆಳ್ಳಿಪುರ ಶ್ರೀಕಂಠ ಮುಂತಾದ ರೈತ ಮುಖಂಡರು ಹಾಜರಿದ್ದರು.

## ಕೃಷ್ಣ ವಂದನ



ಸ್ನೇಹಾ ಆನಂದ್



### ಹೇ ಕೃಷ್ಣಾ!

ಇನ್ನು,
ನನಗಾಗಿ ನಾ ಜೀವಿಸುವೇ,
ಕೊಡು ಎನಗೆ ಆ ಶಕ್ತಿ!
ಒಬ್ಬರಿಗೆ ಅನ್ಯಾಯ ಮಾಡದೆ,
ನಿನ್ನಲ್ಲಿ ತೋರುವ ಭಕ್ತಿ!

ಮಾಡುವ ಕರ್ತವ್ಯವನು,
ನಿಷ್ಠೆಯಲಿ ಮಾಡಿದೆ!
ಗಂಡ, ಮಕ್ಕಳಿಗಾಗಿಯೇ,
ಜೀವನವಿಡಿ ನಿನ್ನಲ್ಲಿ ಬೇಡಿದೆ!

ಇನ್ನಾದರೂ ನನಗಾಗಿ ನಾ,
ಸ್ವಲ್ಪ ದಿನ ಇರಬಾರದೇ!

ಹೇಳು ನನಗೆ ನೀ
ಇದಕ್ಕುತ್ತರವನು,
ಸಂತೈಸಲು ಬಾ ಪಿಡಿದು
ಕರವನು!
ಜೀವನದ ದಡವನು ದಾಟಿ
ನಿನ್ನಲ್ಲಿಗೆ,
ಹಾತೊರೆದು ಬರುವೆನು!

## ವಿಶೇಷ ಪ್ಯಾಕೇಜ್ ನೀಡದೇ ಸಿಎಂ ಜನರ ದುಡ್ಡಲ್ಲಿ ಜಾತ್ರೆ ಮಾಡಲು

ಚಾಮರಾಜನಗರ, ಜಿಲ್ಲಾ ಕೇಂದ್ರದಲ್ಲಿ ಸಹಕಾರ ಸಪ್ತಾಹ ಸಮಾರೋಪ ನೆಪದಲ್ಲಿ ಜಿಲ್ಲೆಗೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಬರಿ ಕೈಯಲ್ಲಿ ಬಂದು ಜಿಲ್ಲೆಯ ಜನತೆಗೆ ಮತ್ತು ಜಿಲ್ಲೆಗೆ ಯಾವುದೇ ಪ್ಯಾಕೇಜ್ ಬಿಡುಗಡೆ ಮಾಡದಿರುವುದ ದುರಾದೃಷ್ಟಕರವಾಗಿದೆ. ಜಿಲ್ಲೆಗೆ ವಿಶೇಷ ಪ್ಯಾಕೇಜ್ ನೀಡದೇ ಮುಖ್ಯಮಂತ್ರಿ ಜನರ ದುಡ್ಡಲ್ಲಿ ಜಾತ್ರೆ ಮಾಡಲು ಬಂದಿದ್ದರು ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ವ್ಯಂಗ್ಯ ಮಾಡಿದರು.



ನಗರದಲ್ಲಿ ಪತ್ರಿಕಾ ಹೇಳಿಕೆ ನೀಡಿದ ಅವರು, ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಮೂವರು ಶಾಸಕರು ಚುನಾಯಿತರಾಗಿದ್ದರೂ ಜಿಲ್ಲೆಯ ಅಭಿವೃದ್ಧಿಗೆ ಒತ್ತು ನೀಡಿಲ್ಲ. ಆಕ್ಸಿಜನ್ ದುರಂತಕ್ಕೆ, ಬಿಜೆಪಿ ಸರ್ಕಾರವನ್ನು ಹೊಣೆ ಮಾಡಿ ಸಂತ್ರಸ್ತರಿಗೆ ಸರ್ಕಾರಿ ನೌಕರಿ ನೀಡುವುದಾಗಿ ನಾಟಕ ಮಾಡಿ ಇಂದಿಗೆ ಎರಡೂವರೆ ವರ್ಷ ಕಳೆದರೂ ನೀವು ಕೊಟ್ಟಂತಹ ಭರವಸೆ ಆಶ್ವಾಸನೆಯಾಗಿ ಉಳಿದಿದೆ ಎಂದು ದೂರಿದರು.

ಜಿಲ್ಲೆಗೆ ಭೇಟಿ ನೀಡಿದ ಸಿಎಂ ಸಿದ್ದರಾಮಯ್ಯನವರು ಆಕ್ಸಿಜನ್ ಸಂತ್ರಸ್ಥರಿಗೆ ಸರ್ಕಾರಿ ನೌಕರಿ ಘೋಷಣೆ ಮಾಡಬೇಕಿತ್ತು ಮತ್ತು ಸಹಕಾರ ಸಂಘಗಳ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿ ನಿರ್ಮಾಣ ಮಾಡಿರುವುದೇ ಸಿದ್ದರಾಮಯ್ಯನ ಸಾಧನೆಯಾಗಿದೆ. ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಕಳೆದ 2 ವರ್ಷಗಳಿಂದಲೂ ಯಾವುದೇ ಸಾಲಗಳನ್ನು ನೀಡದಿರುವುದು, ಸಾಲ ಮರುಪಾವತಿ ಮಾಡಿದ ರೈತರಿಗೆ ಹೆಚ್ಚುವರಿ ಸಾಲ ನೀಡದಂತೆ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ ಹಾಗೂ ಸಹಕಾರ ಸಂಘಗಳ ಚೇತರಿಕೆಗೆ ಆರ್ಥಿಕ ಬಲ ತುಂಬುವ ಪ್ರಯತ್ನವನ್ನು ಮಾಡದ ಸಿಎಂ ಸಿದ್ದರಾಮಯ್ಯನವರು ಯಾವ ಮುಖ ಹೊತ್ತು ಸಹಕಾರ ಸಪ್ತಾಹ ಸಮಾರೋಪಕ್ಕೆ ಭಾಗವಹಿಸಿದರು ಎಂಬುದೇ ಯಕ್ಷ ಪ್ರಶ್ನೆಯಾಗದೆ ಎಂದಿದ್ದಾರೆ.

ಕೃಷಿ ಪತ್ತಿನ ಸಹಕಾರ ಸಂಘಗಳ ವ್ಯವಹಾರದ ಶೇಖಡ 2 ರಂತೆ ಆಯಾ ಸಹಕಾರ ಸಂಘಗಳಿಗೆ ಹಣ ಮರುಪಾವತಿ ಮಾಡುತ್ತಿದ್ದರು. ಈ ವರ್ಷದಿಂದ ಆದನ್ನೂ ಕೂಡ ಶೇಖಡ 1.7 ಕ್ಕೆ ಕಡಿತ ಮಾಡಿ ಸಹಕಾರ ಕ್ಷೇತ್ರದ ಆರ್ಥಿಕ ಬಲವನ್ನು ಕುಗ್ಗಿಸಿ ಕೆಲವೇ ದಿನಗಳಲ್ಲಿ ಸಹಕಾರ ಸಂಘಗಳನ್ನು ಮುಚ್ಚಿಸುವ ಹಂತಕ್ಕೆ ತಂದು ನಿಲ್ಲಿಸಿದ ಕೀರ್ತಿ ಸಿದ್ದರಾಮಯ್ಯನವರಿಗೆ ಸಲ್ಲುತ್ತದೆ ಎಂದಿದ್ದಾರೆ.

ನಿಮ್ಮ ಕುರ್ಚಿ ಅಲುಗಾಡುವ ಸಂದರ್ಭಕ್ಕೆ ತಕ್ಕ ಹೊಸ ಹೊಸ ನಾಟಕಗಳನ್ನು ಮಾಡಿ ನಿಮ್ಮ ಕುರ್ಚಿ ಭದ್ರ ಮಾಡಿಕೊಳ್ಳುವ ನಾಟಕ ಜಿಲ್ಲೆಯ ಜನತೆಗೆ ತಿಳಿದಿದೆ. ಜಿಲ್ಲೆಯ ರೈತರ ಜ್ವಲಂತ ಸಮಸ್ಯೆಗಳು ಹುಲಿ ಚಿರತೆ ದಾಳಿಯಿಂದ ಕೃಷಿ ಕ್ಷೇತ್ರ ಹಿನ್ನಡೆ ಯಾಗುವಂತ ಸಂಧರ್ಭದಲ್ಲಿ ರೈತರಿಗೆ ಮತ್ತು ಜಿಲ್ಲೆಯ ಜನರಿಗೆ ಧೈರ್ಯ ತುಂಬದ ಮುಖ್ಯಮಂತ್ರಿ ಬಂದ ಪುಟ್ಟ ಹೋದ ಪುಟ್ಟ ಗಾದೆಗೆ ಸರಿಯಾಗಿದೆ ಎಂದು ವ್ಯಂಗ್ಯ ವಾಡಿದರು.

# ತಾಂತ್ರಿಕ ಸಮಸ್ಯೆಗಳ ನಡುವೆಯೂ ಇ-ಖಾತೆ ಸೃಜನೆ: ಕೆ.ಶೇಷಾದ್ರಿ

## ರಾಮನಗರ ನಗರಸಭಾ 30ನೇ ಕಂತಿನ ಇ-ಖಾತಾ ವಿತರಣಾ ಕಾರ್ಯಕ್ರಮ

ರಾಮನಗರ: ನಗರ ವ್ಯಾಪ್ತಿಯ ಆಸ್ತಿಗಳಿಗೆ ಇ-ಖಾತ ವಿತರಿಸುವ ಅಭಿಯಾನ ತಾಂತ್ರಿಕ ಸಮಸ್ಯೆಗಳ ನಡುವೆಯೂ ಮುಂದುವರೆಯುತ್ತಿದೆ. ಇಲ್ಲಿಯವರೆಗೆ 8000ಕ್ಕೂ ಅಧಿಕ ಇ-ಖಾತೆಗಳನ್ನು ಸೃಜಿಸಿ ಆಸ್ತಿ ಮಾಲೀಕರಿಗೆ ವಿತರಸಿಲಾಗಿದೆ ಎಂದು ನಗರಸಭೆಯ ಅಧ್ಯಕ್ಷ ಕೆ.ಶೇಷಾದ್ರಿ ತಿಳಿಸಿದರು.

ನಗರಸಭೆಯ ಸಭಾಂಗಣದಲ್ಲಿ 30ನೇ ಕಂತಿನ ಇ-ಖಾತಾ ವಿತರಣಾ ಕಾರ್ಯಕ್ರಮದಲ್ಲಿ 30ಕ್ಕೂ ಹೆಚ್ಚು ಮಂದಿ ಆಸ್ತಿ ಮಾಲೀಕರಿಗೆ ಇ-ಖಾತ ಪ್ರತಿಗಳನ್ನು ವಿತರಿಸಿ ಅವರು ಮಾತನಾಡಿದರು. ತಾವು, ಸದಸ್ಯರು ಮತ್ತು ಅಧಿಕಾರಿಗಳು ಉದ್ದೇಶಿಸಿದಂತೆ ಇ-ಖಾತಾಗಳನ್ನು ಸೃಜಿಸಲು ವಿಳಂಬವಾಗುತ್ತಿದೆ. ಇದಕ್ಕೆ ನಿರಂತರವಾಗಿ ತಾಂತ್ರಿಕ ಸಮಸ್ಯೆಗಳು ಎದುರಾಗುತ್ತಿವೆ. ಈ ಸಮಸ್ಯೆಗಳನ್ನು ನಿವಾರಿಸುವಂತೆ ತಾವು ಪೌರಾಡಳಿತ ನಿರ್ದೇಶನಾಯಲದ ಅಧಿಕಾರಿಗಳ ಗಮನಕ್ಕೂ ತರಲಾಗಿದೆ. ತಾಂತ್ರಿಕ ಸಮಸ್ಯೆಗಳ ನಡುವೆಯೂ ಅಧಿಕಾರಿಗಳು ಮತ್ತು ಸಿಬ್ಬಂದಿ ಇ-ಖಾತಾ ಸೃಜಿಸಲು ಶ್ರಮಿಸುತ್ತಿದ್ದಾರೆ ಎಂದರು.

ಈ ವಿಚಾರದಲ್ಲಿ ಆಗುತ್ತಿರುವ ವಿಳಂಬಕ್ಕೆ ಆಸ್ತಿ ಮಾಲೀಕರು ಸಹಕರಿಸುತ್ತಿದ್ದಾರೆ. ತಾಂತ್ರಿಕ ಸಮಸ್ಯೆ ನಿವಾರಣೆಯಾಗುವವರೆಗೂ ಆಸ್ತಿ ಮಾಲೀಕರ ಮತ್ತು ನಾಗರೀಕರ ಸಹಕಾರದ ಅಗತ್ಯವಿದೆ ಎಂದರು.

**ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯದಿರಲು ಮನವಿ**




ಸ್ವಚ್ಚ ನಗರಕ್ಕೆ ನಗರಸಭೆಯ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಸಂಕಲ್ಪಿಸಿದ್ದೇವೆ. ಇದಕ್ಕೆ ನಾಗರೀಕರ ಸಹಕಾರವೂ ಅಗತ್ಯವಿದೆ. ಕೆಲವು ಪ್ರಜ್ಞಾವಂತರು, ವಿದ್ಯಾವಂತರೇ ತ್ಯಾಜ್ಯವನ್ನು ರಸ್ತೆ ಬದಿಯಲ್ಲಿ, ಚರಂಡಿಗಳಲ್ಲಿ ಬೀಸಾಡುತ್ತಿದ್ದಾರೆ. ಇದು ಸರಿಯಲ್ಲ. ಎಲ್ಲೆಂದರಲ್ಲಿ ಕಸ ಎಸೆಯದಿರಲು ನಗರಸಭೆಯ ಕಮ್ಯುನಿಟಿ ಮೊಬಲೈಸರ್‌ಗಳು ನಗರಾದ್ಯಂತ ನಿಗಾವಹಿಸಿ ನಾಗರೀಕರಲ್ಲಿ ತಿಳುವಳಿಕೆ ಮೂಡಿಸುತ್ತಿದ್ದಾರೆ. ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಆದರೂ ಕೆಲವರು ಈ ವ್ಯವಸ್ಥೆಯ ಕಣ್ಣು ತಪ್ಪಿಸಿ ಕಸ ಎಸೆಯುತ್ತಿದ್ದಾರೆ. ಎಲ್ಲೆಂದರಲ್ಲಿ ಕಸ ಎಸೆದರೆ ದಂಡ ವಿಧಿಸುವುದು ಸೇರಿದಂತೆ ಕಾನೂನು ಕ್ರಮದ ಬಗ್ಗೆ ಈಗಾಗಲೆ ಎಚ್ಚರಿಸಿದ್ದೇವೆ. ನ.10ರಿಂದ ಈ ಕ್ರಮಗಳು ಜಾರಿಯಲ್ಲಿವೆ ಎಂದು ಕೆ.ಶೇಷಾದ್ರಿ ಅವರು ತಪ್ಪಿತಸ್ಥರಿಗೆ ಎಚ್ಚರಿಕೆ ನೀಡಿದರು.

ನಗರಸಭೆಯ ಕಸ ಸಂಗ್ರಹಣಾ ವಾಹನಗಳು ಮನೆ ಬಳಿಗೆ ಬರುತ್ತಿವೆ. ಹಸಿ ಕಸ, ಒಣ ಕಸ ಪ್ರತ್ಯೇಕಿಸಿ ವಾಹನಕ್ಕೆ ಕೊಡಿ ಎಂದು ಮನವಿ ಮಾಡಿದರು.

**ಫ್ಲೆಕ್ಸ್ ಮುದ್ರಿಸುವವರಿಗೂ ಎಚ್ಚರಿಕೆ**

ನಗರಸಭೆಯ ಅನುಮತಿ ಪಡೆಯದೆ ನಗರದಲ್ಲಿ ಫ್ಲೆಕ್ಸ್‌ಗಳನ್ನು ಅಳವಡಿಸಿದರೆ ಕಠೀಣ ಕ್ರಮದ ಬಗ್ಗೆಯೂ ಈಗಾಗಲೆ ಎಚ್ಚರಿಸಲಾಗಿದೆ. ಯಾವ ಪಕ್ಷವೇ ಆಗಲಿ, ಎಷ್ಟೇ ಪ್ರಭಾವಿಗಳಾದರೂ ಕ್ರಮ ನಿಶ್ಚಿತ ಎಂದರು. ಫ್ಲೆಕ್ಸ್‌ಗಳನ್ನು ಮುದ್ರಣದವರಿಗೂ ಈಗಾಗಲೆ ತಿಳುವಳಿಕೆ ಮೂಡಿಸಲಾಗಿದೆ. ಈ ವಿಚಾರದಲ್ಲಿ ನಿರ್ಲಕ್ಷ ತೋರಿದರೆ ಇನ್ನು ಸಹಿಸೋಲ್ಲ. ನಗರಸಭೆಯ ಅನುಮತಿ ಪಡೆದಿರುವುದನ್ನು ದೃಢೀಕರಿಸಿಕೊಂಡ ನಂತರವಷ್ಟೇ ಫ್ಲೆಕ್ಸ್ ಮುದ್ರಿಸಿ ಅಳವಡಿಸಬೇಕು. ಈ ಕ್ರಮ ಉಲ್ಲಂಘನೆಯಾದರೆ ಫ್ಲೆಕ್ಸ್ ಮುದ್ರಣದಾರರ ವಿರುದ್ದವೂ ಕಾನೂನು ಕ್ರಮ ಜರುಗಿಸುವುದು ಅನಿವಾರ್ಯವಾಗಲಿದೆ ಎಂದರು.

ಈ ವೇಳೆ ನಗರಸಭೆಯ ಉಪಾಧ್ಯಕ್ಷೆ ಆಯಿಷಾ ಬಾನು, ಸ್ಥಾಯಿ ಸಮಿತಿ ಅಧ್ಯಕ್ಷ ಫೈರೋಜ್ ಪಾಷ, ಸದಸ್ಯರುಗಳಾದ ಅಜ್ಮತ್, ಗಿರಿಜಮ್ಮ, ವಿಜಯಕುಮಾರಿ, ನಾಗಮ್ಮ, ನಗರಸಭೆಯ ಆಯುಕ್ತ ಡಾ.ಜಯಣ್ಣ ಮುಂತಾದವರು ಹಾಜರಿದ್ದರು.

## ವರ್ತಮಾನ ಪತ್ರಿಕೆಯ ಬಗ್ಗೆ ಮೆಚ್ಚುಗೆ

ತ್ಯಾಜ್ಯ ವಿಲೇವಾರಿ ವಿಚಾರದಲ್ಲಿ ವರ್ತಮಾನ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಜಾಗೃತಿ ಲೇಖನಗಳ ಬಗ್ಗೆ ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಮೆಚ್ಚುಗೆ ವ್ಯಕ್ತಪಡಿಸಿದರು. ತಾಜ್ಯ ವಿಲೇವಾರಿಯ ಬಗ್ಗೆ ವರ್ತಮಾನ ಪತ್ರಿಕೆಯಲ್ಲಿ ಮಾಲಿಕೆ ಅರ್ಥ ಪೂರ್ಣವಾಗಿ ಮೂಡಿ ಬರುತ್ತಿದೆ. ಮಾಧ್ಯಮಗಳು ಜಾಗೃತಿ ಮೂಡಿಸಿದರೆ ಸಮುದಾಯವೂ ಅರ್ಥಮಾಡಿಕೊಳ್ಳುತ್ತದೆ ಎಂದರು.

## ಸರ್ಕಾರಿ ಕಾಲೇಜು ವಿದ್ಯಾರ್ಥಿಗಳ ಸಾಧನೆ




ಚಾಮರಾಜನಗರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಇತ್ತೀಚೆಗೆ ನಡೆದ ಅಂತರ ಕಾಲೇಜು ಅಥ್ಲೆಟಿಕ್ಸ್ ನಲ್ಲಿ ಉತ್ತಮ ಸಾಧನೆ ಮಾಡಿ ಬಹುಮಾನಗಳನ್ನು ಪಡೆದಿದ್ದಾರೆ.

ಆರ್. ನವೀನ್ ಕುಮಾರ್ 5,000 ಮೀ. ಮತ್ತು 1500 ಮೀ. ಓಟದಲ್ಲಿ ದ್ವಿತೀಯ ಸ್ಥಾನ ಹಾಗೂ 4*100 ರಿಲೇ ಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ತಾಮ್ರಸ್ ಎನ್ ದೊಡ್ಡಮನಿ ವಿದ್ಯಾರ್ಥಿಯು 200ಮೀ, 400ಮೀ ಓಟ ಹಾಗೂ ರಿಲೇಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಎನ್. ಯೋಗೇಶ್ ಎಂಬ ವಿದ್ಯಾರ್ಥಿಯು 5000 ಮೀ ಓಟದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಮೋಹನ್ ನಾಯಕ್ ವಿದ್ಯಾರ್ಥಿಯು ಎತ್ತರ ಜಿಗಿತದಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ. ಆರ್. ಮಧುಸೂಧನ್, ಆರ್. ನವೀನ್ ಕುಮಾರ್, ಮಹದೇವಸ್ವಾಮಿ, ತಾಮ್ರಸ್ ದೊಡ್ಡಮನಿ ಅವರು 4*400 ಮೀ ಓಟದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಕಾಲೇಜಿನ ಪ್ರಾಂಶುಪಾಲೆ ಡಾ.ಆರ್.ಎಸ್. ಅಶ್ವಿನಿ ಹಾಗೂ ಪ್ರಭಾರ ದೈಹಿಕ ಶಿಕ್ಷಕ ದೀಪಿತ ಹಾಗೂ ಬೋಧಕ ವೃಂದ ಅಭಿನಂದಿಸಿದ್ದರು.

## ಸಿಎಂಗೆ ಅಭಿಮಾನಿಗಳಿಂದ ಸನ್ಮಾನ



ಚಾಮರಾಜನಗರ: ನಗರದ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭಕ್ಕೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅವರ ಅಭಿಮಾನಿ ಬಳಗದ ವತಿಯಿಂದ ಸನ್ಮಾನಿಸಲಾಯಿತು.

ಸಿದ್ದರಾಮಯ್ಯ ಅಭಿಮಾನಿ ಬಳಗದ ಅಧ್ಯಕ್ಷರು, ಚಾಮರಾಜನಗರ ತಾಲೂಕು ಕುರುಬರ ಸಂಘದ ಗೌರವ ಅಧ್ಯಕ್ಷ ಬೆಳ್ಳೇಗೌಡ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದೊಡ್ಡ ಗುಲಾಬಿ ಹೂವಿನಹಾರ, ಮೈಸೂರು ಪೇಟ ತೊಡಿಸಿ, ಶಾಲು ಹೊದಿಸಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ತಾಲೂಕು ಕುರುಬರ ಸಂಘದ ಅಧ್ಯಕ್ಷ ಉಮೇಶ್ ಎಸ್ ಪಿಕೆ, ಸಿದ್ದರಾಮಯ್ಯ ಅಭಿಮಾನಿಗಳು ಬಳಗದ ಜಿಲ್ಲಾ ಉಪಾಧ್ಯಕ್ಷ ಸೋಮಣ್ಣ, ಪ್ರಧಾನ ಕಾರ್ಯದರ್ಶಿ ಕುದೇರು ಲಿಂಗಣ್ಣ, ರಾಚಪ್ಪ, ತಮ್ಮಡಹಳ್ಳಿಗೌಡ, ಮಾದಾಪುರ ಗುರುಸ್ವಾಮಿ, ಮಹಾದೇವಸ್ವಾಮಿ ಹಾಜರಿದ್ದರು

## ನಾಳೆ ಸಂತೇಮರಹಳ್ಳಿ ಉಪವಿಭಾಗ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ ಸಂತೇಮರಹಳ್ಳಿ ಉಪವಿಭಾಗ ವ್ಯಾಪ್ತಿಯಲ್ಲಿ 3ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ನ.22 ರಂದು ಹಮ್ಮಿಕೊಂಡಿರುವುದರಿಂದ ಅಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.




ಉಮ್ಮತ್ತೂರು, ಬಾಗಳಿ, ಲಿಂಗಣಾಪುರ, ಜನ್ನೂರು, ಜನ್ನೂರು ಹೊಸೂರು, ಹಳ್ಳಿಕೆರೆಹುಂಡಿ, ಗಣಗನೂರು, ಗಣಗನೂರುಪುರ, ನವಿಲೂರು, ಆಲ್ದೂರು, ಬಿಎಂಕೆ ಹುಂಡಿ, ಗೊದ್ದಲಹುಂಡಿ ಹಾಗೂ ಸುತ್ತಮುತ್ತಲ ಗ್ರಾಮ/ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ನಿಗಮದ ಜೊತೆ ಸಹಕರಿಸಬೇಕು. ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಗ್ರಾಹಕರು ಉಚಿತ ದೂ.ಸಂ 1912ಗೆ ಕರೆ ಮಾಡುವಂತೆ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕರಪತ್ರ, ಬ್ಯಾನರ್ ಅಳವಡಿಸಿ ಅಮೀಬಾ ಅರಿವು




ಗುಂಡ್ಲುಪೇಟೆ: ಶಬರಿಮಲೆ ಯಾತ್ರೆಗೆ ಕೇರಳ ರಾಜ್ಯಕ್ಕೆ ಕರ್ನಾಟಕದ ಅಯ್ಯಪ್ಪ ಸ್ವಾಮಿ ಭಕ್ತಾದಿಗಳು ಹೋಗುತ್ತಿರುವುದರಿಂದ ಮದ್ದೂರು ಚೆಕ್ ಪೋಸ್ಟ್ ಮತ್ತು ಕನ್ನೆಗಾಲ ಹತ್ತಿರವಿರುವ ಟೋಲ್ ಗೇಟ್ ಹತ್ತಿರ ತಾಲೂಕು ಆರೋಗ್ಯ ಅಧಿಕಾರಿಗಳಾದ ಡಾಕ್ಟರ್ ಅಲಿಂ ಪಾಷಾ ಮತ್ತು ತಂಡದವರು ನೆಗ್ಲೇರಿಯಾ ಪೈಲೆರಿ ಮೆದುಳು ತಿನ್ನುವ ಅಮೀಬಾ ಕಾಯಿಲೆ ಬಗ್ಗೆ ಕರಪತ್ರ ಮತ್ತು ಬ್ಯಾನರ್ ಗಳನ್ನು ಅಳವಡಿಸಿ ಅರಿವು ಮೂಡಿಸಲಾಯಿತು

ಅಯ್ಯಪ್ಪ ಸ್ವಾಮಿ ಭಕ್ತಾದಿಗಳು ನಿಂತ ನೀರಿನಲ್ಲಿ ಸ್ನಾನ ಮಾಡುವಾಗ ಮೂಗಿನ ಕ್ಲಿಪ್ ಗಳನ್ನು ಬಳಸಬೇಕು ಅಥವಾ ನಿಮ್ಮ ಮೂಗನ್ನು ಬಿಗಿಯಾಗಿ ಮುಚ್ಚಿಡಿದು ನೀರು ಮೂಗಿಗೆ ಪ್ರವೇಶಿಸದಂತೆ ಎಚ್ಚರವಹಿಸಲು ಮಾಹಿತಿಯನ್ನು ತಿಳಿಸಲಾಯಿತು . ಅದೇ ರೀತಿ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಾಧಿಕಾರಿಗಳಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ತಮ್ಮ ಗ್ರಾಮದ ಅಯ್ಯಪ್ಪ ಸ್ವಾಮಿ ಭಕ್ತಾದಿಗಳ ಶಿಬಿರಗಳಿಗೆ ತೆರಳಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಮಾಹಿತಿ ನೀಡಲು ತಿಳಿಸಲಾಯಿತು. ನೀರಿನ ಸಂಪರ್ಕದ ನಂತರ 7 ದಿನಗಳ ಒಳಗೆ ಜ್ವರ, ತೀವ್ರ ತಲೆನೋವು, ವಾಕರಿಕೆ ವಾಂತಿ, ಕುತ್ತಿಗೆ ಬಿಗಿತ, ಗೊಂದಲ, ಮಾನಸಿಕ ಸ್ಥಿತಿಗಳಲ್ಲಿ ಬದಲಾವಣೆಗಳು ಹಾಗೂ ವ್ಯಕ್ತಿಯ ವರ್ತನೆಯಲ್ಲಿ ಅಶ್ವಸ್ಥತೆ ಕಂಡುಬಂದಲ್ಲಿ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರನ್ನು ಸಂಪರ್ಕಿಸಲು ಮಾಹಿತಿಯನ್ನು ತಿಳಿಸಲಾಯಿತು....

### ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಕೆ.ಪಿ ಗಂಗಾಧರ್ ಹೇಳಿಕೆ

## ಕಲಿಕಾ ಮಟ್ಟ ಹೆಚ್ಚಿಸಲು ಉಪನ್ಯಾಸಕರಿಗೂ ತರಬೇತಿ

ಹಾಸನ: ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಭವಿಷ್ಯದ ಉತ್ತಮ ಪ್ರಜೆಗಳನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಉಪನ್ಯಾಸಕರ ಪಾತ್ರ ಅಪರಾವಗಿದೆ, ಉಪನ್ಯಾಸಕರ ಸತತ ಪರಿಶ್ರಮ ಹಾಗೂ ವೃತ್ತಿ ಬದ್ಧತೆಯಿಂದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ಸಾಧ್ಯ ಈ ಸಲುವಾಗಿ ಅವರಿಗೂ ತರಬೇತಿ ಅಗತ್ಯ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಕೆ.ಪಿ ಗಂಗಾಧರ್ ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆ,(ಪದವಿಪೂರ್ವ) ಹಾಗೂ ನಗರದ ಹೊರ ವಲಯದಲ್ಲಿರುವ ಎಂ.ಎಸ್ ರಾಮಯ್ಯ ಅವರ ನೌಕಿಸ್ ಕಾಲೇಜು ವತಿಯಿಂದ ನೌಕಿಸ್ ಸಭಾಂಗಣದಲ್ಲಿ ಇಂದು ಆಯೋಜಿಸಲಾಗಿದ್ದ ಜಿಲ್ಲಾ ಖಾಸಗಿ ಅನುದಾನಿತ, ಅನುದಾನರಹಿತ ಮತ್ತು ಸರ್ಕಾರಿ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರು ಮತ್ತು ಉಪನ್ಯಾಸಕರಾಗಿ ಎರಡು ದಿನದ ಉಪನ್ಯಾಸಕರಿಗೆ ಪುನಶ್ಚೇತನ ಕಾರ್ಯಗಾರ ಉದ್ಘಾಟಿಸಿ ಅವರು ಮಾತನಾಡಿದರು. ಪ್ರಶ್ನೆ ಪತ್ರಿಕೆಯ ಮಾದರಿ ಅಭ್ಯಾಸಮಾಡದೆ ಇರುವುದರಿಂದ ಇತ್ತೀಚಿನ ದಿನಗಳಲ್ಲಿ ಕೆಲ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದುಳಿದ್ದಿದ್ದಾರೆ, ಅಂತಹ ವಿದ್ಯಾರ್ಥಿಗಳಿಗೆ ಘಟಕ ಪರಿಕ್ಷೆಯನ್ನು ನೀಡುವುದರಿಂದ ಉತ್ತರ್ಣಿರಾಗುತ್ತಾರೆ, ಇದಕ್ಕೆ ಶಿಕ್ಷಕರು ಪ್ರೋತ್ಸಾಹ ಅವಶ್ಯ ಹಾಗಾಗಿ ಇಂತಹ ಪುನಶ್ಚೇತನ ಕಾರ್ಯಕ್ರಮ ಹಮ್ಮಿಕೊಳ್ಳುವುದು ರಿಂದ ಉತ್ತಮ ಫಲಿತಾಂಶವನ್ನು ನೋಡಬಹುದುಎಂದರು. ಉಪನ್ಯಾಸಕರು ತರಬೇತುದಾರರಾದಾಗ ಮಾತ್ರ ಮಕ್ಕಳಿಗೆ ಮೌಲ್ಯಾಧಾರಿತ ಹಾಗೂ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯ ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ, ಈ ಬಾರಿ ಹಾಸನ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆ ಅತಿ ಹೆಚ್ಚು ಅಂಕ ಪಡೆಯುವ ಮೂಲಕ ಮೊದಲೇನೇ ಸ್ಥಾನಕ್ಕೆ ತರಲು ಸಾಕಷ್ಟು ಶ್ರಮ ವಹಿಸಲಾಗುತ್ತಿದೆ ಇದಕ್ಕೆ ಎಲ್ಲಾ ಭೋದಕ ಬೋಧಕೇತರ ವರ್ಗಗಳ ಸಿಬ್ಬಂದಿಗಳ ಸಹಕಾರ ಅಗತ್ಯ ಎಂದರು.



ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘದ ಅಧ್ಯಕ್ಷ ಪ್ರಶಾಂತ್ ಕುಮಾರ್, ಉಪಾಧ್ಯಕ್ಷ ಜಿ.ಆರ್ ದೇವರಾಜು, ಕಾರ್ಯದರ್ಶಿ ಎಂಟಿ ತಿಮ್ಮೇಗೌಡ, ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ಎಚ್.ಟಿಸುರೇಶ್, ವಿಭಜಿತ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಗಣಪತಿ, ನೌಕಿಸ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಮ್ ವೇಣುಗೋಪಾಲ ರಾವ್, ಕಾಲೇಜಿನ ಡೀನ್ ಶ್ರೀಪಾದ ಮಾರ್ಕಂಡೆ , ಕಾಲೇಜಿನ ದಾಖಲಾತಿ ವಿಭಾಗದ ಮುಖ್ಯಸ್ಥೆ ರಾಜಲಕ್ಷ್ಮಿ, ಅಧ್ಯಾಪಕ ವರ್ಗದವರು, ಜಿಲ್ಲಾ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು ಇದ್ದರು.

## ಸೇವಾ ಕಾರ್ಯದೊಂದಿಗೆ ಶತಮಾನೋತ್ಸವಕ್ಕೆ ಚಾಲನೆ



ಮೈಸೂರು: ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವದ ಅಂಗವಾಗಿ ಆಶ್ರಮ ಆವರಣದಲ್ಲಿ ಪೌರಕಾರ್ಮಿಕರಿಗಾಗಿ ನಾರಾಯಣ ಸೇವೆಯೊಂದಿಗೆ ನಾಲ್ಕು ದಿನಗಳ ಕಾರ್ಯಕ್ರಮಕ್ಕೆ ಸಂಭ್ರಮದ ಚಾಲನೆ ದೊರೆಯಿತು.

ನಾರಾಯಣ ಸೇವೆ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿದ ಪೇಜಾವರ ಅಧೋಕ್ಷಜ ಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಮಾತನಾಡಿ ದುರ್ಗುಣ ದೂರ ಮಾಡಿಕೊಂಡು ಒಳ್ಳೆ ಗುಣಗಳನ್ನು ಅಳವಡಿಸಿಕೊಂಡು ನಾರಾಯಣನ ಸೇವೆ ಮಾಡೋಣ. ವಿವೇಕಾನಂದರು ವಸುದೈವ ಕುಟುಂಬಕಂ ಎಂಬ ಭಾರತದ ಚಿಂತನೆಯನ್ನು ವಿದೇಶದಲ್ಲಿ ಬಿತ್ತಿ ಮೊಳಗಿಸಿದರು. ಆ ಚಿಂತನೆ ನಮ್ಮಲ್ಲಿ ಸದಾ ಜಾಗೃತವಾಗಿದೆ ಎಂಬುದನ್ನು ಪ್ರತಿಬಿಂಬಿಸುತ್ತ ರಾಮಕೃಷ್ಣ ಆಶ್ರಮದ ಮೈಸೂರು ಶಾಖೆಯಲ್ಲಿ ಯಾರನ್ನು ಸಮಾಜದಲ್ಲಿ ಕೊನೆ ವರ್ಗ ಎಂದು ಹೇಳುತ್ತಾರೆ ಅವರಿಗೆ ಶತಮಾನೋತ್ಸವದ ಉತ್ಸವದ ಮೊದಲ ದಿನವೇ ನೀವೇ ಮೊದಲಿಗರು ಎಂದು ನಾರಾಯಣ ಸೇವೆ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ನಾವೆಲ್ಲರೂ ಆಸ್ತಿಕರು ಭಗವಂತನ ಆರಾಧನೆ ಮಾಡುವವರು ನಮ್ಮ ಕಾರ್ಯಗಳ ಹಿಂದೆ ಭಗವಂತನ ಕೃಪೆ ಇರಬೇಕಿದೆ. ಜೀವನದಲ್ಲಿ ಕೃಷ್ಣ, ಪಾರ್ಥ ಇಬ್ಬರ ಅಂಶ ಇರಬೇಕು. ಆದರೆ, ಗುಡಿ, ಗೋಪುರದಲ್ಲಿ ಭಗವಂತನನ್ನು ಆರಾಧಿಸುವುದು ನಿಜವಾದ ಪೂಜೆ ಅಲ್ಲ. ದೇವರು ಸಮಾಜದಲ್ಲಿರುವ ಎಲ್ಲರ ಹೃದಯದಲ್ಲಿ ನೆಲೆಸಿದ್ದೇನೆ. ಎಲ್ಲರನ್ನು ಸ್ನೇಹ ಭಾವದಿಂದ ನೋಡಿದರೆ ಅದು ನಿಜವಾದ ಸೇವೆ ಎಂದರು.

ಉತ್ತಮ ಗುಣಗಳನ್ನು ಅಳವಡಿಸಿಕೊಂಡು ಕೆಟ್ಟ ಗುಣಗಳನ್ನು ದೂರ ಮಾಡಿಕೊಳ್ಳುವುದೇ ನಾರಾಯಣ ಪದದ ಅರ್ಥ. ದುರ್ಗುಣಗಳನ್ನು ನಾವು ಮನಸಿನಲ್ಲಿ ಸ್ವಚ್ಚತೆ ಮಾಡಿಕೊಳ್ಳಬೇಕು. ಅದಕ್ಕೆ ಪೌರಕಾರ್ಮಿಕರು ಉದಾಹರಣೆಯಾಗಿದ್ದು, ಪ್ರತಿ ದಿನ ಬೆಳಗ್ಗೆ ನಗರವನ್ನು ಸ್ವಚ್ಛಗೊಳಿಸುವ ಮೂಲಕ ಪಾಠ ಮಾಡುತ್ತಿದ್ದೀರಾ. ಈ ಹಿನ್ನೆಲೆಯಲ್ಲಿ ದುರ್ಗುಣ ದೂರ ಮಾಡಿಕೊಡು ಒಳ್ಳೆ ಗುಣಗಳನ್ನು ಇಟ್ಟುಕೊಂಡು ನಾರಾಯಣನ ಸೇವೆ ಮಾಡೋಣ ಎಂದು ತಿಳಿಸಿದರು.

ಕಡಪದ ರಾಮಕೃಷ್ಣ ಮಿಷನ್ ಆಶ್ರಮದ ಕಾರ್ಯದರ್ಶಿ ಅನುಪಮಾನಂದಜಿ ಮಾತನಾಡಿ, ಭಾರತ ಉದ್ಧಾರ ಆಗಬೇಕಾದರೆ ಜನ ಸಾಮಾನ್ಯರು ಉದ್ಧಾರ ಆಗಬೇಕು ಎಂದು ವಿವೇಕಾನಂದರು ಹೇಳಿದರು. ಅಂತ ಕಾರ್ಯದಲ್ಲಿ ರಾಮಕೃಷ್ಣ ಮಿಷನ್ ತೊಡಗಿಸಿಕೊಂಡಿದೆ. ವಿದ್ಯೆಯ ಜತೆಗೆ ನಾನಾ ಸೇವೆ ಕಾರ್ಯ ಮಾಡುತ್ತಿದೆ. ನಾನು 40 ವರ್ಷದಿಂದ ಮೈಸೂರು ಆಶ್ರಮ ನೋಡುತ್ತಿದ್ದೇನೆ. ಇಲ್ಲೂ ಅಪಾರ ಸೇವಾ ಕಾರ್ಯ ನಡೆಯುತ್ತಿದೆ. ಜ್ಞಾನದಾನ ಮತ್ತು ಆಧ್ಯಾತ್ಮ ದಾನವನ್ನು ಪ್ರವಚನ ಮೂಲಕ ಮಾಡಲಾಗುತ್ತಿದೆ. ಇಲ್ಲಿನ ಸ್ವಾಮೀಜಿಗಳು ಶಾರೀರಿಕ, ಮಾನಸಿಕವಾಗಿ, ಬೌದ್ಧಿಕವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅನೇಕ ಸ್ವಾಮೀಗಳ ಸಮ್ಮುಖದಲ್ಲಿ ನಾರಾಯಣ ಸೇವೆ ಕಾರ್ಯಕ್ರಮ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಒಳ್ಳೆಯ ಕೆಲಸ ಮಾಡುವಾಗ ಹೇಗೆ ಅಡಚಣೆ ಬರುತ್ತದೆ ಎನ್ನುವುದಕ್ಕೆ ವಿವೇಕ ಸ್ಮಾರಕ ಉದಾರಣೆ. ಮೈಸೂರಿನಲ್ಲಿ ವಿವೇಕ ಸ್ಮಾರಕ ಆಗುತ್ತಿರುವುದೇ ನಮ್ಮ ಪುಣ್ಯ. ಧರ್ಮದ ಹಾದಿಯಲ್ಲಿ ನಡೆಯುವಾಗ ಎಷ್ಟೇ ಅಡೆಚಣೆ ಇದ್ದರೂ ಒಳ್ಳೆಯದಾಗುತ್ತದೆ. ಈ ವಿಚಾರದಲ್ಲಿ ವಿರೋಧಿಸಿದವರಿಗೆ ಮುಕ್ತಿದಾನಂದಜೀ ಅವರು ಕಣ್ತೆರಿಸಿದ್ದಾರೆ. ಪೌರಕಾರ್ಮಿಕ ಮೂಲಕ ದೇವರ ಸೇವೆ ಮಾಡುತ್ತಿದ್ದಾರೆ. ವಿವೇಕಾ ಸ್ಮಾರಕಕ್ಕೆ ನಿಮ್ಮ ಜೊತೆ ಎಲ್ಲರೂ ಒಟ್ಟಾಗಿ ನಿಲ್ಲುತ್ತೇವೆ ಎಂದು ಭರವಸೆ ನೀಡಿದ ಅವರು, ಕರ್ತವ್ಯವೇ ದೇವರು. ಒಳ್ಳೆ ಕೆಲಸಗಳೇ ದೇವರ ಸೇವೆ ಎಂಬುದನ್ನು ಅರಿತುಕೊಂಡು ಜೀವನಸಾಗಿಸಿ ಸಲಹೆ ನೀಡಿದರು.

ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಮಾತನಾಡಿ,ದರು. ಕಾರ್ಯಕ್ರಮದಲ್ಲಿ 100ಕ್ಕೂ ಹೆಚ್ಚು ಪೌರಕಾರ್ಮಿಕರಿಗೆ ತಿಲಕ ಇಟ್ಟು, ತಲೆ ಮೇಲೆ ಹೂ ಇರಿಸಿ ಹೊದಿಕೆ, ಶರ್ಟ್ ಪೀಸ್, ಸೀರೆ, ಟಾರ್ಚ್ ಲೈಟ್, ಪುಸ್ತಕ ಹಾಗೂ ಟವಲ್ ಒಳಗೊಂಡ ವಿಶೇಷ ಕಿಟ್ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಹಲಸೂರು ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ಬೋಧಸ್ವರೂಪನಂದಜಿ, ನಗರ ಪಾಲಿಕೆ ಮಾಜಿ ಸದಸ್ಯ ಡಿ.ನಾಗಭೂಷಣ್, ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ ಗೌರವ ಕಾರ್ಯದರ್ಶಿ ಡಾ.ಹೆಚ್.ಸುದರ್ಶನ್, ಕನ್ನಡ ಪರಿಚಾರಕ ಅರವಿಂದ ಶರ್ಮ ಉಪಸ್ಥಿತರಿದ್ದರು.

## ನಾಳೆ ದಾನಿಗಳ ದಿನಾಚರಣೆ

ಮೈಸೂರು: ದಿವಾನ್ಸ್ ರಸ್ತೆಯ ಕುಂಚಿಟಿಗರ ಸಂಘದ ವತಿಯಿಂದ ನ.23ರ ಮಧ್ಯಾಹ್ನ 2ಕ್ಕೆ ದಾನಿಗಳ ದಿನಾಚರಣೆ, ಪ್ರತಿಭಾ ಪುರಸ್ಕಾರ ಹಾಗೂ ವಿದ್ಯಾರ್ಥಿ ವೇತನ ವಿತರಣಾ ಸಮಾರಂಭ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಸಿ.ಕೆ. ಗಣೇಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾರ್ಯನ ಅತಿಥಿಗಳಾಗಿರುವರು. ತಾವು ಅಧ್ಯಕ್ಷತೆ ವಹಿಸಲಿರುವುದಾಗಿ ಹೇಳಿದರು. ಇನ್ನಿತರ ಪದಾಧಿಕಾರಿಗಳಾದ ಪಿ. ಶಿವಕುಮಾರ್, ಸಿ. ಲೋಕೇಶ್, ಸುರೇಶ್, ಸತೀಶ್, ವಿ. ರವಿ, ಆರ್. ಉಮೇಶ್, ಚಂದ್ರು, ಶಿವಶಂಕರ್, ದಿನೇಶ್ ಹಾಜರಿದ್ದರು.



## ಅಧಿವೇಶನದಲ್ಲಿ ಬೇಡಿಕೆಗಳ ಚರ್ಚಿಸಿ



ಗುಂಡ್ಲುಪೇಟೆ: ತಾಲೂಕಿನ ಗ್ರಾಮ ಪಂಚಾಯತ್ ನೌಕರರು ವಿವಿಧ ಬೇಡಿಕೆಗಳ ಬಗ್ಗೆ ಮುಂದೆ ನಡೆಯುವ ಚಳಿಗಾಲ ಅಧಿವೇಶನದಲ್ಲಿ ಚರ್ಚೆ ಮಾಡಿ ನೌಕರರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರಕ್ಕೆ ಮನವಿ ಮಾಡಲು ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಗೆ ಮನವಿ ನೀಡಿದರು.

ಗ್ರಾ.ಪಂ ಕರ್ತವ್ಯ ನಿರ್ವಹಿಸುತ್ತಿರುವ ಕರ ವಸೂಲಿಗಾರ, ಕ್ಲರ್ಕ್ ಡಾಟಾ ಎಂಟ್ರಿ ಆಪರೇಟರ್, ನೀರುಗಂಟಿ,ಜವಾನ ಸ್ವಚ್ಚತಗಾರರನ್ನು ಸರ್ಕಾರಿ ನೌಕರರೆಂದು ಘೋಷಿಸಬೇಕು, ನೌಕರರಿಗೆ ವೇತನ ಹೆಚ್ಚಳ ಮಾಡಬೇಕು, ನಿವೃತ್ತಿ ಹಾಗೂ ಮರಣಹೊಂದಿದವರಿಗೆ 6000/– ಪಿಂಚಣಿ ಹತ್ತುಲಕ್ಷ ಇಡಗಂಟು ನೀಡಬೇಕು, ಪ್ರತಿಯೊಬ್ಬ ಪಂಚಾಯಿತಿಗೆ ಒಬ್ಬರೇ ಚಾಲಕರೆಂದು ಪರಿಗಣಿಸಿ ಹಿನಯದು ಸಾವಿರ ಸಂಬಳ ನೀಡಬೇಕು, ಕಡಿಮೆ ಅದಾಯವಿರುವ ನವಕರರ ಪಡಿತರ ರದ್ದುಪಡಿಸಬಾರದು, ಇನ್ನೂ ಅನೇಕ ಬೆಡಿಕೆಗಳನ್ನು ಚಲಿಗಾಲದ ಅದಿವೇಶನದಲ್ಲಿ ಚರ್ಚಿಸಿ ಸರ್ಕಾರದ ನ ಹರಿಸುವಂತೆ ಶಾಸಕರಿಗೆ ಮನವಿ ಮಾಡಿದರು.

ಜಿಲ್ಲಾ ಗ್ರಾಮ ಪಂಚಾಯತ್ ನೌಕರರ ಸಂಘದ ಜಿಲ್ಲಾ ಅಧ್ಯಕ್ಷರು ಬರಗಿ ಸಿದ್ದರಾಜು ಹಾಗೂ ವೆಂಕಟೇಶ್ ತಾಲೂಕು ಅಧ್ಯಕ್ಷರು ಬೊಮ್ಮನಹಳ್ಳಿ ರಾಜಣ್ಣ, ತಾಲ್ಲೂಕು ಉಪಾಧ್ಯಕ್ಷ ಲೋಕೇಶ್, ಕಾರ್ಯದರ್ಶಿ ಅಣ್ಣೂರ್ ಸಿದ್ದರಾಜು,ತಾಲೂಕಿನ ಗ್ರಾಮ ಪಂಚಾಯತ್ ನೌಕರರು, ಪಧಾಧಿಕಾರಿಗಳು ಹಾಜರಿದ್ದರು.

## ವಿಕಲಚೇತನರಿಗೆ ಸಲಕರಣೆ ವಿತರಣೆ



ಗುಂಡ್ಲುಪೇಟೆ: ವಿಕಲಚೇತನ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ವತಿಯಿಂದ 2024–25 ನೇ ಸಾಲಿನ ವಿವಿಧ ಯೋಜನೆಗಳ ಅಡಿಯಲ್ಲಿ ಆಯ್ಕೆಯಾಗಿರುವ ಫಲಾನುಭವಿಗಳಿಗೆ ಯಂತ್ರಚಾಲಿತ ದ್ವಿಚಕ್ರವಾಹನ, ಬ್ಯಾಟರಿ ಚಾಲಿತ ವೀಲ್ ಚೇರ್, ಶ್ರವಣದೋಷವುಳ್ಳ ವಿಕಲಚೇತನರಿಗೆ ಹೊಲಿಗೆ ಯಂತ್ರ ನೀಡುವ ಯೋಜನೆ,ಶ್ರವಣ ಸಾಧನವನ್ನು ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ವಿತರಿಸಿದರು.

ನಂತರ ಮಾತನಾಡಿ ಅಂಗವಿಕಲ ಕಲ್ಯಾಣ ಇಲಾಖೆ ವತಿಯಿಂದ ದ್ವಿಚಕ್ರ ವಾಹನ ಶ್ರವಣ ದೋಷ ಯಂತ್ರ, ಬ್ಯಾಟರಿ ಚಾಲಿತ ವೀಲ್ ಚೇರಿ ನೀಡಿದ್ದ ನಮ್ಮ ತಾಲ್ಲೂಕಿನಲ್ಲಿ ಇಂತಹ ಸಮಸ್ಯೆ ಯವರು ಹೆಚ್ಚಿದ್ದು ಅದಷ್ಟು ಪಲಾನುಭವಿಗಳ ಅಯ್ಕೆ ನಡೆಸಿ ಮುಂದಿನ ದಿನಗಳಲ್ಲಿ ವಿತರಿಸುವಂತೆ ಇಲಾಖೆಗೆ ಸೂಚಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಅಂಗವಿಕಲ ಕಲ್ಯಾಣಾಧಿಕಾರಿ ಕೆ ಎಂ ಮಂಜುನಾಥ್, ಎಂಆರ್ ಡಬ್ಲೂ ಎಸ್ ಮಂಜುಳ, ಮಾಜಿ ಪುರಸಭೆ ಅಧ್ಯಕ್ಷ ಶಶಿಧರ್ ದೀಪು, ಮಧುಸೂದನ್, ವಿಶ್ವನಾಥ್, ಸಾಹುಲ್, ಮಣಿ ಮಡಹಳ್ಳಿ, ವೆಂಕಟೇಶ್ ಸೇರಿದಂತೆ ಮತ್ತಿತರರಿದ್ದರು.

## ಒಳಮೀಸಲಾತಿ ಪೂರ್ಣ ಪ್ರಮಾಣದಲ್ಲಿ ಜಾರಿ ಮಾಡುವಂತೆ ಸಿಎಂಗೆ ಮನವಿ



ಚಾಮರಾಜನಗರ: ಒಳ ಮೀಸಲಾತಿ ಸಮಗ್ರವಾಗಿ ಪೂರ್ಣ ಪ್ರಮಾಣದಲ್ಲಿ ಜಾರಿ ಮಾಡುವಂತೆ ಒತ್ತಾಯಿಸಿ ಮಾದಿಗ ಮೀಸಲಾತಿ ಹೋರಾಟ ಸಮಿತಿ ವತಿಯಿಂದ ನಗರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು.

ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿಯಲ್ಲಿ ಮಾದಿಗ ಸಮುದಾಯವು ಹೆಚ್ಚಿನ ಸಂಖ್ಯೆಯಲ್ಲಿದ್ದು ಈ ಸಮುದಾಯವು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಎಲ್ಲಾ ರಂಗದಲ್ಲೂ ತುಂಬಾ ಹಿಂದುಳಿದ್ದು, ಈ ಸಂಬಂಧ ಸುಮಾರು 35 ವರ್ಷಗಳಿಂದಲೂ ನಿರಂತರವಾಗಿ ಒಳಮೀಸಲಾತಿ ಹೋರಾಟವನ್ನು ಮಾಡಿಕೊಂಡು ಬಂದಿದ್ದೇವೆ. ನಮ್ಮ ಹೋರಾಟವನ್ನು ಮನಗಂಡ ಸುಪ್ರೀಂ ಕೋರ್ಟ್ ಆಗಸ್ಟ್ 2024ರಲ್ಲಿ ಶೋಷಣೆಗೆ ಒಳಗಾಗಿರುವ ಎಲ್ಲಾ ರಂಗಗಳಲ್ಲೂ ಅನ್ಯಾಯವಾಗಿರುವ ಮಾದಿಗ ಸಮುದಾಯಕ್ಕೆ ಒಳಮೀಸಲಾತಿ ಜಾರಿ ಮಾಡಬೇಕೆಂದು ಸುಪ್ರೀಂ ಕೋರ್ಟ್ ಆದೇಶ ಮಾಡಿರುತ್ತದೆ. ಪಕ್ಕದ ರಾಜ್ಯಗಳಾದ ತೆಲಂಗಾಣ ಮತ್ತು ಆಂಧ್ರಪ್ರದೇಶ ಈಗಾಗಲೇ ಬಡ್ತಿ, ಮುಂಬಡ್ತಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಒಳಮೀಸಲಾತಿ ಜಾರಿ ಮಾಡಿರುತ್ತವೆ. ಮಾದಿಗ ಸಮಾಜದ ಹೋರಾಟ ಮನಗಂಡ ಸರ್ಕಾರ 2025 ಆ.19 ರಂದು ಒಳ ಮೀಸಲಾತಿ ಜಾರಿ ಮಾಡಲು ಕ್ಯಾಬಿನೆಟ್ ಸಭೆಯಲ್ಲಿ ಅನುಮೋದನೆಯಾಗಿರುತ್ತದೆ. ಆದರೆ ಈ ಸಮುದಾಯಕ್ಕೆ ಒಳಮೀಸಲಾತಿ ಜಾರಿಯಾಗಿದ್ದರೂ ತುಂಬಾ ಅನ್ಯಾಯವಾಗಿರುತ್ತದೆ. ಬಡ್ತಿ ಮತ್ತು ಮುಂಬಡ್ತಿ, ಸರ್ಕಾರದಲ್ಲಿ ಒಳಗೊಳಗೆ ಈ ಸಮಾಜಕ್ಕೆ ಅನ್ಯಾಯವಾಗುತ್ತಿದೆ. ಎಲ್ಲಾ ಇಲಾಖೆಗಳಲ್ಲೂ ಪ್ರವರ್ಗ ಎ ಅಡಿಯಲ್ಲಿ ಬಡ್ತಿ, ಮುಂಬಡ್ತಿ ಆದೇಶ ಜಾರಿ ಮಾಡಬೇಕು. ಶೈಕ್ಷಣಿಕವಾಗಿ ನಮ್ಮ ಸಮಾಜದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಉನ್ನತ ವ್ಯಾಸಂಗ ಕ್ಕೆ ಅನುವು ಮಾಡಿಕೊಡಬೇಕು.

ಮೈಸೂರು ಯುನಿವರ್‌ಸಿಟಿಯಲ್ಲಿ ಆಯ್ಕೆ ಪ್ರಕ್ರಿಯೆ ಮಾಡಿದ್ದು ನಮ್ಮ ಸಮುದಾಯಕ್ಕೆ ಅನ್ಯಾಯವಾಗಿದೆ. ಎಸ್.ಇ.ಪಿ. ಮತ್ತು ಟಿ.ಎಸ್.ಪಿ. ಅನುದಾನ ಎಲ್ಲಾ ಇಲಾಖೆಗಳಲ್ಲೂ ಮಾದಿಗ ಸಮುದಾಯದ ಫಲಾನುಭವಿಗಳಿಗೆ ಸಮರ್ಪಕವಾಗಿ ಸಿಗುವಂತಾಗಬೇಕು. ಆದಜಾಂಬವ ಅಭಿವೃದ್ಧಿ ನಿಗಮಕ್ಕೆ ಭೂಒಡೆತನ ನೇರ ಸಾಲ, ಕೊಳವೆಬಾವಿ ಯೋಜನೆ ಸಮೃದ್ಧಿ ಯೋಜನೆ ಹಲವಾರು ಯೋಜನೆಗಳಿಗೆ ಹಣ ಮಂಜೂರಾತಿ ಸಮರ್ಪಕವಾಗಿ ಬಳಕೆಯಾಗಬೇಕು. ಆದ್ದರಿಂದ ತಾವು ನ್ಯಾಯಮೂರ್ತಿಗಳಾದ ನಾಗಮೋಹನ್ ದಾಸ್ ವರದಿಯನ್ನು ಯಥಾವತ್ತಾಗಿ ಜಾರಿಗೆ ತರುವ ಮುಖೇನಾ ಎಕೆ, ಎಡಿ, ಎಎ ಈ ಗೊಂದಲವನ್ನು ಸರಿಪಡಿಸಿ ಸಮಗ್ರವಾಗಿ ಸಂಪೂರ್ಣ ಒಳಮೀಸಲಾತಿಯನ್ನು ಜಾರಿಗೆ ತರಬೇಕು ಎಂದು ಮುಖ್ಯಮಂತ್ರಿ ಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಒಳಮೀಸಲಾತಿ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಬಸವನಪುರ ರಾಜಶೇಖರ, ಪ್ರಧಾನ ಕಾರ್ಯದರ್ಶಿ ರಾಮಸಮುದ್ರ ಶಿವಕುಮಾರ್, ಉಪಾಧ್ಯಕ್ಷ ಬಸವರಾಜು ದ್ವಾರ್ಕಿ, ಮುತ್ತುರಾಜು, ಸಿದ್ದರಾಜು ಎಲ್ ಐಸಿ, ಶಿವಮಲ್ಲು ಇತರರು ಹಾಜರಿದ್ದರು.



## 2028ಕ್ಕೆ ಎಚ್‌ಡಿಕೆ ಸಿಎಂ ಖಚಿತ: ಜಿ.ಡಿ.ಹರೀಶ್ ಗೌಡ

ಮೈಸೂರು: ಜಾತ್ಯಾತೀತ ಜನತಾದಳ ಪಕ್ಷವೂ 2028ಕ್ಕೆ ಬಿಜೆಪಿ ಮೈತ್ರಿಯೊಂದಿಗೆ 150ಕ್ಕೂ ಹೆಚ್ಚು ಸ್ಥಾನಗಳಿಸಿ ಮತ್ತೆ ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಅಭಿಪ್ರಾಯ ಪಟ್ಟರು.

ಜಾತ್ಯಾತೀತ ಜನತಾದಳ ಪಕ್ಷ ಅಸ್ತಿತ್ವಕ್ಕೆ ಬಂದು 25 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಮೈಸೂರು ನಗರದ ಜೆಡಿಎಸ್ ಕಚೇರಿಯಲ್ಲಿ ಸಿಹಿ ಹಂಚಿ ಸಂಭ್ರಮಿಸಿದರು. ಕಚೇರಿ ಸಿಬ್ಬಂದಿ ನಾಗರಾಜು ದಂಪತಿ ಸನ್ಮಾನಿಸಿ 1ಲಕ್ಷ ಗೌರವಧನ ನೀಡಿ ಸನ್ಮಾನಿಸಿ ಮಾತನಾಡಿದರು. ವರಿಷ್ಠರಾದ ದೇವೇಗೌಡರ ಶ್ರಮದ ಫಲವಾಗಿ ಜೆಡಿಎಸ್ ಪ್ರಾದೇಶಿಕ ಪಕ್ಷ ಉಳಿದಿದೆ. ಇದರೊಟ್ಟಿಗೆ ಕೇಂದ್ರ ಸಚಿವರಾದ ಎಚ್.ಡಿ.ಕುಮಾರಣ್ಣ ಅವರ ಆಡಳಿತ ಅವಧಿಯ ಸಾಧನೆ ಜನಮಾನಸದಲ್ಲಿ ನೆಲಯಾಗಿವೆ. ಈ ಹಿನ್ನೆಲೆಯಲ್ಲಿ ಬಿಜೆಪಿ ಬೆಂಬಲಿತ ಜೆಡಿಎಸ್ ಮುಂದೆ ಅಧಿಕಾರಕ್ಕೆ ಬರುವುದು ನಿಶ್ಚಲವಾಗಿದೆ ಎಂದು ಹೇಳಿದರು.

ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿ, ಪ್ರಾದೇಶಿಕ ಪಕ್ಷ 25ರ ಸಂಭ್ರಮ ಆಚರಿಸುತ್ತಿದ್ದೇವೆ. ಆರವತ್ತು ವರ್ಷ ಆಡಳಿತ ನಡೆಸಿದ ಪಕ್ಷವೇ ಒಂದಂಕಿಗೆ ಬಂದು ನಿಂತಿದೆ. ಹೀಗಿರುವಾಗ ಕಾಂಗ್ರೆಸ್ ನಮ್ಮನ್ನು ಟೀಕಿಸುತ್ತದೆ. ಆದರೆ, ಜನತೆ ಮತ್ತೆ ಪ್ರಾದೇಶಿಕ ಪಕ್ಷಕ್ಕೆ ಮನ್ನಣೆ ನೀಡುವ ಮನಸ್ಸಿನಲ್ಲಿದ್ದಾರೆ. ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಎಲ್ಲರೂ ಒಗ್ಗಟ್ಟಾಗಿ ಪಕ್ಷವನ್ನು ಕಟ್ಟಿ ಬೆಳೆಸಲಾಗುವುದು ಎಂದು ಹೇಳಿದರು.

ಮಾಜಿ ಶಾಸಕರಾದ ಅಶ್ವಿನ್‌ಕುಮಾರ್, ಕೆ.ಮಹದೇವು, ಮಾಜಿ ಮೇಯರ್‌ಗಳಾದ ಎಂ.ಜೆ.ರವಿಕುಮಾರ್, ಬೈರಪ್ಪ,, ನಗರಪಾಲಿಕೆ ಮಾಜಿ ಸದಸ್ಯರಾದ ಎಸ್.ಬಿ.ಎಂ.ಮಂಜು, ಅಶ್ವಿನಿ ಅನಂತು, ಶೋಭಾಮೋಹನ್, ರಾಮು, ಪ್ರಕಾಶ್ ಪ್ರಿಯದರ್ಶಿನಿ ಇನ್ನಿತರರು ಉಪಸ್ಥಿತರಿದ್ದರು.

## ಚನ್ನಮಲ್ಲಿಪುರ ಪಕ್ಕ ಬೃಹತ್ ಹೆಬ್ಬಾವು ಪತ್ತೆ



ಗುಂಡ್ಲುಪೇಟೆ: ತಾಲ್ಲೂಕಿನ ಚನ್ನಮಲ್ಲಿಪುರ ಸಮೀಪದ ಕೇರಳ ಮೂಲದವರ ಜಮೀನಿನಲ್ಲಿ ಬೃಹತ್ ಗಾತ್ರದ ಹೆಬ್ಬಾವು ಕಾಣಿಸಿಕೊಂಡಿದ್ದು ರೈತರು ಅರಣ್ಯ ಇಲಾಖೆಯ ಗಮನಕ್ಕೆ ತಂದಿದ್ದಾರೆ.

ನಂತರ ಹೆಬ್ಬಾವನ್ನು ರಕ್ಷಿಸಿ ಅರಣ್ಯ ಇಲಾಖೆಯವರು ಮದ್ದೂರು ವಲಯದ ಅರಣ್ಯ ದೊಳಗೆ ಬಿಟ್ಟಿದ್ದಾರೆ, ಇದರಿಂದ ಗ್ರಾಮದ ರೈತರು ನಿಟ್ಟುಸಿರು ಬಿಟ್ಟಂತಾಗಿದೆ.



ಬೆಂಗಳೂರಿನ ಜಯನಗರದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ಗುರುವಾರ ಸಂಜೆ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀಮತಿ ಇಂದಿರಾ ವಿಜಯ್ ಅವರ ಮಹಾನಟ ನೃತ್ಯ ಮಂದಿರದ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಿತ್ತು. ಈ ಕಾರ್ಯಕ್ರಮವು ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಜರುಗಿತು ಎಂದು ಶ್ರೀ ನಂದಕಿಶೋರ್ ಆಚಾರ್ಯರು ತಿಳಿಸಿದರು.

## ವಲಯ ಒಕ್ಕೂಟ ಪದಾಧಿಕಾರಿಗಳ ಸಭೆ

ಕಿಕ್ಕೇರಿ: ಮಹಿಳಾ ಸಬಲೀಕರಣಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಕಾಮಧೇನು ಕಲ್ಪವೃಕ್ಷದಂತೆ ವರವಾಗಿ ಕೆಲಸ ಮಾಡುತ್ತಿದೆ ಎಂದು ಯೋಜನೆಯ ಚನ್ನರಾಯಪಟ್ಟಣ ಜಿಲ್ಲಾ ನಿರ್ದೇಶಕ ಡಾ. ಯೋಗೇಶ್ ಹೇಳಿದರು.

ಕಿಕ್ಕೇರಿ ತಾಲೂಕು ಕೇಂದ್ರದಲ್ಲಿ ಹರಿಹರಪುರ, ಕಿಕ್ಕೇರಿ, ಆನೆಗೊಳ ಹಾಗೂ ಕೃಷ್ಣಾಪುರ ವಲಯಗಳ ಒಕ್ಕೂಟದ ಪದಾಧಿಕಾರಿಗಳ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಮಹಿಳೆಯರು ತಮ್ಮಲ್ಲಿನ ವೃತ್ತಿ ಕೌಶಲದ ಮೂಲಕ ಗುಡಿ ಕೈಗಾರಿಕೆಯನ್ನು ಸ್ಥಾಪಿಸಿ ಮಾರುಕಟ್ಟೆಯಲ್ಲಿ ಬೇಡಿಕೆ ಹೊಂದಿರುವ ಗುಣಮಟ್ಟದ ಪದಾರ್ಥಗಳನ್ನು ಉತ್ಪಾ ದಿಸಿ ಮಾರಾಟ ಮಾಡುವ ಮೂಲಕ ಆರ್ಥಿಕವಾಗಿ ಸಬಲೀಕರಣ ಸಾಧಿಸುವ ಜೊತೆಗೆ ನೂರಾರು ನಿರು ದ್ಯೋಗಿ ಮಹಿಳೆಯರಿಗೆ ಉದ್ಯೋಗ ನೀಡಿ ಅವರೂ ಕೂಡ ಸ್ವಾವಲಂಬನೆಯಿಂದ ಸಮೃದ್ಧವಾದ ಸ್ವಾಭಿ ಮಾನಿ ಜೀವನ ನಡೆಸಿ ನಿಮ್ಮ ಕುಟುಂಬವನ್ನು ಮುನ್ನ ಡೆಸುವ ಜೊತೆಗೆ ಆರೋಗ್ಯವಂತ ಸಮಾಜದ ನಿರ್ಮಾ ಣಕ್ಕೆ ತಮ್ಮ ಅಮೂಲ್ಯವಾದ ಕೊಡುಗೆ ನೀಡಬೇಕು ಎಂದು ಮನವಿ ಮಾಡಿದರು.

ಕಿಕ್ಕೇರಿ ತಾಲೂಕಿನ ಯೋಜನಾಧಿಕಾರಿಗಳಾದ ಪ್ರಸಾದ್ ಅವರು ಮಾತನಾಡಿ ಹೆಣ್ಣೊಂದು ಕಲಿತರೆ



ಶಾಲೆಯೊಂದು ತೆರೆದಂತೆ ಎಂಬ ಹಿರಿಯರ ನಾಣ್ಣುಡಿಯಂತೆ ಹೆಣ್ಣು ಮಕ್ಕಳು ತಮ್ಮಲ್ಲಿನ ಕೀಳರಿಮೆಯನ್ನು ಅಳಿಸಿ ಹಾಕಿ ಆತ್ಮವಿಶ್ವಾಸದಿಂದ ಸಮಾಜಮುಖಿಯಾಗಿ ಹೆಜ್ಜೆ ಹಾಕಬೇಕು. ಹೈನುಗಾರಿಕೆ ಸೇರಿದಂತೆ ಇತರೆ ಉಪ ಕಸುಬುಗಳನ್ನು ಅಳವಡಿಸಿಕೊಂಡು ತಾವು ಮುಂದುವರೆಯುವ ಜೊತೆಗೆ ಇಡೀ ಸಮಾವನ್ನೇ ಪ್ರಗತಿಯ ದಿಕ್ಕಿನಲ್ಲಿ ಮುನ್ನಡೆಸಲು ಪಣತೊಡಬೇಕು ಎಂದರು. ಸಂಘಗಳ ನಿರ್ವಹಣೆ ಹಾಗೂ ಜವಾಬ್ದಾರಿಗಳ ಬಗ್ಗೆ ನಿರ್ದೇಶಕರು ಸಭೆಯಲ್ಲಿ ವಿವರವಾದ ಮಾಹಿತಿ ನೀಡಿದರು. ತಾಲ್ಲೂಕು ಯೋಜನಾಧಿಕಾರಿ ಪ್ರಸಾದ್ ಪದಾಧಿಕಾರಿಗಳ ಜವಾಬ್ದಾರಿ ಬಗ್ಗೆ ಮಾಹಿತಿ ನೀಡಿದರು ಚನ್ನರಾಯಪಟ್ಟಣ ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯರಾದ ಮೆಳ್ಳಳ್ಳಿ ಕುಮಾರ್, ಕಿಕ್ಕೇರಿ ತಾಲೂಕು ವ್ಯಾಪ್ತಿಯ ನಾಲ್ಕೂ ವಲಯಗಳ ಮೇಲ್ವಿಚಾರಕರಾದ ಸಂಗೀತಾ ದಿನೇಶ್, ಯಶೋದಾ, ನೇತ್ರಾವತಿ, ಮಧುಸೂದನ್ ಇದ್ದರು.


### ಪ್ರವಾಸಿ ಮಂದಿರದಲ್ಲಿ ನಡೆದ ಸಭೆ

## ರೈತ ಸಂಘ ನೂತನ ತಾಲೂಕು ಘಟಕ ರಚನೆ

ಗುಂಡ್ಲುಪೇಟೆ: ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೂತನ ತಾಲೂಕು ಘಟಕ ರಚನೆ ಮಾಡಲಾಯಿತು

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸಬೆಯಲ್ಲಿ ಕರ್ನಾಟಕ ರಾಜ್ಯ ಸಂಘದ ಹಸಿರು ಸೇನೆಯ ಜಿಲ್ಲಾ ಮತ್ತು ತಾಲೂಕು ಪದಾಧಿಕಾರಿಗಳನ್ನು ಅಯ್ಕೆ ಮಾಡಲಾಯಿತು ಜಿಲ್ಲಾಧ್ಯಕ್ಷರಾಗಿ ಉತ್ತಂಗರಹಂಡಿ ಮಹೇಶ್. ತಾಲೂಕು ಅಧ್ಯಕ್ಷರಾಗಿ ಯಡವನಹಳ್ಳಿ ಗೋವಿಂದ ನಾಯಕ. ತಾಲೂಕು ಉಪಾಧ್ಯಕ್ಷ ಮಗುವಿನಹಳ್ಳಿ ಚಿನ್ನ ಸ್ವಾಮಿ ತಾಲೂಕು ಪ್ರದಾನ ಕಾರ್ಯದರ್ಶಿ ಚಿಕ್ಕಾಟಿ ಜಯಪ್ರಕಾಶ್. ಗುಂಡ್ಲುಪೇಟೆ ಟೌನ್ ಅಧ್ಯಕ್ಷರಾಗಿ ಶೆಟ್ಟರಹಂಡಿ ಸುರೇಶ ರವರನ್ನು ಅಯ್ಕಮಾಡಲಾಯಿತ್ತು

ನಂತರ ಪ್ರಧಾನ ಕಾರ್ಯದರ್ಶಿ ಚಿಕ್ಕಾಟಿ ಜಯಪ್ರಕಾಶ್. ಮಾತನಾಡಿ ಕರ್ನಾಟಕ ರಾಜ್ಯ ರ?ತ ಸಂಘ ಮತ್ತು ಹಸಿರು ಸೇನೆಯ ತಾತ್ವಿಕ ವಿಚಾರಣೆ ಮತ್ತು ತತ್ವ ಸಿದ್ಧಾಂತಗಳನ್ನು ಚಾಚು ತಪ್ಪದೆ ಪಾಲನೆ ಮಾಡಬೇಕಂದರು ಹಾಗೂ ಕಾಯ ವಾಚ. ಮನಸ್ಸು




ಶುದ್ಧ ವಾಗಿ ಕೆಲಸ ಮಾಡಬೇಕೆಂದು ಸಮಸ್ತ ರೈತರ ಸಮಸ್ಯೆ ಗಳಿಗೆ ಸ್ಪಂದಿಸಿ ರೈತರಿಗೆ ನ್ಯಾಯ ದೂರಕಿಸಿಕೊಂಡುವ ಕೆಲಸ ಮಾಡಬೇಕೆಂದೆರು ಹಾಗೆ

ಪ್ರಶ್ನೆ ಮಾಡುವ ಮನೋಭಾವನೆ ಬೆಳೆಸಿಕೊಂಡಾಗ ಮಾತ್ರ ಬದಲಾವಣೆ ಸಾಧ್ಯ, ನಮ್ಮಿಂದ ಆಯ್ಕೆಯಾದವರನ್ನು ಮೊದಲು ಪ್ರಶ್ನೆ ಮಾಡಬೇಕು. ಕೆಲ ಅವೈಜ್ಞಾನಿಕ ನಿರ್ಧಾರಗಳ ವಿರುದ್ಧ ಬೀದಿಗಳಿದು ಹೋರಾಟ ಮಾಡಿದರೆ ಮಾತ್ರ ನ್ಯಾಯ ಸಿಗುತ್ತದೆ' ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಉತ್ತಂಗೆರಹಂಡಿ ಮಹೇಶ್. ಮಗುವಿನಹಳ್ಳಿ ಸುರೇಶ. ಎಂ ವಿ ಸತ್ಯನಾರಾಯಣ. ಮಲ್ಲೇಶ್. ಮಂಚಹಳ್ಳಿ ಮಹೇಶ್. ಮಹದೇವಗೌಡ. ಸ್ವಾಮಿ. ಚಿಕ್ಕಬಸವೇಗೌಡ. ಪ್ರವೀಣ್. ಪಳನಿ ಸ್ವಾಮಿ. ಮುರುಗೇಶ್. ರಾಜೇಂದ್ರ. ಬೀರೆಗೌಡ. ಸೋಮೇಶ್.ಶಿವಣ್ಣ. ಹುಂತರ್ ಶೆಟ್ಟಿ ರಾಜು ಸೇರಿದಂತೆ ವಿವಿಧ ಗ್ರಾಮದ ರ?ತ ಮುಖಂಡರು ಇದ್ದರು.



# ಕರುಳಿನ ಉತ್ತಮ ಆರೋಗ್ಯಕ್ಕೆ ಪ್ರೊಬಯೋಟಿಕ್ಸ್ ಆಹಾರಗಳು

ಹೊಟ್ಟೆಯ ಆರೋಗ್ಯವು ಉತ್ತಮವಾಗಿದ್ದರೆ ಸಂಪೂರ್ಣ ದೇಹವು ಆರೋಗ್ಯಕಾರಿ ಆಗಿರುವುದು. ನಾವು ತಿನ್ನುವಂತಹ ಆಹಾರವನ್ನು ಸರಿಯಾಗಿ ಜೀರ್ಣಗೊಳಿಸಿ ಇದರ ಬಳಿಕ ಅದರಲ್ಲಿ ಇರುವಂತಹ ಪೋಷಕಾಂಶಗಳನ್ನು ದೇಹಕ್ಕೆ ನೀಡಿ ಕಲ್ಮಶವನ್ನು ಹೊರಗೆ ಹಾಕುವ ಕೆಲಸವನ್ನು ಜೀರ್ಣಕ್ರಿಯೆ ವ್ಯವಸ್ಥೆಯು ಮಾಡುವುದು. ಇದು ಆರೋಗ್ಯಕಾರಿ ಆಗಿದ್ದರೆ ಆಗ ಖಂಡಿತವಾಗಿಯೂ ಆರೋಗ್ಯ ಲಭ್ಯವಾಗುವುದು. ಹೊಟ್ಟೆಯನ್ನು ಎಲ್ಲಾ ರೀತಿ ಸಮಸ್ಯೆಯಿಂದ ದೂರವಿಡುವುದು ಕೂಡ ನಮ್ಮ ಆಹಾರ ಕ್ರಮದ ಪ್ರಮುಖ ಕಾರ್ಯವಾಗಿದೆ. ಇಂತಹ ಒಂದು ಅದ್ಭುತವಾದ ಕೆಲಸವನ್ನು ಮಾಡುವುದು ನಮ್ಮ ದೇಹದ ಹೊಟ್ಟೆಯಲ್ಲಿ ಇರುವಂತಹ ಜೀವಂತ ಸೂಕ್ಷ್ಮಜೀವಿಗಳು ಅಥವಾ ಪ್ರೊಬಯೋಟಿಕ್ಸ್ ಗಳು.

**ಪ್ರೊಬಯೋಟಿಕ್ಸ್ ಎಂದರೇನು?**

ಪ್ರೋಬಯಾಟಿಕ್‌ಗಳು ಎಂದರೆ ಮೂಲತಃ ಜೀವಂತ ಸೂಕ್ಷ್ಮಜೀವಿಗಳು/ ಬ್ಯಾಕ್ಟೀರಿಯ ಮತ್ತು ಈಸ್ಟ್‌ಗಳು ಆಗಿದ್ದು ಇವು ನಮ್ಮ ದೇಹದ ಕಾರ್ಯನಿರ್ವಹಣೆಗೆ ಮತ್ತು ನಮ್ಮ ಆರೋಗ್ಯಕ್ಕೆ ಪ್ರಯೋಜನಕಾರಿಯಾಗಿದೆ. ಅನೇಕ ಪ್ರೋಬಯಾಟಿಕ್ಗಳು ನಮ್ಮ ದೇಹದಲ್ಲಿ ನೈಸರ್ಗಿಕವಾಗಿ ವಾಸಿಸುವ ಬ್ಯಾಕ್ಟೀರಿಯಾವನ್ನು ಹೋಲುತ್ತವೆ. ಇವುಗಳನ್ನು "ಉತ್ತಮ" ಅಥವಾ "ಸ್ನೇಹಿ" ಬ್ಯಾಕ್ಟೀರಿಯಾ ಎಂದು ಕರೆಯಲಾಗುತ್ತದೆ, ಏಕೆಂದರೆ ಅವುಗಳು ನಮ್ಮ ದೇಹಕ್ಕೆ ಸಹಾಯ ಮಾಡುತ್ತವೆ. ಪ್ರೊಬಯೋಟಿಕ್ಸ್ ನಮ್ಮ ದೇಹದಲ್ಲಿನ "ಉತ್ತಮ" ಬ್ಯಾಕ್ಟೀರಿಯಾಗಳ ಸಮತೋಲನವನ್ನು ಪುನಃಸ್ಥಾಪಿಸಲು ಸಹಾಯ ಮಾಡುತ್ತವೆ. ಇವುಗಳು ಮುಖ್ಯವಾಗಿ ಜೀರ್ಣಾಂಗ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತವೆ, ಜೀರ್ಣಕ್ರಿಯೆಗೆ ಸಹಾಯ ಮಾಡುತ್ತವೆ ಮತ್ತು ಇತರ ಆರೋಗ್ಯ ಸಮಸ್ಯೆಗಳನ್ನು ಕಡಿಮೆ ಮಾಡುತ್ತವೆ.

ಪ್ರೊಬಯೋಟಿಕ್ಸ್ ಎಲ್ಲಿ ಸಿಗುತ್ತವೆ?

ಹುದುಗು ಬರೆಸಿದ ಆಹಾರಗಳು, ಮೊಸರು, ಮಜ್ಜಿಗೆ ಕಿಮ್ಚಿ (ಕೊರಿಯನ್ ಆಹಾರ )ಮತ್ತು ಕೇಫೀರ್‌ನಂತಹ (ಹಾಲಿನ ಆಹಾರ)ಆಹಾರಗಳಲ್ಲಿ ಇವುಗಳು ಸಹಜವಾಗಿ ಕಂಡು ಬರುತ್ತವೆ. ಹೊಟ್ಟೆಯ ಉತ್ತಮ ಆರೋಗ್ಯಕ್ಕಾಗಿ ಆಹಾರದಲ್ಲಿ ಬಳಸಬಹುದಾದ ಪ್ರೊಬಯೋಟಿಕ್ ಆಹಾರ ಪದಾರ್ಥಗಳು.

**ಹುದುಗು ಬರಿಸಿದ ಆಹಾರ ಸೇವನೆ**

ಅತೀ ಆರೋಗ್ಯಕರ ಆಹಾರಗಳಲ್ಲಿ ಹುದುಗು ಬರಿಸಿದ ಆಹಾರ ಕ್ರಮಗಳು (Fermented food) ಕೂಡ ಬಹಳ ಮುಖ್ಯವಾದುದು. ನಾವು ನಾನಾ ಬಗೆಯ ದೋಸೆ ಹಾಗೂ ಇಡ್ಲಿ ಮಾಡುವಾಗ ಹಿಟ್ಟನ್ನು ಹುದುಗು ಬರಿಸುತ್ತೇವೆ.ಈ ಹುದುಗು ಬರಿಸಿರುವ ಹಿಟ್ಟಿನಿಂದ ಮಾಡಿದ ಅಡುಗೆ ರುಚಿ ಸಿಗುವುದು ಅಲ್ಲದೆ ಆರೋಗ್ಯಕ್ಕೂ ಒಳ್ಳೆಯದು ಎಂದು ಆಹಾರ ತಜ್ಞರು ಅಭಿಪ್ರಾಯಪಡುತ್ತಾರೆ. ಹುದುಗು ಬರಿಸಿದ ಆಹಾರದಲ್ಲಿ ಪ್ರೊಬಯೋಟಿಕ್ ಅಂಶ ಹೆಚ್ಚಾಗಿ ಇರಲಿದ್ದು, ಇದು ಜೀರ್ಣಕ್ರಿಯೆ ಉತ್ತಮವಾಗಿ ನಡೆಯುವಂತೆ ಮಾಡುತ್ತದೆ. ಹಾಗಾಗಿ ಜೀರ್ಣಕ್ರಿಯೆ ಸಮಸ್ಯೆ ಇರುವವರು ಪ್ರೊಬಯೋಟಿಕ್ ಅಂಶ ಇರುವ ಆಹಾರ ಸೇವಿಸಬೇಕು.

**ಉದಾ:** ಇಡ್ಲಿ ದೋಸೆ. ಆದರೆ ಸೋಡಿಯಂ ಹೆಚ್ಚು ಇರುವ ಹುದುಗು ಬರಿಸಿದ ಆಹಾರದ ಅತೀಯಾದ ಸೇವನೆ ಅರೋಗ್ಯಕ್ಕೆ ಹಾನಿಕರ.



**ಮೊಸರು:** ಮೊಸರು ಪ್ರೋಬಯಾಟಿಕ್‌ಗಳಲ್ಲಿ ಸಮೃದ್ಧವಾಗಿದೆ, ಇದು ಕರುಳಿನ ಆರೋಗ್ಯಕ್ಕೆ ಪ್ರಯೋಜನಕಾರಿಯಾದ ಬ್ಯಾಕ್ಟೀರಿಯಾವನ್ನು ಹೊಂದಿರುತ್ತದೆ. ಈ ಪ್ರೋಬಯಾಟಿಕ್‌ಗಳು ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ. ಪೋಷಕಾಂಶಗಳ ಹೀರಿಕೊಳ್ಳುವಿಕೆಯನ್ನು ಹೆಚ್ಚಿಸುತ್ತದೆ ಮತ್ತು ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ. ಇದರ ಸೇವನೆಯು ಕೆರಳಿಸುವ ಕರುಳಿನ ಸಹಲಕ್ಷಣಗಳಿಗೆ ಮತ್ತು ಮಲಬದ್ಧತೆ ಸಮಸ್ಯೆಗಳಿಂದ ಪರಿಹಾರವನ್ನು ಪಡೆಯಬಹುದು. ರಾತ್ರಿ ಅನ್ನವನ್ನು ಮೊಸರಿನೊಂದಿಗೆ ಮಣ್ಣಿನ ಪಾತ್ರೆಯಲ್ಲಿ ಹಾಕಿಟ್ಟು ಬೆಳಗ್ಗೆ ತಿಂದರೆ ಜೀರ್ಣಕ್ರಿಯೆಗೆ ಒಳ್ಳೆಯದು

**ಈರುಳ್ಳಿ:** ಈರುಳ್ಳಿಯು ಪ್ರಿಬಯಾಟಿಕ್‌ಗಳ ಮತ್ತೊಂದು ಅತ್ಯುತ್ತಮ ಮೂಲವಾಗಿದೆ, ಈರುಳ್ಳಿಯ ಸೇವನೆ ಪ್ರೋಬಯಾಟಿಕ್‌ಗಳ ಬೆಳವಣಿಗೆಯನ್ನು ಉತ್ತೇಜಿಸುತ್ತದೆ ಮತ್ತು ಆರೋಗ್ಯಕರ ಕರುಳಿನ ವಾತಾವರಣವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಸಲಾಡ್‌ಗಳು, ಸೂಪ್‌ಗಳು ಮತ್ತು ಸ್ಟಿರ್-ಫ್ರೈಗಳಿಗೆ ಕಚ್ಚಾ ಅಥವಾ ಬೇಯಿಸಿದ ಈರುಳ್ಳಿ ಸೇರಿಸಿ ತಿನ್ನುವುದು ಬಹಳ ಅರೋಗ್ಯ ಕಾರಿ.



**ಬೆಳ್ಳುಳ್ಳಿ:** ಬೆಳ್ಳುಳ್ಳಿ ಪ್ರಬಲವಾದ ಪ್ರಿಬಯಾಟಿಕ್ ಆಗಿದೆ. ಇದು ಇನ್ಯುಲಿನ್ ಅನ್ನು ಹೊಂದಿರುತ್ತದೆ, ಇದು ಪ್ರಯೋಜನಕಾರಿ ಕರುಳಿನ ಬ್ಯಾಕ್ಟೀರಿಯಾವನ್ನು ಪೋಷಿಸುವ ಒಂದು ರೀತಿಯ ಫೈಬರ್. ಹೊಟ್ಟೆಯ ಆರೋಗ್ಯಕ್ಕೆ ಬೆಳ್ಳುಳ್ಳಿಯು ತುಂಬಾ ಪರಿಣಾಮಕಾರಿ ಆಗಿದೆ. ಇದರಲ್ಲಿ ಕೆಲವೊಂದು ನೈಸರ್ಗಿಕ ಪ್ರೊಬಯೋಟಿಕ್ ಗಳು ಇದ್ದು, ಜೀರ್ಣಕ್ರಿಯೆಗೆ ತುಂಬಾ ಸಹಕಾರಿ. ಹೀರಿಕೊಳ್ಳದ ನಾರಿನಾಂಶವನ್ನು ಹೊಂದಿರುವಂತಹ ಬೆಳ್ಳುಳ್ಳಿಯು ಹೊಟ್ಟೆಯ ಬ್ಯಾಕ್ಟೀರಿಯಾಗೆ ಸಹಕಾರಿ.

**ಸೇಬು:** ಸೇಬಿನಲ್ಲಿ ಉತ್ತಮ ಪ್ರಮಾಣದ ವಿಟಮಿನ್ ಸಿ, ನಾರಿನಾಂಶ, ಆಂಟಿಆಕ್ಸಿಡೆಂಟ್ ಗಳಿದ್ದು, ಇದು ಕ್ಯಾಲರಿ ಕಡಿಮೆ ಮಾಡುವುದು. ಇದರಲ್ಲಿನ ನಾರಿನಾಂಶ ಮತ್ತು ಕಿಣ್ವಗಳು ಜೀರ್ಣಕ್ರಿಯೆ ವೃದ್ಧಿಸುವುದು. ಸಂಕೀರ್ಣ ಆಹಾರವನ್ನು ಇದು ವಿಘಟಿಸಲು ನೆರವಾಗುವುದು.

**ಓಟ್ಸ್:** ಓಟ್ಸ್ ಬೀಟಾ-ಗ್ಲುಕಾನ್‌ಗಳ ಉತ್ತಮ ಮೂಲವಾಗಿದೆ, ಇದು ಪ್ರಿಬಯಾಟಿಕ್ ಆಗಿ ಕಾರ್ಯನಿರ್ವಹಿಸುವ ಒಂದು ರೀತಿಯ ಫೈಬರ್ ಆಗಿದೆ. ನಿಯಮಿತವಾದ ಓಟ್‌ಮೀಲ್‌ನ ಸೇವನೆ ಕರುಳಿನ ಸ್ನೇಹಿ ವರ್ಧಕವಾಗುತ್ತದೆ.

**ಶತಾವರಿ:** ಶತಾವರಿಯು ಇನ್ಯುಲಿನ್‌ನಲ್ಲಿ ಸಮೃದ್ಧವಾಗಿದೆ, ಇದು ಅಮೂಲ್ಯವಾದ ಪ್ರಿಬಯಾಟಿಕ್ ಆಹಾರವಾಗಿದೆ. ಅದರ ಪ್ರಿಬಯಾಟಿಕ್ ಅಂಶವನ್ನು ಸಂರಕ್ಷಿಸಲು ಶತಾವರಿಯನ್ನು ಸ್ಟೀಮ್ ಅಥವಾ ಹುರಿದು ಸಲಾಡ್‌ಗಳಲ್ಲಿ ಬಳಸಬಹುದು.

ಸಾಂಪ್ರದಾಯಿಕ ಉಪ್ಪಿನಕಾಯಿ : ವಿನೇಗರ್ ಅಥವಾ ಉಪ್ಪಿನೊಂದಿಗೆ ಸೇರಿಸಿ ನೆನೆಸುವುದರಿಂದ ಇದು ಪ್ರೊಬಯೋಟಿಕ್ ಅಂಶ ಹೊಂದಿರುತ್ತದೆ.

ಸಾಂಪ್ರದಾಯಿಕ ಮಜ್ಜಿಗೆ : ಸಾಂಪ್ರದಾಯಿಕ ಮಜ್ಜಿಗೆಯು ಪ್ರೊಬಯೋಟಿಕ್ ಅಂಶ ಹೊಂದಿರುವ ಉತ್ತಮ ಆಹಾರವಾಗಿದೆ.

**ಕೆಫಿರ್:** ಇದು ಹಾಲಿನ ಪದಾರ್ಥ. ಇದು ಉತ್ತಮ ಪ್ರಯೋಟಿಕ್ ಅಂಶವನ್ನು ಹೊಂದಿರುತ್ತದೆ. ಇದು ಉತ್ತಮ ಗುಣಮಟ್ಟದ ಕ್ಯಾಲ್ಸಿಯಂ ಹಾಗೂ ಪ್ರೊಟೀನ್ ಅನ್ನು ಹೊಂದಿರುತ್ತದೆ. ಬಾಳೆಹಣ್ಣುಗಳು: ಬಾಳೆಹಣ್ಣುಗಳು ಅನುಕೂಲಕರವಾದ ತಿಂಡಿ ಮಾತ್ರವಲ್ಲ, ಅವು ನಿರೋಧಕ ಪಿಷ್ಟವನ್ನು ಒಳಗೊಂಡಿರುತ್ತವೆ, ಇದು ಕರುಳಿನ ಆರೋಗ್ಯವನ್ನು ಬೆಂಬಲಿಸುವ ಪ್ರಿಬಯಾಟಿಕ್. ಸ್ವಲ್ಪ ಹಸಿರು ಬಾಳೆಹಣ್ಣುಗಳ ಸೇವನೆಯಿಂದ ಹೆಚ್ಚಿನ ಮಟ್ಟದ ನಿರೋಧಕ ಪಿಷ್ಟವನ್ನು ಪಡೆಯಬಹುದು.

**ಆಹಾರ ಪೂರಕಗಳು:** ಪ್ರೊಬಯೋಟಿಕ್ಸ್ ಅನ್ನು ಮಾತ್ರೆಗಳು, ಕ್ಯಾಪ್ಸೂಲ್‌ಗಳು ಅಥವಾ ಪುಡಿ ರೂಪದಲ್ಲಿ ಪೂರಕಗಳಾಗಿ ಪಡೆಯಬಹುದು.

ಪ್ರೊಬಯೋಟಿಕ್ಸ್‌ನ ಪ್ರಯೋಜನಗಳು


- **ಜೀರ್ಣಕ್ರಿಯೆಯ ಕಾರ್ಯವನ್ನು ಸುಧಾರಿಸುತ್ತದೆ.**
- **ಕೆಲವು ಅತಿಸಾರ ಸಮಸ್ಯೆಯನ್ನು ಕಡಿಮೆ ಮಾಡುತ್ತದೆ.**
- **"ಹಾನಿಕಾರಕ" ಸೂಕ್ಷ್ಮಾಣುಜೀವಿಗಳ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ.**
- **ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.**

ಪ್ರೊಬಯೋಟಿಕ್ ಇರುವಂತಹ ಆಹಾರಗಳನ್ನು ನಮ್ಮ ಆಹಾರದಲ್ಲಿ ಸೇರಿಸುವುದರಿಂದ ಕರುಳಿನ ಬ್ಯಾಕ್ಟೀರಿಯಾದ ವೈವಿಧ್ಯತೆ ಮತ್ತು ಸಮತೋಲನವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ, ಒಟ್ಟಾರೆ ಕರುಳಿನ ಆರೋಗ್ಯ ಮತ್ತು ಜೀರ್ಣಕ್ರಿಯೆಯನ್ನು ಬೆಂಬಲಿಸುತ್ತದೆ.



**ಸೌಮ್ಯಸನತ್**
**ಶಿಕ್ಷಕರು**

## ಪದಬಂಧ



### ಎಡದಿಂದ ಬಲಕ್ಕೆ.....

2. ನಿಜ ಜೀವನದಲ್ಲಿ ಖಳನಾದ, ನಾಯಕ ನಟನೊಬ್ಬನ ಹೆಸರಿದು.....(3)
5. ಎಳ್ಳಿನಷ್ಟೂ ಕುಂದಿಲ್ಲದ ರೂಪದ, ದೇವಲೋಕದ ಅಪ್ಸರೆಯೊಬ್ಬಳು ಚೆಲ್ಲಾಪಿಲ್ಲಿಯಾಗಿದ್ದಾಳೆ.....(4)
7. ಸಂಪಿಗೆಯ ಮೂಗಿನವಳಿಗೆ ಈ ಹೆಸರಿಡಬಹುದೆ...(2)
8. ಈ ಜಗತ್ತು/ವಿಶ್ವಕ್ಕೆಲ್ಲ ಒಡೆಯನಾದವನಿಗೆ ಈ ಹೆಸರು.....(4)
9. ಶಿವನ ಇನ್ನೊಂದು ಹೆಸರು.....(2)
11. ಮುಕ್ಕಣ್ಣನನ್ನು ಈ ಹೆಸರಿನಿಂದ ಕರೆಯಿರಿ.....(3)
12. ಒಳ್ಳೆಯದು ಎನ್ನುವ ಅರ್ಥ ಇರುವ ಹೆಸರು ಹಿಂದುಮುಂದಾಗಿದೆ.....(2)
14. ಮಿಂಚಿನ ಬಳ್ಳಿಯಂತಿರುವವಳಿಗೆ ಇಂಥ ಚೆಂದದೊಂದು ಹೆಸರು.....(4)
17. ಮುನಿಯೊಬ್ಬನ ಹೆಸರಿಲ್ಲಿ ಹಿಂದುಮುಂದಾಗಿದೆ.....(2)
18. 'ಆಸೆಯೇ ದು:ಖಕ್ಕೆ ಮೂಲ' ಎಂದವನ ಸತಿಯ ಹೆಸರಿದು.....(4)
19. ಮಗ(ಳು) ಎಂಬರ್ಥದ ಹೆಸರಿದು.....(3)

### ಮೇಲಿನಿಂದ ಕೆಳಕ್ಕೆ.....

1. ಹುಡುಗನೊಬ್ಬನ ಈ ಹೆಸರಲ್ಲಿ 'ಪ್ರಪಂಚ'ವಿದೆ.....(3)
2. ತ್ರಿಮೂರ್ತಿಗಳೇ ಒಟ್ಟಾಗಿ ಅವತಾರವೆತ್ತಿದ ಗುರುವನ್ನು ಪ್ರೀತಿಯಿಂದ ಹೀಗೆ ಕರೆಯಿರಿ......(2)
3. ಗಾಳಿ ಎಂಬರ್ಥದ ಹೆಸರಿಲ್ಲಿ ಚೆಲ್ಲಾಪಿಲ್ಲಿಯಾಗಿದೆ.....(3)
4. ಅನುಗ್ರಹ/ಕರುಣೆ ಎಂಬರ್ಥದ ಹೆಸರಿದು.....(2)
6. ಮರಗಳ ಹಸಿರೇ ಉಸಿರಾದವರ ಹೆಸರಿದು.....(3)
7. ಶಶಿಯಂತೆ ಬೆಳಕು ಬೀರುವವನ ಹೆಸರಿದು.....(4)
8. ........ ನಿಮ್ಮಿಷ್ಟದ ಹೆಸರಿದು..........(5)
10. ನಾಶವಾಗದಿರುವವನ ಹೆಸರೇ ಇದು? ಅಡಿಮೇಲಾಗಿದೆ.....(4)
13. 'ದೇವನಾಂಪ್ರಿಯ' ಎಂದು ಬಿರುದಾಂಕಿತನಾದವನ ಹೆಸರು ಚೆಲ್ಲಾಪಿಲ್ಲಿಯಾಗಿದೆ..... (3)
15. ಋತುವೊಂದರ ಹೆಸರಿದು.....(3)
16. ಧೀರನೊಬ್ಬನನ್ನು ಹೀಗೆ ಕರೆಯಿರಿ......(2)
17. ತ್ರಿಶಂಕು ಸ್ವರ್ಗದಲ್ಲಿರುವವಳ ಹೆಸರೆ ಇದು.....(2)
18. ಗೆಲುವು ಎಂಬರ್ಥದ ಹೆಸರಿಲ್ಲಿ ಅಡಿಮೇಲಾಗಿದೆ....(2)



**ಜ್ಯೋತಿ ರಾಜೇಶ್**



# ಸೊಪ್ಪು ತರಕಾರಿ ಕೊಂಡು ಫೋನ್ ಪೇ ಮಾಡುವ ಮುನ್ನ...!!

ಸ್ಥಳೀಯ ವಿದ್ಯಾನಗರದ ಮುಖ್ಯರಸ್ತೆ ಬದಿಯಲ್ಲಿ ಇಬ್ಬರು ವಯಸ್ಸಾದ ಹಿರಿಯ ದಂಪತಿಗಳು ಆರಾಮಾಗಿರಬೇಕಾದ ಈ ವಯಸ್ಸಿನಲ್ಲೂ ಪ್ರತಿದಿನ ಬೆಳಗಿನಿಂದ ರಾತ್ರಿಯವರೆಗೂ ಎಲ್ಲಾ ಬಗೆಯ ಸೊಪ್ಪುಗಳನ್ನು ಒಂದು ತಳ್ಳುವ ಗಾಡಿಯಲ್ಲಿಟ್ಟು ವ್ಯಾಪಾರ ಮಾಡುತ್ತಾರೆ. ನನ್ನ ಮನೆಯಿಂದ ಅವರಲ್ಲಿಗೆ ಹೋಗುವ ಮುನ್ನ ನಾಲ್ಕಾರು ತರಕಾರಿ -ಸೊಪ್ಪಿನ ಇತರೆ ವ್ಯಾಪಾರಿಗಳ ಅಂಗಡಿಗಳಿದ್ದರೂ ಸೊಪ್ಪು ತರಲು ಈ ವೃದ್ಧ ದಂಪತಿಗಳ ಬಳಿಗೇ ಬೇಕಾಗಿಯೇ ಹೋಗುತ್ತೇನೆ .ಜೀವನಚಕ್ರದ ಈ ಹಂತದಲ್ಲೂ ದುಡಿದು ತಿನ್ನಬೇಕೆನ್ನುವ ಅವರ ಸ್ವಾಭಿಮಾನದ ಬದುಕಿಗೆ ಒಂದು ಅಳಿಲು ಸೇವೆಯಂತಹ ಸಾಥ್ ಕೊಡುವ ಸಣ್ಣ ಆಸೆಯಿಂದ ಮನೆಯಿಂದ ತುಸು ದೂರವಾದರೂ ಅವರಲ್ಲಿಗೇ ಹೋಗುತ್ತೇನೆ.

ನಿನ್ನೆ ಭಾನುವಾರ ಬೆಳಿಗ್ಗೆ ಸೊಪ್ಪು ತರಲು ಅವರಲ್ಲಿಗೆ ಹೋಗಿದ್ದೆ. ಆಗಲೇ ನಾಲ್ಕಾರು ಜನ ಅಲ್ಲಿ ಸೊಪ್ಪು ಕೊಳ್ಳುತ್ತಿದ್ದರು. ನನಗಿಂತ ಮುಂಚಿತವಾಗಿ ಅಲ್ಲಿದ್ದ ನೋಡಲು ವಿದ್ಯಾವಂತರಂತಿದ್ದ ಒಬ್ಬ ಮಹಿಳೆ ಐದಾರು ಕಟ್ಟು ಕೊತ್ತಂಬರಿ ಪುದೀನ ಮೆಂತ್ಯ ಸೊಪ್ಪು ತೆಗೆದುಕೊಂಡು ಅಜ್ಜ ಹೇಳಿದ ? 50 ರೂಪಾಯಿಯನ್ನು ಫೋನ್ ಪೇ ಮಾಡುತ್ತೇನೆಂದು ಹೇಳಿ ಗಾಡಿಯ ಒಂದು ಬದಿಗೆ ಸಿಗಿಸಿದ್ದ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿದರು. ಆಕೆ ತನ್ನ ಮೊಬೈಲ್ ತೆಗೆದು ಕೋಡ್ ಸ್ಕ್ಯಾನ್ ಮಾಡಿ ಒಂದೆರಡು ನಿಮಿಷಗಳ ನಂತರ ಅವರಷ್ಟಕ್ಕೇ ಅಲ್ಲಿಂದ ಅವಸರದಲ್ಲಿ ಸ್ಕೂಟರ್ ಸ್ಟಾರ್ಟ್ ಮಾಡಿಕೊಂಡು ಹಾಗೆಯೇ ಹೊರಟೇಬಿಟ್ಟರು. ಅವರು ಹಣ ಸಂದಾಯ ಮಾಡಿದ ನಂತರ ಕಿಚ್ಚ ಸುದೀಪನ ಧ್ವನಿಯಲ್ಲಿ ಬರುವ ರೆಕಾರ್ಡೆಡ್ ವಾಯ್ಸ್ ಬಂದಂತೆ ತೋರಲಿಲ್ಲ. ವ್ಯವಹಾರದ ಗಡಿಬಿಡಿಯಲ್ಲಿ ಯಾರೂ ಅದನ್ನು ಗಮನಿಸಲೂ ಇಲ್ಲ.

ಇದಾದ ನಂತರ ನಾನೂ ಸಹಾ ನನಗೆ ಬೇಕಾದ ಸೊಪ್ಪು ಪಡೆದು ಹಣವನ್ನು ಫೋನ್ ಪೇ ಮಾಡಿ ಆ ತಾತನಿಗೆ ಹಣ ಸಂದಾಯವಾಗಿರುವುದನ್ನು ಮನವರಿಕೆ ಮಾಡಿಕೊಟ್ಟೆ. ಹಾಗೆಯೇ ಕುತೂಹಲಕ್ಕಾಗಿ ನನಗಿಂತ ಹಿಂದಿನವರು ಮಾಡಿರಬಹುದಾದ ಪೇಮೆಂಟ್ ಯಾವುದಿರಬಹುದೆಂದು ಚೆಕ್ ಮಾಡಲಾಗಿ ಅದರಲ್ಲಿ ನನಗಿಂತ ಹಿಂದಿನ ಫೋನ್ ಪೇ ಮಾಡಿದ್ದ ಮಹಿಳೆಯ ಹಣ ಐವತ್ತು ರೂಪಾಯಿ ಪಾವತಿಯಾಗಿರದೇ ಬೇರೇಯದೇ ಹಳೆಯ ಪಾವತಿ ಕಂಡುಬಂದಿತ್ತು.

ಇದನ್ನು ಗಮನಿಸುತ್ತಿದ್ದ ನನಗೆ " ತಾತಾ... ಈಗ ಸೊಪ್ಪು ಖರೀದಿಸಿ ಸ್ಕೂಟರ್ ನಲ್ಲಿ ಹೋದ ಮೇಡಂ ರವರ ಐವತ್ತು ರೂಪಾಯಿ ನಿಮಗೆ ಸಂದಾಯವಾಗಿಲ್ಲ. ಅವರು ಮತ್ತೊಮ್ಮೆ ಬಂದಾಗ ನೆನಪು ಮಾಡಿ ಕೇಳಿ ಪಡೆಯಿರಿ. ಅವರಿಗೆ ಎಲ್ಲೋ ಗೊಂದಲವಾಗಿ ಪೇಮೆಂಟ್ ಆಗಿದೆ ಎಂದುಕೊಂಡು ಹಾಗೇ ಅವಸರದಲ್ಲಿ ಹೋಗಿದ್ದಿರಬಹುದು " ಎಂದೆ.

ಅದಕ್ಕೆ ಆ ಮುದುಕಪ್ಪ " ಅದೇನೋ ನಮಗೆ ಗೊತ್ತಾಗೋಲ್ಲಪ್ಪ...ಸಾಕಷ್ಟು ಜನ ಹೀಗೆ ಬಂದು ಸೊಪ್ಪು ಖರೀದಿಸಿ ಮೊಬೈಲ್ ತೋರಿಸಿ "ಹಣ ಹಾಕಾಯ್ತು" ಎಂದು ಹೇಳಿ ಹೋಗುತ್ತಾರೆ ಅವನ್ನೆಲ್ಲಾ ಚೆಕ್ ಮಾಡಿ ನೋಡೋಕೆ ನಮಗೆ ಬರೋಲ್ಲ , ಎಲ್ಲ ಧರ್ಮ ಕರ್ಮ ಅವರಿಗೇ ಸೇರಿದ್ದು"....ಎಂದು ಬೇಸರದಿಂದ ಹೇಳಿದರು. ಆನಂತರ ಅವರಿಗೆ ಕಡೆಯ ಪೇಮೆಂಟ್ ಎಷ್ಟು ಆಗಿದೆ ಎಂಬುದನ್ನು ಚೆಕ್ ಮಾಡಿಕೊಳ್ಳುವ ವಿಧಾನ ತೋರಿಸಿ ಫೋನ್ ಪೇ ಮಾಡಿದ ನಂತರ ಅದು ಪಾವತಿ ಆಗಿರುವುದರ ಧ್ವನಿ ಖಚಿತಪಡಿಸಿಕೊಳ್ಳಿ, ಹಾಗೂ ಅನುಮಾನ ಬಂದಾಗ ಒಮ್ಮೆ ಹೀಗೆ ಚೆಕ್ ಮಾಡಿ.... ಎಂದು ಕೆಲವೊಂದು ಬೇಸಿಕ್ ಅಂಶಗಳನ್ನು ತೋರಿಸಿಕೊಟ್ಟು ಅಲ್ಲಿಂದ ಬಂದೆ.

ಈ ಸನ್ನಿವೇಶದಲ್ಲಿ ಬಹುಶಃ ಆ ಮಹಿಳೆ ತಾನು ಪೇಮೆಂಟ್ ಮಾಡಿದ್ದೇನೆಂಬ ಭಾವನೆಯಲ್ಲೇ ಹೋಗಿದ್ದಿರಬಹುದೋ ಏನೋ ಗೊತ್ತಿಲ್ಲ. ಆದರೆ ಇನ್ನೂ ಕೆಲವು ಮಹಾನುಭಾವರೂ ಇರುತ್ತಾರೆ. ವಸ್ತು ಖರೀದಿಸಿ, ಸೇವೆ ಪಡೆದು ಮೊಬೈಲ್ ನಿಂದ ಹಣ ಪಾವತಿಸುವಂತೆ ನಟಿಸಿ ಉದ್ದೇಶಪೂರ್ವಕವಾಗಿ ಹಣ ಕೊಡದೇ ಹಾಗೇ ಹೊರಟುಬಿಡುತ್ತಾರೆ. ಇದನ್ನು ಹೇಳಲು ಕೇಳಲು ಅಚ್ಚರಿಯೆನಿಸಿದರೂ ಸತ್ಯ. ಅದರಲ್ಲೂ ಸಣ್ಣ ಹೋಟೆಲ್ ಗಳು, ಬೀದಿಬದಿಯ ಸಣ್ಣ ಪುಟ್ಟ ವ್ಯಾಪಾರಿಗಳನ್ನೇ ಇವರು ಗುರಿಯಾಗಿಸಿಕೊಂಡಿರ ಬಲ್ಲರು. ಈ ತರಹದ ಅನೇಕ ಘಟನೆಗಳೂ ನಿತ್ಯವೂ ನಡೆಯುತ್ತಿರಲೂ ಬಹುದು.

ಈ ಹಿನ್ನೆಲೆಯಲ್ಲಿ ಇದು ಸಿಂಪಲ್ ಅನಿಸಿದರೂ ಒಂದೆರಡು ಮಾತು.

ಡಿಜಿಟಲ್ ಪೇಮೆಂಟ್ ಪದ್ಧತಿ ಬಂದ ನಂತರ ಇಂದು ರಸ್ತೆ ಬದಿಯಲ್ಲಿನ ಹತ್ತು ರೂಪಾಯಿ ಗೂ ಗಿಕಖ ಮುಖಾಂತರ ಹಣ ಸಂದಾಯ ಮಾಡುವ ಅಭ್ಯಾಸವಿದೆ. ರಸ್ತೆ ಬದಿಯಲ್ಲಿ ಹೂವು, ಹಣ್ಣು, ತರಕಾರಿ ,ಸೊಪ್ಪು ಕಡಲೇಕಾಯಿ , ತೆಂಗಿನಕಾಯಿ ಮುಂತಾದ ಸಣ್ಣ ಪುಟ್ಟ ವ್ಯಾಪಾರ ಮಾಡುವ ಅಸಂಖ್ಯಾತರಲ್ಲಿ ಬಹುತೇಕರು ಅವಿದ್ಯಾವಂತರು ಅಥವಾ ಅವರಲ್ಲಿ ಕೆಲವರಿಗೆ ಡಿಜಿಟಲ್ ಪೇಮೆಂಟ್ ಕುರಿತಾದ ತಿಳಿವಳಿಕೆ ಕಡಿಮೆ. ಮಳೆ ಬಿಸಿಲು ಗಾಳಿಯೆನ್ನದೇ ಕೇವಲ ನೂರಾರು ರೂಪಾಯಿಯ ವ್ಯಾಪಾರಕ್ಕಾಗಿ ದಿನವಿಡೀ ರಸ್ತೆ ಬದಿಯಲ್ಲಿ ಕಷ್ಟಪಟ್ಟು ದುಡಿಯುತ್ತಾರೆ. ಮೇಲಾಗಿ ದಿನದ ವ್ಯಾಪಾರ ಮುಗಿದಾಗ ಅವರಿಗೆ ಸಿಗುವ ಲಾಭವೂ ಅಂತಹ ಹೆಚ್ಚೇನಿಲ್ಲವಾದ್ದರಿಂದ ಪ್ರತೀ ರೂಪಾಯಿಯೂ ಅವರ ಪಾಲಿಗೆ ಅತಿ ಮುಖ್ಯ.





ಹೀಗಾಗಿ ಅವರ ಬಳಿ ಖರೀದಿ ಮಾಡಿದ ನಂತರ ಫೋನ್ ಪೇ, ಗೂಗಲ್ ಪೇ, ಪೇಟಿಎಂ ..ಮೂಲಕ ಹಣ ಪಾವತಿಸುವವರು ಒಮ್ಮೆ ತಾವೇ ಖುದ್ದಾಗಿ ಪೇಮೆಂಟ್ ಸರಿಯಾಗಿ ಆಗಿದೆಯೇ ಎಂಬುದನ್ನು ಪರೀಕ್ಷಿಸಿ ಅವರಿಗೆ ಹೇಳುವುದು ಒಳ್ಳೆಯದು. ಆಗ ಅವರಿಗೆ ಹಣ ಸಂದಾಯವಾಗಿರುವ ಭರವಸೆ ಬರುತ್ತದೆ. ನಮ್ಮ ಅವಸರದಲ್ಲಿ ವಸ್ತು ಖರೀದಿಸಿ ಹಾಗೇ ಸುಮ್ಮನೇ ಪಾವತಿ ಆಗಿದೆ ಎಂಬ ಭಾವನೆಯಿಂದ ಹೊರಟರೆ ವ್ಯಾಪಾರಿಗಳಿಗೆ ಸಿಗುವ ಅಲ್ಪ ಸ್ವಲ್ಪ ಲಾಭದ ಮೇಲೂ ಹೊಡೆದಂತಾಗುತ್ತದೆ. ಹೀಗಾದಲ್ಲಿ ಅವರಿಗೆ ಡಿಜಿಟಲ್ ಪೇಮೆಂಟ್ ಬಗೆಗೂ ಭರವಸೆ ಮೂಡಲಾರದು.

ಒಟ್ಟಾರೆಯಾಗಿ, ದಿನವಿಡೀ ಮೈಮುರಿದು ಬೆವರು ಸುರಿಸಿ ದುಡಿದು ಉಣ್ಣುವ ಜನರಿಗೆ ನಮ್ಮಿಂದ ಆಕಸ್ಮಿಕವಾಗಿ ಆಗಲೀ ಅಥವಾ ಕಣ್ತಪ್ಪಿನಿಂದಾಗಲೀ ಇಲ್ಲವೇ ಉದ್ದೇಶಪೂರ್ವಕವಾಗಿಯೇ ಆಗಲೀ ಅನ್ಯಾಯವಾಗದಂತೆ ಸಣ್ಣ ಎಚ್ಚರವಹಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಅದರಲ್ಲೂ ವಯಸ್ಸಾದವರು ತಮ್ಮ ವೃದ್ಧಾಪ್ಯದಲ್ಲಿ ಹೊರಗೆ ಬಂದು ಹತ್ತಾರು ರೂಪಾಯಿಗಳಿಗಾಗಿ ದುಡಿಯುತ್ತಿದ್ದಾರೆಂದರೆ ಅದು ಅವರ ಸ್ವಾಭಿಮಾನದ ಸಂಕೇತವಾಗಿರಬಹುದು ಅಥವಾ ಮನೆ ಮಕ್ಕಳು ಬಂಧುಗಳು ಎಲ್ಲರೂ ಇದ್ದೂ ಅವರನ್ನು ನೋಡಿಕೊಳ್ಳುವವರು ಇಲ್ಲದೇ ಇರಬಹುದು . ಹೀಗಾಗಿ ಸಾಧ್ಯವಾದಷ್ಟು ಅಂತಹವರಿಂದ ಹೆಚ್ಚು ಖರೀದಿಸಿ ಅವರ ಬದುಕಿಗೆ ಪರೋಕ್ಷವಾಗಿ ಆಸರೆಯಾಗುವ ಜೊತೆಗೆ, ವಸ್ತು ಖರೀದಿಸಿದ ಬಳಿಕ ಅವರಿಗೆ ಹಣದ ವಿಚಾರದಲ್ಲಿ ನಷ್ಟವಾಗದಂತೆ ಎಚ್ಚರ ವಹಿಸುವುದು ಸಹಾ ನಮ್ಮ ಜವಾಬ್ದಾರಿ.

* ಮರೆಯುವ ಮುನ್ನ *

ನಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಯಾರಿಗಾದರೂ ವ್ಯಾಪಾರದಲ್ಲಿ ವ್ಯವಹಾರದಲ್ಲಿ ಯಾಮಾರಿಸಿ ಒಂದಷ್ಟು ಹಣ ಉಳಿಸಿಕೊಂಡಲ್ಲಿ ಕೆಲವರ ಮನಕ್ಕೆ ಅನಿರ್ವಚನೀಯ ಸಂತೋಷ ಸಿಗಬಹುದೇನೋ ! ಆದರೆ ಅದೇ ಸಮಯದಲ್ಲಿ ಅದರಿಂದ ಇತರರಿಗೆ ಆಗಬಹುದಾದ ನೋವನ್ನು , ಆರ್ಥಿಕ ನಷ್ಟವನ್ನೂ ಸಹಾ ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ನಾಳೆ ಅದೇ ತರಹದ ಘಟನೆ ನಮ್ಮ ವಿಚಾರದಲ್ಲೇ ಉಲ್ಟಾ ಹೊಡೆದರೂ ಹೊಡೆಯಬಹುದು.

ಒಂದೊಮ್ಮೆ ಉದ್ದೇಶಪೂರ್ವಕದಿಂದ ಅಲ್ಲದಿದ್ದರೂ ನಮ್ಮ ಕಣ್ತಪ್ಪಿನಿಂದಾದ ಮಿಸ್ಟೇಕ್ ಅಂತ ಗೊತ್ತಾದ ನಂತರವಾದರೂ ತಪ್ಪನ್ನು ತಿದ್ದಿಕೊಳ್ಳುವುದು ವಿಹಿತ.

ನೆನಪಿಡಿ...ಯಾರಿಗೋ ನ್ಯಾಯವಾಗಿ ಸೇರಬೇಕಾದ ಹಣವನ್ನು ನಮ್ಮಲ್ಲೇ ಉಳಿಸಿಕೊಂಡರೆ , ಅದರ ಹತ್ತರಷ್ಟು ಕಕ್ಕಬೇಕಾದ ಸಂದರ್ಭ ಮುಂದೆ ನಮಗೆದುರಾದರೂ ಆಗಬಹುದು.



**ಹಿರಿಯೂರು ಪ್ರಕಾಶ್**








ವೆಂಕಟಕೃಷ್ಣಯ್ಯ ಅವರು ಶಿಕ್ಷಕ, ಪತ್ರಕರ್ತ, ಸಮಾಜ ಸುಧಾರಕ ಹಾಗೂ ರಾಷ್ಟ್ರಭಕ್ತರಾಗಿದ್ದು, ಮೈಸೂರಿನ ಸಾರ್ವಜನಿಕ ಜೀವನಕ್ಕೆ ಅಳಿಸಲಾರದ ಗುರುತು ಬರೆದವರು. ಮೈಸೂರಿನ ಜನ ಪ್ರೀತಿಯಿಂದ ಇವರನ್ನು ದಯಾಸಾಗರ, ತಾತಯ್ಯ ಎಂದೇ ಕರೆದರು . ಮೈಸೂರಿನ ಇತಿಹಾಸದಲ್ಲಿ ತಾತಯ್ಯ ಎಂಬ ಹೆಸರು ನಿಷ್ಠೆ, ಸೇವೆ ಮತ್ತು ನೈತಿಕತೆಯ ಪ್ರತೀಕವಾಗಿದೆ.

ಆರಂಭಿಕ ಜೀವನ : ವೆಂಕಟಕೃಷ್ಣಯ್ಯ ಅವರು 1844ರಲ್ಲಿ ಹೆಗ್ಗಡದೇವನಕೋಟೆ ತಾಲ್ಲೂಕಿನ ಮಗ್ಗೆ ಗ್ರಾಮದಲ್ಲಿ ಬಡ ಕುಟುಂಬದಲ್ಲಿ ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಊರಿನಲ್ಲಿ ಮುಗಿಸಿ, ನಂತರ ಮೈಸೂರಿನಲ್ಲಿ ಮ್ಯಾಟ್ರಿಕ್ಯುಲೇಶನ್ ಪೂರೈಸಿದರು. ಆ ಕಾಲದಲ್ಲಿ ಮೈಸೂರಿನಲ್ಲಿ ಇಷ್ಟು ವಿದ್ಯಾವಂತರಾಗಿದ್ದವರು ವಿರಳ. ಅವರ ಬಾಲ್ಯದಲ್ಲಿಯೇ ಸಾರ್ವಜನಿಕ ಸೇವೆ ಮತ್ತು ನೈತಿಕ ಜೀವನದ ಬಿತ್ತನೆ ನಡೆಯಿತು.

ಶಿಕ್ಷಣ ಕ್ಷೇತ್ರದ ಸೇವೆ : 1865ರಲ್ಲಿ, ತಾತಯ್ಯನವರು ಮೈಸೂರು ಮುನಿಸಿಪಲ್ ಶಾಲೆಯಲ್ಲಿ ಸಹಾಯಕ ಶಿಕ್ಷಕರಾಗಿ ತಮ್ಮ ಸೇವೆ ಆರಂಭಿಸಿದರು. ಪ್ರತಿಭಾವಂತ ಮತ್ತು ಶಿಸ್ತುಬದ್ಧ ಶಿಕ್ಷಕರಾಗಿದ್ದ ಅವರು ಶೀಘ್ರದಲ್ಲೇ ಮರಿಮಲ್ಲಪ್ಪ ಹೈಸ್ಕೂಲ್‌ನ ಮೊದಲ ಮುಖ್ಯೋಪಾಧ್ಯಾಯರಾಗಿ ನೇಮಕಗೊಂಡರು. ಆ ಕಾಲದ ವಿದ್ಯಾರ್ಥಿಗಳಿಗೆ ಅವರು ಕೇವಲ ಶಿಕ್ಷಕರಲ್ಲ, ಜೀವನದ ಮಾರ್ಗದರ್ಶಕರಾಗಿದ್ದರು.

ಅವರ ಪ್ರೇರಣೆಯಿಂದ ಮರಿಮಲ್ಲಪ್ಪ ಶಾಲೆ, ಸದ್ವಿದ್ಯಾ ಶಾಲೆ, ಶಾರದಾ ವಿಲಾಸ ಕಾಲೇಜು, ಮಹಾರಾಣಿ ಮಹಿಳಾ ಕಾಲೇಜು ಮುಂತಾದ ಅನೇಕ ಶಿಕ್ಷಣ ಸಂಸ್ಥೆಗಳು ಬೆಳವಣಿಗೆಯಾದವು.

ಶಿಕ್ಷಣ ಎಲ್ಲರಿಗೂ ದೊರೆಯಬೇಕು ಎಂಬ ನಂಬಿಕೆಯೊಂದಿಗೆ, ಅವರು 1890ರಲ್ಲಿ ಅನಾಥಾಲಯ (Anathalaya) ಸ್ಥಾಪಿಸಿದರು. ಈ ಸಂಸ್ಥೆ ಅನಾಥರು, ವಿಧವೆಯರು ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಆಶ್ರಯ ಮತ್ತು ಶಿಕ್ಷಣ ನೀಡುತ್ತಿತ್ತು. ಕಡ್ಡಾಯ ಶಿಕ್ಷಣದ ಅಗತ್ಯವನ್ನು ಮೈಸೂರು ಸರ್ಕಾರದ ಮುಂದೆ ಶತಮಾನಕ್ಕೂ ಮುನ್ನ ಅವರು ಪ್ರಸ್ತಾಪಿಸಿದ್ದರು ಇದು ಅವರ ಪ್ರಗತಿಪರ ದೃಷ್ಟಿಯ ಉದಾಹರಣೆ.

ಪತ್ರಿಕೋದ್ಯಮದ ಪಿತಾಮಹ : ವೆಂಕಟಕೃಷ್ಣಯ್ಯನವರನ್ನು ಮೈಸೂರು ಪತ್ರಿಕೋದ್ಯಮದ ಪಿತಾಮಹ ಎಂದೇ ಗುರುತಿಸಲಾಗುತ್ತದೆ. ಪತ್ರಿಕೆಗಳು ಸಮಾಜದ ಕಣ್ಣಾಗಬೇಕು ಎಂಬ ನಂಬಿಕೆಯಿಂದ, ಅವರು 1883ರಿಂದ ಪತ್ರಿಕಾ ಚಟುವಟಿಕೆಯಲ್ಲಿ ತೊಡಗಿಕೊಂಡರು.

1883ರಲ್ಲಿ ಅವರು ಹಿತಬೋಧಿನಿ ಪತ್ರಿಕೆಯನ್ನು ಆರಂಭಿಸಿದರು. ಅದರ ಯಶಸ್ಸಿನ ನಂತರ, 1885ರಲ್ಲಿ ವೃತ್ತಾಂತ ಚಿಂತಾಮಣಿ ಹಾಗೂ 1899ರಲ್ಲಿ ಸಾಧ್ವಿ ಪತ್ರಿಕೆಗಳನ್ನು ಪ್ರಕಟಿಸಿದರು. ಅವರು ಸಂಪಾದಿಸಿದ ಇತರ ಪತ್ರಿಕೆಗಳಲ್ಲಿ ಪೌರಸಮಾಜಿಕ ಪತ್ರಿಕೆ ಮತ್ತು ಸಂಪದಾಭ್ಯುದಯ ಪ್ರಮುಖ.

ಇಂಗ್ಲಿಷ್ ಭಾಷೆಯಲ್ಲಿಯೂ ಅವರು The Mysore Herald, The Mysore Patriot, The Wealth of Mysore ಹಾಗೂ The Nature Cure ಪತ್ರಿಕೆಗಳನ್ನು ಪ್ರಕಟಿಸಿದರು. 1897ರಲ್ಲಿ ಬಾಲಗಂಗಾಧರ ತಿಲಕರ ಬಂಧನದ ವಿರುದ್ಧ ಅವರು ಬರೆದ ಸಂಪಾದಕೀಯಗಳು ಜನಮನವನ್ನು ಕದಡಿದವು. ಅವರ ಧೈರ್ಯಶಾಲಿ ಪತ್ರಿಕೋದ್ಯಮದ ಪರಿಣಾಮವಾಗಿ ಮೈಸೂರು ಸರ್ಕಾರವು 1908ರಲ್ಲಿ Mysore Newspaper Regulation Act ಅನ್ನು ಜಾರಿಗೆ ತಂದಿತು.

ಪತ್ರಿಕೋದ್ಯಮದ ಗೌರವ ಕಾಪಾಡುವ ದೃಷ್ಟಿಯಿಂದ, ಅವರು ತಮ್ಮ ವೈಯಕ್ತಿಕ ಆಸ್ತಿಯಿಂದ ರೂ. 2000 ದೇಣಿಗೆ ನೀಡಿ, ಮೈಸೂರು ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿ ಸ್ಥಾಪಿಸಿದರು. ನಂತರ 1951ರಲ್ಲಿ, ವಿಶ್ವವಿದ್ಯಾಲಯವು ಪತ್ರಿಕೋದ್ಯಮವನ್ನು ಪದವಿ ಆಯ್ಕೆಯಾಗಿ ಪರಿಚಯಿಸಿದಾಗ ಈ ಶಿಷ್ಯವೃತ್ತಿ ಮೊದಲ ಬಾರಿಗೆ ನೀಡಲ್ಪಟ್ಟಿತು.

ಕನ್ನಡ ಸಾಹಿತ್ಯಕ್ಕೆ ತಾತಯ್ಯನವರ ಕೊಡುಗೆ ತುಂಬಾ ಇದೆ. ಅವರ ಕೆಲವು ಪ್ರಮುಖ ಕೃತಿಗಳೆಂದರೆ ಧನಾ ರ್ಜನೇಯ ಕ್ರಮ (ಹಣ ಗಳಿಸುವುದು ಹೇಗೆ), ಚೋರಗ್ರಹಣ ತಂತ್ರ (ಕಳ್ಳರನ್ನು ಪತ್ತೆ ಹಚ್ಚುವ ತಂತ್ರ) ವಿದ್ಯಾರ್ಥಿ ಕರಭೂಷಣ (ವಿದ್ಯಾರ್ಥಿಗಳ ಕೈಪಿಡಿ) ಇತ್ಯಾದಿ. ಅವರು ದಾವಣಗೆರೆಯಲ್ಲಿ 1922 ರಲ್ಲಿ ನಡೆದ 8 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು .

ಸಾಮಾಜಿಕ ಸುಧಾರಣೆ ಮತ್ತು ರಾಷ್ಟ್ರಭಾವನೆ : ತಾತಯ್ಯರು ಶಿಕ್ಷಣದೊಂದಿಗೆ ಸಮಾಜ ಪರಿವರ್ತನೆಗೂ ಬದ್ಧರಾಗಿದ್ದರು. ವಿಧವೆಯರ ಮರುಮದುವೆ, ಮಹಿಳಾ ಶಿಕ್ಷಣ, ಮತ್ತು ಹರಿಜನರ ಉದ್ಧಾರದ ಪರವಾಗಿ ಅವರು ಧೈರ್ಯದಿಂದ ಬರಹ ಬರೆದರು. ಅವರ ಅನಾಥಾಲಯವು ಸಮಾಜದಲ್ಲಿ ಸಮಾನತೆಯ ಮೌಲ್ಯ ಬಿತ್ತಿದ ಸಂಸ್ಥೆಯಾಯಿತು.

ಮೈಸೂರು ನೇರ ಬ್ರಿಟಿಷ್ ಆಳ್ವಿಕೆಯಲ್ಲಿ ಇರದಿದ್ದರೂ, ಅವರು ರಾಷ್ಟ್ರಭಾವನೆ ಬೆಳೆಸಲು ಸಕ್ರಿಯರಾಗಿದ್ದರು. ಅವರು ಮೈಸೂರು ಪ್ರತಿನಿಧಿ ಸಭೆಯ ಸದಸ್ಯರಾಗಿ ಜನರ ಪರ ಧ್ವನಿ ಎತ್ತಿದರು. ಅವರ ಬರಹಗಳು ಸತ್ಯಾಗ್ರಹ, ಖಾದಿ ಮತ್ತು ಸ್ವದೇಶಾಭಿಮಾನವನ್ನು ಉತ್ತೇಜಿಸಿದವು.

## ಮೈಸೂರಿನ ಬೀಷ್ಮ ಪಿತಾಮಹ, ದಯಾಸಾಗರ ಮೈಸೂರು ತಾತಯ್ಯ ಎಂ. ವೆಂಕಟಕೃಷ್ಣಯ್ಯ

ಮಹಾತ್ಮ ಗಾಂಧೀಜಿ ತಾತಯ್ಯನವರನ್ನು ಮೈಸೂರಿನ ಭೀಷ್ಮ ಪಿತಾಮಹ ಎಂದು ಪ್ರೀತಿಯಿಂದ ಗೌರವಿಸಿದರು. ರಾಜದರ್ಶನ ಮತ್ತು ರಾಜಕೀಯ ಪ್ರಭಾವ : ತಾತಯ್ಯನವರಿಗೆ ಮೈಸೂರಿನ ಅರಸರೊಂದಿಗೆ ಆಪ್ತ ಸಂಬಂಧವಿತ್ತು. 1909ರಲ್ಲಿ, ಅವರು ಮಹಾರಾಜರಿಗೆ ಸರ್ ಎಂ. ವಿಶ್ವೇಶ್ವರಯ್ಯರನ್ನು ದಿವಾನರನ್ನಾಗಿ ನೇಮಕ ಮಾಡುವಂತೆ ಸಲಹೆ ನೀಡಿದರು ಎಂದು ದಾಖಲೆಗಳು ಸೂಚಿಸುತ್ತವೆ. ಈ ನೇಮಕವೇ ಮೈಸೂರಿನ ಆಧುನಿಕ ಅಭಿವೃದ್ಧಿಯ ತಿರುವುಬಿಂದು ಎಂದು ಪರಿಗಣಿಸಲಾಗಿದೆ.

ಅಂತಿಮ ವರ್ಷಗಳು ಮತ್ತು ನಿಧನ : ತಾತಯ್ಯನವರು ತಮ್ಮ ಜೀವನದ ಕೊನೆಯ ವರ್ಷಗಳಲ್ಲಿ ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಅನಾಥಾಲಯದಲ್ಲಿಯೇ ವಾಸವಿದ್ದು, ಅಲ್ಲಿ ತಮ್ಮ ಜೀವನವನ್ನೆಲ್ಲಾ ಸಾಮಾಜಿಕ ಸೇವೆಗೆ ಮೀಸಲಿಟ್ಟಿದ್ದರು. ಅವರ ಜೀವನದ ಧ್ಯೇಯವಾಕ್ಯವೇ ಮಾನವಸೇವೆ ದೇವಸೇವೆ. 1935ರಲ್ಲಿ, 91ನೇ ವಯಸ್ಸಿನಲ್ಲಿ ಅವರು ನಿಧನರಾದರು. ಅವರ ನಿಧನದ ನಂತರ ಮೈಸೂರಿನ ಬಸ್ ನಿಲ್ದಾಣದ ಎದುರಿನಲ್ಲಿ ನಿರ್ಮಿಸಲಾದ ತಾತಯ್ಯ ಉದ್ಯಾನದಲ್ಲಿನ ಅವರ ಪ್ರತಿಮೆ ಇಂದು ಸಹ ಮೈಸೂರಿನ ಜನತೆಗೆ ಪ್ರೇರಣೆಯ ಸಂಕೇತವಾಗಿದೆ. ವೆಂಕಟಕೃಷ್ಣಯ್ಯನವರು ಶಿಕ್ಷಣ, ಪತ್ರಿಕೋದ್ಯಮ, ಸಮಾಜ ಸುಧಾರಣೆ ಮತ್ತು ರಾಷ್ಟ್ರಭಾವನೆ ಈ ನಾಲ್ಕು ಕ್ಷೇತ್ರಗಳ ನವಚೇತನವಾಗಿದ್ದರು. ಅವರು ರೂಪಿಸಿದ ಅನಾಥಾಲಯ, ಅವರು ಬರೆದ ಪತ್ರಿಕೆಗಳು ಮತ್ತು ಅವರು ಪ್ರಾರಂಭಿಸಿದ ಚಳುವಳಿಗಳು ಮೈಸೂರಿನ ಪ್ರಗತಿಗೆ ಬುನಾದಿ ಹಾಕಿದವು.

ಅವರು ಬಾಳು ಸೇವೆಗೆ, ಶಿಕ್ಷಣ ಜನೋದ್ಧಾರಕ್ಕೆ, ಪತ್ರಿಕೆ ಸತ್ಯಕ್ಕೆ. ಎಂದು ನಂಬಿ ಅದರಂತೆ ನಡೆದು ಜೀವನ ನಡೆಸಿದರು . ಮೈಸೂರು ತಾತಯ್ಯ ನವರ ಹೆಸರು ಎಂದೂ ಚಿರಸ್ಥಾಯಿಯಾಗಿ ಉಳಿದಿದೆ.




ಸ್ವಾಮಿನಾಥನ್
ಬೆಂಗಳೂರು


## ಸರ್ಕಾರಿ ಕಚೇರಿಗಳಲ್ಲಿ ಕನ್ನಡ ಬಳಕೆಯ ಪ್ರಾಮುಖ್ಯತೆ





ಕರ್ನಾಟಕದ ಖ್ಯಾತ ಕವಿ ಶ್ರೀ ಹುಯಿಲಗೋಳ ನಾರಾಯಣರಾಯರು "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಕವನದಲ್ಲಿ ಕನ್ನಡ ನಾಡಿನ ಸಾಂಸ್ಕೃತಿಕ ಸಂಪತ್ತನ್ನು ಶ್ಲಾಘಿಸಿದ್ದಾರೆ.ಈ ಬಾರಿ ಕನ್ನಡ ರಾಜ್ಯೋತ್ಸವದ ಎಪ್ಪತ್ತನೆಯ ಸಂಭ್ರಮಾಚರಣೆಯ ಸಂದರ್ಭ.ಈಗಲೂ ಕೂಡ ಕನ್ನಡ ನಾಡು ಯಥಾರ್ಥದಲ್ಲಿ ಉದಯವಾಗಿದೆಯೇ ಎಂಬ ಸಂಶಯ ಕಾಡುತ್ತದೆ.ಕಾರಣ ಕನ್ನಡದ ಬಗ್ಗೆ ಪ್ರಜ್ಞಾಪೂರ್ವಕ ಅವಜ್ಞೆ.

ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಭಾಷೆ ಕನ್ನಡ.ಇದು ಶಾಸ್ತ್ರೀಯ ಭಾಷೆಯ ಸ್ಥಾನಮಾನ ಹೊಂದಿದೆ. ಎಂಟು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಿಂದ ಶ್ರೀಮಂತವಾಗಿದೆ.ಭಾಷಾವಾರು ಪ್ರಾಂತ್ಯಗಳ ವಿಂಗಡನೆಯಾಗಿ ಏಳು ದಶಕಗಳು ಸಂದವು. ಆದರೂ ಇಂದಿಗೂ ಕನ್ನಡವು ಹಸಿವನ್ನು ನೀಗಿಸುವ ಭಾಷೆಯಾಗಿಲ್ಲ.ಸರಕಾರವು ಅಧಿಕೃತವಾಗಿ ಆಡಳಿತ ಭಾಷೆ ಕನ್ನಡವನ್ನು ಕಡ್ಡಾಯವಾಗಿ ಮಾಡಿದೆ, ಅಲ್ಲದೆ ಅನೇಕ ಸುತ್ತೋಲೆಗಳನ್ನು ಹೊರಡಿಸಿದೆ.ಆದರೆ ಅವುಗಳ ಅನುಷ್ಠಾನಕ್ಕೆ ತರುವ ಪ್ರಾಮಾಣಿಕ ಪ್ರಯತ್ನದ ಅವಶ್ಯಕತೆ ಇದೆ.

ಇತಿಹಾಸವನ್ನು ಅವಲೋಕಿಸಿದರೆ ಶಾತವಾಹನರು,ಗಂಗರು,ಕದಂಬರು, ರಾಷ್ಟ್ರಕೂಟರು ಹೊಯ್ಸಳರು ಚಾಲುಕ್ಯರು ಮೊದಲಾದ ರಾಜಮನೆತನಗಳು ರಾಜ್ಯಾಡಳಿತದಲ್ಲಿ ಕನ್ನಡ ಭಾಷೆಯನ್ನು ಬಳಸುತ್ತಿದ್ದುದು ಅನೇಕ ಶಾಸನಗಳಿಂದ ದೃಢಪಟ್ಟಿದೆ.ಮುಸಲ್ಮಾನ ದೊರೆಗಳ ಆಧಿಪತ್ಯದಲ್ಲಿ ಹಲವಾರು ಉರ್ದು ಶಬ್ದಗಳು ಕನ್ನಡಕ್ಕೆ ಬಂದವು.ಪರಭಾಷೆಗಳಿಂದ ಶಬ್ದಗಳನ್ನು ಸ್ವೀಕರಿಸಿಕೊಂಡು ವಿಸ್ತೃತವಾಗುವುದು ಭಾಷೆಯ ಜೀವಂತಿಕೆಯ ಸಾಕ್ಷಿ.ಸ್ಥಳೀಯ ಭಾಷೆಯಲ್ಲಿ ಆಡಳಿತದ ನಿರ್ವಹಣೆಯ ಮಹತ್ವ ಆಂಗ್ಲರಿಗೂ ಗೊತ್ತಿತ್ತು.

ಆಡಳಿತ ಭಾಷೆಯಾಗಿ ಕನ್ನಡವನ್ನು ಕಡ್ಡಾಯವಾಗಿಸಿದರೆ ಸಾಲದು.ಅಕ್ಷರಶ: ಜಾರಿಯಾಗಬೇಕು.ಆಗ ಕವಿ ಡಿ ಎಸ್ ಕರ್ಕಿಯವರು ತಮ್ಮ ಕವಿತೆಯಲ್ಲಿ ಹೇಳಿದಂತೆ ಕರುನಾಡ ದೀಪ.ಸಿರಿ ನುಡಿಯ ದೀಪ.ಹಚ್ಚೇವು ಕನ್ನಡದ ದೀಪ ಎಂಬ ಆಶಯವು ನಿಜವಾಗುತ್ತದೆ.




ಇಂದಿನ ಅನೇಕ ಸರ್ಕಾರಿ ಕಚೇರಿಗಳು ಮತ್ತು ವಿತ್ತೀಯ ಸಂಸ್ಥೆಗಳಲ್ಲಿ ಪರಭಾಷಿಕರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಹಾಗಾಗಿ ಕನ್ನಡಿಗರು ಅಲ್ಪಸಂಖ್ಯಾತರಾಗಿದ್ದಾರೆ.ಹೀಗಿರುವಾಗ ಸ್ಥಳೀಯರಿಗೆ ಸಮರ್ಪಕ ಸೇವೆಯನ್ನು ಪಡೆಯಲು ಕಷ್ಟಸಾಧ್ಯ.

ಪರಭಾಷಿಕರಿಗೆ ಸಹ ಕನ್ನಡದ ಬಗ್ಗೆ ಅರಿವು ಮೂಡಿಸಿ,ಅವರೂ ಕೂಡ ಕನ್ನಡದಲ್ಲೇ ವ್ಯವಹರಿಸುವಂತಾಗಬೇಕು.ಕನ್ನಡಿಗರು ಪರಭಾಷೀಯರೊಂದಿಗೆ ಕನ್ನಡದಲ್ಲಿಯೇ ವ್ಯವಹರಿಸಿದರೆ ಕನ್ನಡದ ಕಲಿಕೆಗೆ ಅವರಿಗೆ ಅನಿವಾರ್ಯತೆಯುಂಟಾಗುವುದು. ಅವರೂ ಗ್ರಾಮೀಣರೊಂದಿಗೆ ಸಹಜ ಸಂವಹನ ಮಾಡಬಹುದು.

ಕವಿ ಅಂಬಿಕಾತನಯದತ್ತ ಅವರು ಕನ್ನಡವನ್ನು ಜನರ ಜೀವನಾಡಿ ಎಂದು ಬಣ್ಣಿಸಿದ್ದಾರೆ.ಭಾಷೆಯು ರಾಷ್ಟ್ರದ ಶಕ್ತಿಯೂ ಹೌದು.ತಂತ್ರಜ್ಞಾನದ ಬೆಳವಣಿಗೆಯ ರಭಸದಲ್ಲಿ ಕನ್ನಡ ಭಾಷೆಯ ಆಡಳಿತಾತ್ಮಕ ಪ್ರಗತಿ ಸರಿದೊರೆಯಾಗಿ ಮುನ್ನಡೆಯಬೇಕು.ಅಲ್ಲದೆ ಉದ್ಯೋಗಗಳಲ್ಲಿ ಸ್ಥಳೀಯರ ನೇಮಕಾತಿಗೆ ಪ್ರಾಶಸ್ತ್ಯ ದೊರೆಯಬೇಕು.

ಕರ್ನಾಟಕ ರಾಜ್ಯದಲ್ಲಿ ಕನ್ನಡವು ಆಡಳಿತ ಭಾಷೆಯಾಗಿದ್ದು,ಅದರ ಅನುಷ್ಠಾನವು ಪರಿಣಾಮಕಾರಿಯಾಗಿ ಆಗಬೇಕು.ಆಗ ಜನರ ಮತ್ತು ಸರ್ಕಾರದ ನಡುವೆ ಅಂತರ ಕಡಿಮೆಯಾಗಿ ನೇರ ಸಂವಹನ ಸಾಧ್ಯವಾಗುತ್ತದೆ. ಕನ್ನಡದಲ್ಲಿಯೇ ಸೂಚನೆಗಳು ಸ್ಥಳೀಯ ಫಲಾನುಭಾವಿಗಳು ಕಾರ್ಯಾಲಯಗಳಲ್ಲಿ ನೌಕರರೊಂದಿಗೆ ಉತ್ತಮ ಸಂವಹನದಿಂದಾಗಿ ತಮ್ಮ ಸಮಸ್ಯೆ/ಬೇಡಿಕೆಯನ್ನು ಸ್ಪಷ್ಟವಾಗಿ ಮಂಡಿಸುತ್ತಾರೆ ಮತ್ತು ಸೇವೆಯನ್ನು ಪಡೆಯುತ್ತಾರೆ.ಗ್ರಾಮೀಣ ನಾಗರಿಕರು ಹಿಂಜರಿಕೆಯಿಲ್ಲದೆ ವ್ಯವಹರಿಸಬಹುದು.

ಸರ್ಕಾರಿ ಆದೇಶಗಳು ಮತ್ತು ಅಧಿಸೂಚನೆಗಳು ಕನ್ನಡದಲ್ಲಿದ್ದರೆ ಜನರಿಗೆ ಸುಲಭಗ್ರಾಹ್ಯವಾಗಿ ಆಡಳಿತ ಯಂತ್ರದಲ್ಲಿ ಪಾರದರ್ಶಕತೆ ಹೆಚ್ಚಾಗುತ್ತದೆ.

ಕಡತಗಳ ವಿಲೇವಾರಿ ಸುಲಲಿತವಾಗಿ ಮತ್ತು ಶೀಘ್ರವಾಗಿ ಆಗುತ್ತದೆ.ಸಹೋದ್ಯೋಗಿಗಳ ನಡುವೆ ಸಂವಹನ ಸರಳವಾಗುತ್ತದೆ. ಕನ್ನಡವನ್ನು ಆಡಳಿತದಲ್ಲಿ ಅನುಷ್ಠಾನಕ್ಕೆ ತರುವಲ್ಲಿನ ನಿರ್ಲಕ್ಷ್ಯಕ್ಕೆ ಕಾನೂನು ಕ್ರಮ ಜರುಗಿಸಬೇಕು.ಹೀಗೆ ಮಾಡಿದಾಗ ಜನರಲ್ಲಿ ಕನ್ನಡದ ಬಗ್ಗೆ ಅರಿವು ಮೂಡುತ್ತದೆ.

ಕನ್ನಡವು ಆಡಳಿತ ಭಾಷೆಯಾಗಿರುವುದರಿಂದ ಅದರ ಪಾಲನೆ ಅಧಿಕಾರಿಗಳ ಮತ್ತು ನೌಕರರ ಕರ್ತವ್ಯವಾಗಿದ್ದು ಸಂವಿಧಾನಾತ್ಮಕ ನ್ಯಾಯದ ಪಾಲನೆಯಾಗುತ್ತದೆ.

ಇಂದು ಮಾಹಿತಿ ತಂತ್ರಜ್ಞಾನ ಕ್ಷೇತ್ರವು ಅತ್ಯಂತ ವೇಗವಾಗಿ ಬೆಳೆಯುತ್ತಿದೆ.ಈ ನಿಟ್ಟಿನಲ್ಲಿ ಕನ್ನಡದ ಯೂನಿಕೋಡ್ , ಕನ್ನಡದ ಕೀಲಿಮಣೆ ಇತ್ಯಾದಿ ತಂತ್ರಾಂಶಗಳ ಬಳಕೆ ಹೆಚ್ಚಾಗಬೇಕು. ಇದರಿಂದ ಅತ್ಯಂತ ತ್ವರಿತ,ನಿಖರ ಮತ್ತು ತೃಪ್ತಿದಾಯಕ ಸೇವೆಗಳನ್ನು ಅಪೇಕ್ಷಿಸಬಹುದು. ಭಾಷಾಂತರ, ಕನ್ನಡದ ಡಿಜಲೀಕರಣ ಮತ್ತು ವಿವಿಧ ಸೃಜನಶೀಲ ಕ್ಷೇತ್ರದಲ್ಲಿ ಅವಕಾಶಗಳು ತೆರೆದುಕೊಳ್ಳುತ್ತವೆ. ಹೀಗಿದ್ದಾಗ ಆಧುನಿಕ ಜೀವನ ವಿಧಾನದಲ್ಲಿ ಸಕಾರಾತ್ಮಕ ವಿಕಸನ ಶತಸ್ಸಿದ್ಧ.

ಭಾಷೆಯನ್ನು ಬಳಸಿದಷ್ಟೂ ವಿಪುಲವಾಗಿ ಬೆಳೆಯುತ್ತದೆ.ಸ್ವಂತ ಲಿಪಿ ಮತ್ತು ಅಂಕಿಗಳನ್ನು ಹೊಂದಿರುವ ಸಿರಿವಂತ ಸಂಸ್ಕೃತಿಯ ಪರಂಪರೆಯನ್ನು ಮುಂಬರುವ ಪೀಳಿಗೆಗೆ ಪರಿಚಯಿಸುವ ಸಫಲ ಕಾರ್ಯವೂ ಆಗುತ್ತದೆ.

ಜನಸ್ನೇಹಿ ಮತ್ತು.ಜನಪರ ಆಡಳಿತದಲ್ಲಿ ವಿಶ್ವಾಸಾರ್ಹ ಸೇವೆಗಳು ದೊರಕುವಂತಾಗುತ್ತದೆ.ಆಡಳಿತ ಭಾಷೆಯಾಗಿ ಕನ್ನಡವನ್ನು ಜಾರಿಗೊಳಿಸಿದ್ದಾಗಲೂ ಸಮರ್ಪಕವಾಗಿ ಅನುಷ್ಠಾನಕ್ಕೆ ತರುವಲ್ಲಿ ಪ್ರತಿಯೊಬ್ಬರೂ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು.

ಮಲ್ಲಿಗೆ ಮುಗುಳು ಸಂಪಗೆಯೆಸಳು
ನೆಲಕಡರಿದ ಪಾರಿಜಾತದ ಅರಳು
ಸುಲಗಾಯಿಯ ಸವಿಯಿಹ ಬೆಳಸು
ಸುಲಭವು ಕನ್ನಡ ಬಳಸುತ ಬೆಳೆಸು




ಶ್ರೀಮತಿ ಜ್ಯೋತ್ಸ್ನಾ
ರಾಜೇಂದ್ರ ಹೇರೂರ
ರಾಯಚೂರು


## ತೈಲಪ ಅಹವಮಲ್ಲನಾಳಿದ ನಾಡೇ

ಕರುನಾಡ ತಾಯಿ ಸದಾ ಚಿನ್ಮಯಿಈ ಪುಣ್ಯ ಭೂಮಿ ನಮ್ಮ ದೇವಾಲಯಪ್ರೇಮಾಲಯ ಈ ದೇವಾಲಯಕರುನಾಡ ತಾಯಿ ಸದಾ ಚಿನ್ಮಯಿ

ವೀರ ಧೀರರಾಳಿದ ನಾಡು ನಿನ್ನದುಶಾಂತಿ ಮಂತ್ರ ಪಾಡಿದ ಬೀಡು ನಿನ್ನದುವರ ಸಾಧು ಸಂತರ ನೆಲೆ ನಿನ್ನದುಮಹಾ ಶಿಲ್ಪಕಾರರ ಕಲೆ ನಿನ್ನದುಸಂಗೀತ ಸಾಹಿತ್ಯ ಸೆಲೆ ನಿನ್ನದು

ಕಲ್ಯಾಣದ ಚಾಲುಕ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದ ಮತ್ತು ರಾಷ್ಟ್ರಕೂಟರ ಆಳ್ವಿಕೆಯನ್ನು ಕೊನೆಗೊಳಿಸಿದ ಪ್ರಮುಖ ಐತಿಹಾಸಿಕ ವ್ಯಕ್ತಿಯಾದ ಎರಡನೆಯ ತೈಲಪನ ಕುರಿತು ಸಮಗ್ರ ಮತ್ತು ಆಕರ್ಷಕವಾದ ವಿವರಗಳನ್ನು ಇಲ್ಲಿ ನೀಡಲಾಗಿದೆ. ಇವನ ಕಥೆ ಕೇವಲ ಅಧಿಕಾರ ಪಲ್ಲಟದ ಕಥೆಯಲ್ಲ, ಇದು ಅವಮಾನ ಮತ್ತು ಪ್ರತೀಕಾರದ ಕಿಚ್ಚಿನಿಂದ ಹೊಸ ಸಾಮ್ರಾಜ್ಯ ಕಟ್ಟಿದ ಶೌರ್ಯದ ಗಾಥೆ!

ಎರಡನೆಯ ತೈಲಪ: ಕಲ್ಯಾಣ ಚಾಲುಕ್ಯ ಸಾಮ್ರಾಜ್ಯದ ಸಂಸ್ಥಾಪಕ

ಆಡಳಿತದ ಅವಧಿ: ಸುಮಾರು ಕ್ರಿ.ಶ. 973 997

ಕಲ್ಯಾಣಿ ಚಾಲುಕ್ಯರು (ಅಥವಾ ಪಶ್ಚಿಮ ಚಾಲುಕ್ಯರು) ಕರ್ನಾಟಕವನ್ನು ಆಳಿದ ಪ್ರಮುಖ ರಾಜವಂಶಗಳಲ್ಲಿ ಒಂದು. ಈ ವಂಶದ ಸ್ಥಾಪಕ ಎರಡನೆಯ ತೈಲಪನು ರಾಷ್ಟ್ರಕೂಟ ಸಾಮ್ರಾಜ್ಯದ ಅಡಿಯಲ್ಲಿ ದೀರ್ಘಕಾಲ ದಮನಿತವಾಗಿದ್ದ ಚಾಲುಕ್ಯರ ಕೀರ್ತಿಯನ್ನು ಪುನಃ ಸ್ಥಾಪಿಸಿದ ವೀರ. ಇವನ ರಾಜಕೀಯ ನಡೆ ಮತ್ತು ಮಿಲಿಟರಿ ವಿಜಯಗಳು ಕನ್ನಡ ನಾಡಿನ ರಾಜಕೀಯ ಭೂಪಟವನ್ನು ಸಂಪೂರ್ಣವಾಗಿ ಬದಲಾಯಿಸಿದವು.

ಚಾಲುಕ್ಯರ ಪುನರುತ್ಥಾನಕ್ಕೆ ಅಡಿಪಾಯ (ಪೂರ್ವರಂಗ)

ತೈಲಪನ ಉದಯವನ್ನು ಅರಿಯಲು, ಆತ ಹುಟ್ಟಿ ಬಂದ ಐತಿಹಾಸಿಕ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಬೇಕು. ಇವನು ಬಾದಾಮಿಯ ಚಾಲುಕ್ಯ ವಂಶದ ಕೊನೆಯ ದೊರೆಯ ಸಹೋದರನ ವಂಶಸ್ಥನಾಗಿದ್ದನು.

**1. ವಂಶಸ್ಥರ ಹೆಮ್ಮೆ ಮತ್ತು ಸಾಮಂತರ ಸ್ಥಿತಿ:**

ಬಾದಾಮಿಯ ಚಾಲುಕ್ಯರ ವೈಭವವನ್ನು ರಾಷ್ಟ್ರಕೂಟರ ಸಂಸ್ಥಾಪಕ ದಂತಿದುರ್ಗನು ಕ್ರಿ.ಶ. 753ರಲ್ಲಿ ಕೊನೆಗೊಳಿಸಿದ್ದನು. ತೈಲಪನು ಅದೇ ಪ್ರಸಿದ್ಧ ಚಾಲುಕ್ಯ ವಂಶದ ಹಕ್ಕುದಾರನಾಗಿದ್ದನು. ರಾಷ್ಟ್ರಕೂಟರ ಆಳ್ವಿಕೆಯ ಉದ್ದಕ್ಕೂ, ತೈಲಪನ ಪೂರ್ವಜರು ಮತ್ತು ತೈಲಪ ಸ್ವತಃ ರಾಷ್ಟ್ರಕೂಟರಿಗೆ ಸಾಮಂತರಾಗಿ, ವಿಜಾಪುರದ ಸುತ್ತಮುತ್ತಲಿನ ಪ್ರದೇಶಗಳಾದ ತರ್ದವಾಡಿ–1000 ಎಂಬ ಪ್ರಾಂತ್ಯದ ಅಧಿಕಾರವನ್ನು ಮಾತ್ರ ಅನುಭವಿಸುತ್ತಿದ್ದರು.



**2. ಸಾಮಂತರಾಗಿ ಸೇವೆ ಮತ್ತು ಬೆಳೆಯುವಿಕೆ:**

ತೈಲಪನು ರಾಷ್ಟ್ರಕೂಟ ದೊರೆ ಮೂರನೆಯ ಕೃಷ್ಣನಿಗೆ ನಿಷ್ಠನಾದ ಸಾಮಂತನಾಗಿದ್ದನು. ಆತ ತನ್ನ ಶೌರ್ಯ ಮತ್ತು ದಕ್ಷತೆಯನ್ನು ಮೂರನೆಯ ಕೃಷ್ಣನ ಅಡಿಯಲ್ಲಿ ನಡೆದ ಹಲವಾರು ಯುದ್ಧಗಳಲ್ಲಿ ಸಾಬೀತುಪಡಿಸಿದನು. ಕೃಷ್ಣನು ಇವನ ಸಾಮರ್ಥ್ಯವನ್ನು ಗುರುತಿಸಿ, ಆತನಿಗೆ ಪ್ರಮುಖ ಪ್ರಾದೇಶಿಕ ಜವಾಬ್ದಾರಿಗಳನ್ನು ವಹಿಸಿದ್ದನು. ಈ ಅವಧಿಯಲ್ಲಿ, ತೈಲಪನು ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು, ತನ್ನದೇ ಆದ ಸೇನಾಬಲವನ್ನು ವೃದ್ಧಿಸಿಕೊಂಡು, ಭವಿಷ್ಯದ ಬೃಹತ್ ಯೋಜನೆಗಳಿಗೆ ಸಿದ್ಧತೆ ನಡೆಸುತ್ತಿದ್ದನು.

ಮಹಾ ಕ್ರಾಂತಿ – ರಾಷ್ಟ್ರಕೂಟ ಸಾಮ್ರಾಜ್ಯದ ಪತನ (ಕ್ರಿ.ಶ. 973)

ತೈಲಪನ ಬದುಕಿನ ನಿರ್ಣಾಯಕ ತಿರುವು ರಾಷ್ಟ್ರಕೂಟರ ಸಿಂಹಾಸನಕ್ಕೆ ಎದುರಾದ ಆಂತರಿಕ ಬಿಕ್ಕಟ್ಟು.

**1. ರಾಷ್ಟ್ರಕೂಟರ ದೌರ್ಬಲ್ಯ:**

ಮೂರನೆಯ ಕೃಷ್ಣನ ಮರಣದ ನಂತರ (ಕ್ರಿ.ಶ. 967), ರಾಷ್ಟ್ರಕೂಟರ ಸಾಮ್ರಾಜ್ಯದಲ್ಲಿ ಆಂತರಿಕ ಕಲಹಗಳು ಮತ್ತು ದುರ್ಬಲ ದೊರೆಗಳ ಆಳ್ವಿಕೆ ಆರಂಭವಾಯಿತು. ಕೊನೆಯ ರಾಷ್ಟ್ರಕೂಟ ದೊರೆ ಎರಡನೆಯ ಕರ್ಕನು ದುರ್ಬಲನಾಗಿದ್ದನು ಮತ್ತು ಸಾಮಂತರಿಗೆ ಗೌರವ ನೀಡುತ್ತಿರಲಿಲ್ಲ. ಸಾಮ್ರಾಜ್ಯದ ಗೌರವ ಮತ್ತು ಆಡಳಿತ ಕುಸಿಯತೊಡಗಿತು.

ಕನ್ನಡದ ರಾಜ-ಮಾಹಾರಾಜರು

**2. ತೈಲಪನ ಪ್ರತೀಕಾರದ ಕಿಚ್ಚು:**

ತನ್ನ ಪೂರ್ವಜರಿಗೆ ಆದ ಅವಮಾನ ಮತ್ತು ಪ್ರಸ್ತುತ ಸಾಮ್ರಾಜ್ಯದ ದೌರ್ಬಲ್ಯವನ್ನು ಗಮನಿಸಿದ ತೈಲಪನು, ರಾಷ್ಟ್ರಕೂಟರ ಪತನಕ್ಕೆ ಇದು ಸಕಾಲ ಎಂದು ನಿರ್ಧರಿಸಿದನು. ಕ್ರಿ.ಶ. 973ರಲ್ಲಿ, ಆತ ತನ್ನ ಸೇನೆಯೊಂದಿಗೆ ರಾಷ್ಟ್ರಕೂಟರ ರಾಜಧಾನಿ ಮಾನ್ಯಖೇಡದ ಮೇಲೆ ಮಿಂಚಿನ ದಾಳಿ ನಡೆಸಿದನು.

**3. ಎರಡನೆಯ ಕರ್ಕನ ಸೋಲು ಮತ್ತು ಸಾಮ್ರಾಜ್ಯದ ಅಂತ್ಯ:**

ಈ ಆಕ್ರಮಣವನ್ನು ಎದುರಿಸಲು ಅಸಮರ್ಥನಾದ ಎರಡನೆಯ ಕರ್ಕ ಕೃಷ್ಣನಗರದಲ್ಲಿ (ಆಧುನಿಕ ನಾಸಿಕ್) ಸೋತು ಮರಣ ಹೊಂದಿದನು. ತೈಲಪನು ಮಾನ್ಯಖೇಟವನ್ನು ವಶಪಡಿಸಿಕೊಂಡು, ರಾಷ್ಟ್ರಕೂಟರ ಸಾಮ್ರಾಜ್ಯದ ಆಳ್ವಿಕೆಗೆ ಶಾಶ್ವತ ತೆರೆ ಎಳೆದನು. ಈ ವಿಜಯದ ನಂತರ, ಇಡೀ ಡೆಕನ್ ಪ್ರಸ್ಥಭೂಮಿಯ ರಾಜಕೀಯ ಶಕ್ತಿಯು ಕನ್ನಡಿಗ ರಾಷ್ಟ್ರಕೂಟರಿಂದ ಮತ್ತೊಬ್ಬ ಕನ್ನಡಿಗ ರಾಜವಂಶವಾದ ಚಾಲುಕ್ಯರಿಗೆ ಹಸ್ತಾಂತರಗೊಂಡಿತು.

ಕಲ್ಯಾಣ ಚಾಲುಕ್ಯರ ಸ್ಥಾಪನೆ ಮತ್ತು ವಿಸ್ತರಣೆ

ರಾಷ್ಟ್ರಕೂಟರನ್ನು ಸೋಲಿಸಿದ ನಂತರ, ತೈಲಪನು ಹಿಂದಿನ ಸಾಮ್ರಾಜ್ಯದ ಅವಶೇಷಗಳ ಮೇಲೆ ಹೊಸ, ಪ್ರಬಲ ಸಾಮ್ರಾಜ್ಯವನ್ನು ನಿರ್ಮಿಸಲು ಮುಂದಾದನು.

**1. ಹೊಸ ರಾಜಧಾನಿ - ಕಲ್ಯಾಣ:**

ತೈಲಪನು ತನ್ನ ಹೊಸ ಸಾಮ್ರಾಜ್ಯದ ರಾಜಧಾನಿಯನ್ನು ಹಿಂದಿನ ರಾಷ್ಟ್ರಕೂಟರ ರಾಜಧಾನಿ ಮಾನ್ಯಖೇಟದಿಂದ ಆಧುನಿಕ ಕರ್ನಾಟಕದ ಬೀದರ್ ಜಿಲ್ಲೆಯ ಕಲ್ಯಾಣಕ್ಕೆ (ಇಂದಿನ ಬಸವಕಲ್ಯಾಣ) ಸ್ಥಳಾಂತರಿಸಿದನು. ಈರಾಜಧಾನಿಯಿಂದಲೇ ಈ ವಂಶಕ್ಕೆ 'ಕಲ್ಯಾಣದ ಚಾಲುಕ್ಯರು' ಎಂಬ ಹೆಸರು ಬಂತು. ಆ ಮೂಲಕ ತೈಲಪನು ಕಲ್ಯಾಣವನ್ನು ದಕ್ಷಿಣ ಭಾರತದ ಹೊಸ ರಾಜಕೀಯ ಮತ್ತು ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಿದನು.

**2. ಉತ್ತರ ಮತ್ತು ದಕ್ಷಿಣದ ವಿಜಯಗಳು:**

* ಕರ್ನಾಟಕದಲ್ಲಿ ಸ್ಥಿರೀಕರಣ: ರಾಷ್ಟ್ರಕೂಟರ ಅನೇಕ ಸಾಮಂತ ರಾಜರುಗಳು ದಂಗೆ ಏಳಲು ಯತ್ನಿಸಿದರೂ, ತೈಲಪನು ಅವರನ್ನು ಕಠಿಣವಾಗಿ ಹತ್ತಿಕ್ಕಿ, ಇಡೀ ಕರ್ನಾಟಕ ಪ್ರದೇಶದ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿದನು.
* ಪರಮಾರರೊಂದಿಗಿನ ಹೋರಾಟ: ಉತ್ತರದ ವೈರಿಗಳಾದ ಮಾಳ್ವದ ಪರಮಾರ ದೊರೆ ಮುಂಜನು ರಾಷ್ಟ್ರಕೂಟರ ಪತನದ ಲಾಭ ಪಡೆಯಲು ಯತ್ನಿಸಿದಾಗ, ತೈಲಪನು ಆತನನ್ನು ಸೋಲಿಸಿ, ಬಂಧಿಸಿ, ಕೊನೆಗೆ ವಧಿಸಿದನು. ಈ ವಿಜಯವು ಇಡೀ ಮಧ್ಯ ಮತ್ತು ಡೆಕನ್ ಭಾಗದಲ್ಲಿ ತೈಲಪನ ಶೌರ್ಯವನ್ನು ಸಾರಿತು.
* ಚೋಳರ ನಿಯಂತ್ರಣ: ದಕ್ಷಿಣದಲ್ಲಿ ತಮಿಳುನಾಡಿನಲ್ಲಿ ಮತ್ತೆ ಪ್ರಬಲರಾಗಲು ಯತ್ನಿಸುತ್ತಿದ್ದ ಚೋಳರು (ಮುಖ್ಯವಾಗಿ ರಾಜರಾಜನ ಕಾಲದ ಆರಂಭ) ಮತ್ತು ಕೃಷ್ಣನು ಬಿಟ್ಟುಹೋಗಿದ್ದ ಇತರ ದಕ್ಷಿಣದ ರಾಜರನ್ನು ನಿಯಂತ್ರಣದಲ್ಲಿಡಲು ತೈಲಪನು ಯಶಸ್ವಿಯಾದನು.




ರೂಪ ಮಂಜುನಾಥ
ಹೊಳೆನರಸೀಪುರ


**3. ಬಿರುದುಗಳು:**

ತೈಲಪನು ತನ್ನ ವಿಜಯಗಳ ನಂತರ "ಆಹವಮಲ್ಲ" (ಯುದ್ಧದಲ್ಲಿ ಮಲ್ಲನಂತಹವನು) ಮತ್ತು "ಸಮರವೀರ" ಎಂಬಂತಹ ಯುದ್ಧವೀರ ಸೂಚಕ ಬಿರುದುಗಳನ್ನು ಧರಿಸಿದನು. ಈ ಬಿರುದುಗಳು ಆತನ ಆಡಳಿತದ ಬಹುಪಾಲು ಯುದ್ಧದಲ್ಲಿ ಕಳೆದಿರುವುದನ್ನು ಸೂಚಿಸುತ್ತವೆ.

ಕನ್ನಡ ನಾಡಿಗೆ ಕೊಡುಗೆ ಮತ್ತು ಪರಂಪರೆ

ತೈಲಪನು ತನ್ನ ಆಳ್ವಿಕೆಯ ಬಹುಪಾಲು ಸಮಯವನ್ನು ಯುದ್ಧಗಳಲ್ಲಿ ಕಳೆದರೂ, ಆತ ಸ್ಥಾಪಿಸಿದ ಸಾಮ್ರಾಜ್ಯವು ಕನ್ನಡ ನಾಡಿಗೆ ಅಮೂಲ್ಯ ಕೊಡುಗೆಗಳನ್ನು ನೀಡಿತು.

**1. ಕನ್ನಡ ಸಾಹಿತ್ಯದ ಪುನರುಜ್ಜೀವನಕ್ಕೆ ಬುನಾದಿ:**

ರಾಷ್ಟ್ರಕೂಟರ ಯುಗದಲ್ಲಿ ಬೆಳೆದ ಕನ್ನಡ ಸಾಹಿತ್ಯದ ಪರಂಪರೆಯನ್ನು ತೈಲಪನು ಮುಂದುವರೆಸಿದ. ಇವನ ಆಸ್ಥಾನದಲ್ಲಿ ಪ್ರಖ್ಯಾತ ಜೈನ ಕವಿ ರನ್ನನಿಗೆ ಆಶ್ರಯ ದೊರಕಿತ್ತು. ರನ್ನನು ಕನ್ನಡ ಸಾಹಿತ್ಯದ 'ರತ್ನತ್ರಯ'ರಲ್ಲಿ ಕೊನೆಯವನು ಮತ್ತು ಈತನು 'ಸಾಹಸಭೀಮವಿಜಯಂ' (ಗದಾ ಯುದ್ಧ) ಎಂಬ ತನ್ನ ಮಹಾಕಾವ್ಯವನ್ನು ತೈಲಪನ ಸಾಮಂತನಾದ ಇರಿವಬೆಡಂಗ ಸತ್ಯಾಶ್ರಯನಿಗೆ ಅರ್ಪಿಸಿದನು. ಈ ಮೂಲಕ ರನ್ನನು ಕನ್ನಡ ಸಾಹಿತ್ಯವನ್ನು ಮತ್ತಷ್ಟು ಶ್ರೀಮಂತಗೊಳಿಸಿದನು.

**2. ಆಡಳಿತಾತ್ಮಕ ಮತ್ತು ಸಾಂಸ್ಕೃತಿಕ ಸ್ಥಿರತೆ:**

ರಾಷ್ಟ್ರಕೂಟರ ಪತನದ ನಂತರ ಉಂಟಾಗಬಹುದಾಗಿದ್ದ ಅಸ್ತವ್ಯಸ್ತತೆಯನ್ನು ತಡೆದು, ಕನ್ನಡ ನಾಡಿಗೆ ಹೊಸ ಆಡಳಿತಾತ್ಮಕ ಸ್ಥಿರತೆಯನ್ನು ತೈಲಪನು ನೀಡಿದನು. ಆತನ ನೇತೃತ್ವದಲ್ಲಿ ಕಲ್ಯಾಣವು ಮುಂದಿನ ಎರಡು ಶತಮಾನಗಳ ಕಾಲ ರಾಜಕೀಯ ಮತ್ತು ಸಾಂಸ್ಕೃತಿಕ ಕೇಂದ್ರವಾಗಿ ಮೆರೆಯಿತು.

**3. ಪರಂಪರೆ:**

ತೈಲಪನು ಸ್ಥಾಪಿಸಿದ ಕಲ್ಯಾಣಿ ಚಾಲುಕ್ಯರ ರಾಜವಂಶವು ಇಮ್ಮಡಿ ಜಯಸಿಂಹ,


Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,